# ವಿಶ್ವ ವ್ಯಾಪಾರ ಸಂಸ್ಥೆ

## ಕೃಷಿ ಮತ್ತು ಆಹಾರಕ್ಕೆ ಸಂಬಂಧಿಸಿದ ವಿಷಯಗಳ ವರದಿ

# W T O


ಅಧ್ಯಕ್ಷರು

ಡಾ: ಪ್ರೇಮ್ ನಾಥ್

ಮಾಜಿ ಸಹಾಯಕ ಮಹಾನಿರ್ದೇಶಕರು

ಕೃಷಿ ಮತ್ತು ಆಹಾರ ಸಂಸ್ಥೆ (ಎಫ್.ಎ.ಒ.)



ಕೃಷಿ ಮತ್ತು ತೋಟಗಾರಿಕಾ ಸಚಿವಾಲಯ

ಕರ್ನಾಟಕ ಸರ್ಕಾರ, ಬೆಂಗಳೂರು

ಜನವರಿ 2001

# ವಿಷಯ ಸೂಚಿ


1. ಕಾರ್ಯನಿರ್ವಾಹಣಾ ಸಾರಾಂಶ 1

1.1 ಪ್ರಸ್ತಾವನೆ 1

1.2 ಕರಾರು ಉಲ್ಲೇಖಗಳು 1

1.3 ಸಾರಾಂಶ 3

1.3.1 ಕೃಷಿ ಒಡಂಬಡಿಕೆಯ ಮುಖ್ಯ ಅಂಶಗಳು 3

1.3.2 ರಾಷ್ಟ್ರ ಮಟ್ಟದಲ್ಲಿಯ ಪರಿಣಾಮಗಳು 6

1.3.3 ಕರ್ನಾಟಕ ರಾಜ್ಯದ ಕೃಷಿ ಮೇಲೆ ಪರಿಣಾಮಗಳು 6

1.3.4 ವಿಶ್ವವ್ಯಾಪಾರ ಸಂಘಟನೆಯ ಆಡಳಿತ ಕ್ರಮದಿಂದಾಗುವ ಪರಿಣಾಮಗಳು 7

1.3.5 ಕರ್ನಾಟಕದ ಅಭಿವೃದ್ಧಿಗೆ ಅಡಚಣೆಗಳು 8

1.3.6 ರಫ್ತುದಾರರ ಪ್ರಮುಖ ಸಮಸ್ಯೆಗಳು 9

1.3.7 ಪರಿಶೀಲನಾ ಪ್ರಸ್ತಾವನೆಗಳು 10

2. ಪೀಠಿಕೆ 15

2.1 ವಿಶ್ವವ್ಯಾಪಾರ ಸಂಘಟನೆಯ ಬಗ್ಗೆ 15

2.2 ಸುಂಕ ಮತ್ತು ವ್ಯಾಪಾರದ ಸಾರ್ವತಿಕ ಒಪ್ಪಂದ ಮತ್ತು ವಿಶ್ವವ್ಯಾಪಾರ ಸಂಘಟನೆಯ ಒಂದು ಪಕ್ಷಿ ನೋಟ 16

2.3 ವಿಶ್ವವ್ಯಾಪಾರ ಸಂಘಟನೆಯಲ್ಲಿ ವ್ಯಾಪಾರ ವ್ಯವಸ್ಥೆಯ ಮೂಲ ತತ್ವಗಳು 18

2.4 ಗ್ಯಾಟ್ ಮತ್ತು ವಿಶ್ವವ್ಯಾಪಾರ ಸಂಘಟನೆಗಳ ನಡುವಿನ ಮುಖ್ಯ ವ್ಯತ್ಯಾಸ 20

2.5 ವಿಶ್ವವ್ಯಾಪಾರ ಸಂಘಟನೆಯು ನಿರ್ವಹಿಸುವ ಕೆಲವು ಪ್ರಮುಖ ವಿಷಯಗಳು 20

2.6 ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ವಿಶೇಷ ಸವಲತ್ತುಗಳು 23

2.7 ಕನಿಷ್ಠ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ವಿಶೇಷ ಗಮನ 23

2.8 ವಿಶ್ವವ್ಯಾಪಾರ ಸಂಘಟನೆಯಿಂದ ಹೊರಬರುವುದು 24

3. ಕರ್ನಾಟಕ ಮತ್ತು ಭಾರತದಲ್ಲಿ ಕೃಷಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ವ್ಯಾಪಾರ : ಒಂದು ಪಕ್ಷಿ ನೋಟ 25

3.1 ಭಾರತದ ಅಂತಾರಾಷ್ಟ್ರೀಯ ವ್ಯಾಪಾರ ನೀತಿ 25

3.2 ಭಾರತ ಮತ್ತು ಕರ್ನಾಟಕದಲ್ಲಿ ಕೃಷಿ ವ್ಯಾಪಾರ ಕಾರ್ಯನಿರ್ವಹಣೆ 27

| | | |
|---|---|---|
| 4. | ರಫ್ತು ಸಂಸ್ಕರಣ ವಲಯಗಳ ರಚನೆ | 29 |
| 4.1 | ರಫ್ತು ಸಂಸ್ಕರಣ ವಲಯಗಳೆಂದರೇನು? | 29 |
| 4.2 | ರಫ್ತು ಸಂಸ್ಕರಣ ವಲಯಗಳ ಮುಖ್ಯ ಗುರಿಗಳು | 29 |
| 4.3 | ರಫ್ತು ಸಂಸ್ಕರಣ ವಲಯಗಳ ಸಾಮಾನ್ಯ ಲಕ್ಷಣಗಳು | 29 |
| 4.4 | ರಫ್ತು ಸಂಸ್ಕರಣ ವಲಯ ಮತ್ತು ರಫ್ತು ಪರಿಷ್ಕರಣ ಘಟಕಗಳ ಲಕ್ಷಣ ಮತ್ತು ಗುರಿಗಳು | 30 |
| 4.5 | ರಫ್ತು ಪರಿಷ್ಕರಣ ಘಟಕದ ಕೆಲವೊಂದು ಅನುಭವಗಳು | 30 |
| 4.6 | ಕರ್ನಾಟಕದಲ್ಲಿ ರಫ್ತು ಸಂಸ್ಕರಣ ವಲಯಗಳ ರಚನೆ | 31 |
| 4.7 | ರಾಜ್ಯದ ರಫ್ತು ಕ್ಷೇತ್ರದ ಸಾಮರ್ಥ್ಯ ಮತ್ತು ಅಸಾಮರ್ಥ್ಯ | 31 |
| 4.8 | ರಫ್ತು ಪರಿಷ್ಕರಣ ವಲಯಗಳ ರಚನೆಯ ಸ್ಥಳಗಳು | 32 |
| 5. | ಪ್ರಸ್ತಾವನೆಗಳು | 38 |
| 5.1 | ತುರ್ತಾಗಿ ಕೈಗೊಳ್ಳಬೇಕಾದ ಕ್ರಮಗಳು | 38 |
| 5.2 | ವಿಶೇಷ ಅವಶ್ಯಕ ಅಧ್ಯಯನ ವಲಯಗಳು | 39 |
| 5.3 | ಪರಿಶೀಲನೆಗೆ ನಿರ್ದಿಷ್ಟ ವಿಷಯಗಳು | 40 |

# ಭಾಗ - 1

## ಕಾರ್ಯನಿರ್ವಾಹಣಾ ಸಾರಾಂಶ (Executive Summary)

### 1.1 ಪ್ರಸ್ತಾವನೆ (Preamble)

ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಎಡಿ:389:ಹೆಚ್‌ಜಿಎಂ:2000 ಬೆಂಗಳೂರು ಪ್ರಕಾರ ದಿನಾಂಕ 25.8.2000 ರಂದು ಡಾ: ಪ್ರೇಮನಾಥ್, ನಿವೃತ ಸಹಾಯಕ ಮಹಾ ನಿರ್ದೇಶಕರು, ಆಹಾರ ಹಾಗೂ ಕೃಷಿ ಸಂಸ್ಥೆ (FAO), ಅವರ ಅಧ್ಯಕ್ಷತೆಯಲ್ಲಿ ವಿಶ್ವ ವ್ಯಾಪಾರ ಸಂಘಟನ ಸೆಲ್ (WTO Cell) ಅನ್ನು ರಚಿಸಲಾಯಿತು. ಇದರ ಮುಖ್ಯ ಕರಾರು ಉಲ್ಲೇಖಗಳು ಈ ರೀತಿ ಇವೆ.

### 1.2 ಕರಾರು ಉಲ್ಲೇಖಗಳು (Terms of Reference)

i. ವಿಶ್ವ ವ್ಯಾಪಾರ ಸಂಘಟನೆಯ ಕರಾರಿನ ವಿವಿಧ ಅವಕಾಶಗಳನ್ನು ಪರಿಗಣಿಸಿ, ಕರ್ನಾಟಕ ರಾಜ್ಯದ ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರಗಳ ಮೇಲಿನ ಪರಿಣಾಮಗಳನ್ನು ಪರಿಶೀಲಿಸುವುದು ಮತ್ತು ವಿಶ್ವ ವ್ಯಾಪಾರ ಸಂಘಟನೆಯ ಆಡಳಿತ ಕ್ರಮದಿಂದ ರಾಜ್ಯದ ಕೃಷಿ ಮತ್ತು ತೋಟಗಾರಿಕಾ ವಲಯಗಳಲ್ಲಿ ಹೆಚ್ಚಿನ ಲಾಭ ಪಡೆಯಲು ಸಹಾಯಕವಾಗುವ ಯೋಜನೆ ಮತ್ತು ಕಾರ್ಯಸೂಚಿಯನ್ನು ತಿಳಿಸುವುದು.

ii. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ರಫ್ತುಗಳಿಗಿರುವ ಅಡಚಣೆ ಮತ್ತು ನಿರ್ಬಂಧಗಳನ್ನು ಗುರುತಿಸಿ, ಅವುಗಳ ನಿವಾರಣೆಗೆ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳನ್ನ ಇಲಾಖೆಗಳ ಗಮನಕ್ಕೆ ತರುವುದು.

iii. ವಿಶ್ವ ವ್ಯಾಪಾರ ಸಂಘಟನೆಯ ಇತರ ವಿಷಯಗಳು, ರೈತರ ತರಬೇತಿ ಮತ್ತು ವಿಸ್ತರಣೆಯ ವಿಷಯಗಳ ಪ್ರಸ್ತಾವನೆ.

iv. ಸೆಲ್ ಇಚ್ಛಿಸಿದ ಇನ್ನಾವುದೇ ಅವಶ್ಯಕ ಮತ್ತು ಸಮಂಜಸ ವಿಷಯಗಳು.

ದಿನಾಂಕ 10.9.2000 ರಂದು ಲಾಲ್‌ಭಾಗ್‌ನಲ್ಲಿ ಡಾ: ಪ್ರೇಮನಾಥ್ ರವರ ಅಧ್ಯಕ್ಷತೆಯಲ್ಲಿ ಸೆಲ್‌ನ ಸದಸ್ಯರ ಪ್ರಥಮ ಸಭೆ ಸೇರಿ ಈ ಕೆಳಗಿನ ಅಂಶಗಳನ್ನು ಮಧ್ಯಂತರ ವರದಿಯಲ್ಲಿ ಸೇರಿಸಬೇಕೆಂದು ನಿರ್ಣಯಿಸಲಾಯಿತು.

### ಅ. ಹಿನ್ನೆಲೆ (Background)

- ಕೃಷಿ ಕ್ಷೇತ್ರದಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಕರಾರು.
- ಪ್ರಸ್ತಾವನೆಗಳ ಮುಖ್ಯಾಂಶಗಳು.

**ಆ. ಈ ಕಾರರಿನ ತೊಡಕುಗಳು (Implications)**

- ರಾಷ್ಟ್ರ ಮಟ್ಟದ ಮುಖ್ಯ ಅಂಶಗಳು ಮತ್ತು ಪರಿಣಾಮಗಳ ಸಾರಾಂಶ.
- ಕರ್ನಾಟಕ ರಾಜ್ಯ ಕೃಷಿ ಹಾಗೂ ತೋಟಗಾರಿಕೆಗಳ ಮೇಲಿನ ಪರಿಣಾಮ.

**ಇ. ಕರ್ನಾಟಕ ರಾಜ್ಯದಿಂದ ರಫ್ತಿಗೆ ಇರುವ ಅಡಚಣೆಗಳನ್ನು ಗುರುತಿಸುವುದು.**

**ಈ. ಕರ್ನಾಟಕ ರಾಜ್ಯ ಸರ್ಕಾರದ ಪ್ರಸ್ತಾವನೆಗಳು:**

- ನೀತಿ ನಿರ್ಣಯಗಳ ಚರ್ಚೆಯಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಜೊತೆಯಲ್ಲಿ ಭಾಗವಹಿಸುವುದು.
- ರಾಜ್ಯದ ನಿರ್ದಿಷ್ಟ ಆದ್ಯತಾ ವಸ್ತುಗಳಿಗೆ ಅವಶ್ಯಕ ಗಮನ ನೀಡುವುದು.
- ರಫ್ತು ಉತ್ತೇಜನಕ್ಕೆ ಕೇಂದ್ರದ ನಿಧಿಯಲ್ಲಿ ಪಾಲು.
- ಕರ್ನಾಟಕದಲ್ಲಿ ರಫ್ತು ಪರಿಷ್ಕರಣ ವಲಯಗಳ (EPZs) ಸ್ಥಾಪನೆ.
- ಹಸಿರು ಪೆಟ್ಟಿಗೆ (Geen Box) ಕ್ರಮಗಳಿಂದ ಅನುಕೂಲತೆ ಪಡೆಯುವುದು.
- ಪೈಟೋಸ್ಯಾನಿಟರಿ (Phytosanitary) ಕ್ರಮಗಳಿಗೆ ವಿಶೇಷ ರಕ್ಷಣೆ ಒದಗಿಸುವುದು.
- ಬದ್ಧ ತೆರಿಗೆ (Bound Duty) ಗಳನ್ನು ಉಪಹೋಗಿಸದಿರುವುದು.

**ಉ. ವಿಶ್ವ ವ್ಯಾಪಾರ ಸಂಘಟನ ಸೆಲ್‌ನ ಕಾರ್ಯಚಟುವಟಿಗೆಗಳು:**

- ಲಾಲ್‌ಬಾಗ್‌ನಲ್ಲಿರುವ ತೋಟಗಾರಿಕಾ ನಿರ್ದೇಶಕರವರ ಕಛೇರಿಯಲ್ಲಿ ಸೆಲ್‌ನ ಸದಸ್ಯರ ನಾಲ್ಕು ಸಭೆಗಳನ್ನು ಡಾ: ಪ್ರೇಮ್‌ನಾಥ್ ರವರ ಅಧ್ಯಕ್ಷತೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು.
- ದಿನಾಂಕ 11.09.2000 ದಂದು ನಡೆದ ಪ್ರಥಮ ಸಭೆಯಲ್ಲಿ ಮಧ್ಯಂತರ ವರದಿಯನ್ನು ಸಿದ್ಧಪಡಿಸಲು ಈ ಕೆಳಗೆ ಹೆಸರಿಸಿದ ಮಹನೀಯರನ್ನೊಳಗೊಂಡ ಕೋರ್ ಗ್ರೂಪ್‌ನ್ನು ರಚಿಸಲಾಗಿತ್ತು.

| | | |
|---|---|---|
| ಪ್ರೊ. ಆರ್.ಎಸ್. ದೇಶಪಾಂಡೆ | : | ಅಧ್ಯಕ್ಷರು |
| ಶ್ರೀ ಉಪೇಂದ್ರ ತ್ರಿಪಾಟಿ | : | ಸದಸ್ಯರು |
| ಡಾ: ಎಸ್. ಸುಬ್ರಮಣ್ಯ | : | ಸದಸ್ಯರು |
| ಶ್ರೀ ಪಿ.ಬಿ. ರಾಮಮೂರ್ತಿ | : | ಸದಸ್ಯರು |
| ಶ್ರೀ ಬಿ.ಎ. ಚನ್ನಪ್ಪಗೌಡ | : | ಸದಸ್ಯರು |

ಮಧ್ಯಂತರ ವರದಿಯನ್ನು ಸಿದ್ಧಪಡಿಸಲು ಡಾ: ಪ್ರೇಮನಾಥಕ್ಷ ರವರು ನೀಡಿದ ರೂಪರೇಷೆಗಳನ್ನು ಕೋರ್ ಗ್ರೂಪ್ ಅಂಗೀಕರಿಸಿತು.

- ಕರಡು ಮಧ್ಯಂತರ ವರದಿಯನ್ನು ಸಿದ್ದಪಡಿಸುವಾಗ ಕೋರ್ ಗ್ರೂಪ್ ಸದಸ್ಯರು ಡಾ: ಪ್ರೇಮ್‌ನಾಥ್ ರವರ ಅಧ್ಯಕ್ಷತೆಯಲ್ಲಿ (ಅವರ ಮನೆಯಲ್ಲಿ) ಮೂರು ಬಾರಿ ಸಭೆ ನಡೆಸಲಾಯಿತು.
- ಪ್ರೊ. ಆರ್.ಎಸ್. ದೇಶಪಾಂಡೆ ಯವರ ಮುಂದಾಳತ್ವದಲ್ಲಿ ಸಿದ್ಧಪಡಿಸಿದ ಮೊದಲನೆ ಕರಡು ಮಧ್ಯಂತರ ವರದಿಯನ್ನು ದಿನಾಂಕ 17.10.2000 ದಂದು ನಡೆಸಿದ ಸೆಲ್‌ನ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತ್ತು. ಅದೇ ಸಭಯಲ್ಲಿ ಕರಡು ಮಧ್ಯಂತರ ವರದಿಯ ಬಗ್ಗೆ ವಿಮರ್ಶಿಸಿ ಅಭಿಪ್ರಾಯ ಪಡೆಯಲು ಸಂಬಂಧ ಪಟ್ಟವರನ್ನು ಆಹ್ವಾನಿಸಿ ಕಾರ್ಯಗಾರವನ್ನು ನಡೆಸಲು ತೀರ್ಮಾನಿಸಲಾಯಿತು.
- ವಿಶ್ವ ವ್ಯಾಪಾರ ಸಂಘಟನ ಸೆಲ್ ಸಿದ್ಧಪಡಿಸಿದ ಕರಡು ಮಧ್ಯಂತರ ವರದಿಯನ್ನು ದಿನಾಂಕ 10.11.2000 ದಂದು ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯ ಅಧ್ಯಯನ ಸಂಸ್ಥೆಯಲ್ಲಿ ನಡೆಸಿದ ವಿಶ್ವ ವ್ಯಾಪಾರ ಸಂಘಟನೆ ಮತ್ತು ಕೃಷಿ ವಿಷಯಗಳ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು.
- ಈ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯದ ಕೃಷಿ ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ ಮತ್ತು ರಾಜ್ಯ ತೋಟಗಾರಿಕಾ ಸಚಿವರಾದ ಶ್ರೀ ಅಲ್ಲಮ್ ವೀರಭದ್ರಪ್ಪ ಅವರುಗಳು ಭಾಗವಹಿಸಿದ್ದರು. ಈ ಕಾರ್ಯಾಗಾರದಲ್ಲಿ ಅನೇಕ ತಜ್ಞರು, ಆಡಳಿತಗಾರರು, ರಪ್ತುದಾರರು ಮತ್ತು ರೈತ ಪ್ರತಿನಿಧಿಗಳು ಭಾಗವಹಿಸಿದ್ದರು.
- ನಂತರ ದಿನಾಂಕ 30.11.2000 ದಂದು ಡಾ: ಪ್ರೇಮ್‌ನಾಥ್ ರವರ ಅಧ್ಯಕ್ಷತೆಯಲ್ಲಿ ತೋಟಗಾರಿಕಾ ನಿರ್ದೇಶಕರವರ ಕಛೇರಿಯಲ್ಲಿ ಸೆಲ್‌ನ ಸದಸ್ಯರು ಸಭೆ ಸೇರಿ ಕಾರ್ಯಾಗಾರದ ನಡಾವಳಿಗಳನ್ನು ಚರ್ಚಿಸಿ ಪರಿಷ್ಕರಿಸಿದ ಮಧ್ಯಂತರ ವರದಿಯನ್ನು ಮಂಡಿಸಲು ತೀರ್ಮಾನಿಸಲಾಯಿತು.
- ಕಾರ್ಯಾಗಾರದಲ್ಲಿ ಬಂದ ಸಲಹೆಗಳನ್ನು ಮಧ್ಯಂತರ ವರದಿಗೆ ಸೇರಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ.

## 1.3 ಸಾರಂಶ (Summary)

ಪ್ರಸ್ತುತ ವರದಿಯನ್ನು ಪ್ರಮುಖವಾಗಿ 7 ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪ್ರಾರಂಭದಲ್ಲಿ ಈ ವರದಿಯು ಹಿನ್ನಲೆ ಮತ್ತು ಕೃಷಿಯ ಒಡಂಬಡಿಕೆಗಳ ಮುಖ್ಯ ಅಂಶಗಳನ್ನು ವಿವರಿಸುತ್ತದೆ. ಈ ಭಾಗವು ವಿಶ್ವ ವ್ಯಾಪಾರ ಸಂಘಟನೆಯ ಅವಕಾಶಗಳನ್ನು ಮತ್ತು ಅವಶ್ಯಕತೆಗಳನ್ನು ಎತ್ತಿ ತೋರಿಸುವುದಲ್ಲದೆ ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರದಲ್ಲಿಯ ಮುಖ್ಯ ವಿಷಯಗಳಿಗೆ ಒತ್ತು ಕೊಡುತ್ತದೆ.

### 1.3.1 ಕೃಷಿಯ ಒಡಂಬಡಿಕೆಯ (AoA) ಮುಖ್ಯ ಅಂಶಗಳು:

- ಡಬ್ಲ್ಯೂ.ಟಿ.ಒ. ದಲ್ಲಿ ಕೃಷಿಯ ಒಡಂಬಡಿಕೆಯು ಪ್ರಮುಖವಾದ ಐದು ಅಂಶಗಳನ್ನು ಹೊಂದಿದೆ. ಅವುಗಳೆಂದರೆ ಮಾರುಕಟ್ಟೆಯ ಪ್ರವೇಶ, ಆಂತರಿಕ ನೆರವು, ರಪ್ತಿಗೆ ರಿಯಾಯಿತಿ, ವ್ಯಾಪಾರ ಸಂಬಂಧಿ ಬಂಡವಾಳ ಹೂಡಿಕೆ (TRIMs), ಹಾಗೂ ವ್ಯಾಪಾರ ಸಂಬಂಧಿ ಬೌದ್ಧಿಕ ಆಸ್ತಿಯ ಹಕ್ಕುಗಳು (TRIPs).
- ಸುಂಕ ರಹಿತ ಅಡೆತಡೆಗಳಾದ ಪರಿಮಾಣಾತ್ಮಕ ನಿರ್ಬಂಧಗಳನ್ನು ಸುಂಕ ರೂಪದಲ್ಲಿ ಬದಲಾಯಿಸಿ ಸಮಾನ ರೀತಿಯ ಸಂರಕ್ಷಣೆ ನೀಡುವುದು.
- ಅಭಿವೃದ್ಧಿ ಹೊಂದಿದ ದೇಶಗಳು ಸರಾಸರಿ ಸಹಾಯಕ ಕ್ರಮಗಳ (Aggregate Measures of Support) ನ್ನು 6 ವರ್ಷಗಳಲ್ಲಿ ಶೇ 20 ರಷ್ಟು ಕಡಿಮೆ ಮಾಡುವುದು ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳು 10 ವರ್ಷಗಳಲ್ಲಿ ಶೇ 13 ರಷ್ಟು ಕಡಿಮೆ ಮಾಡುವುದು. ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳನ್ನು ಇದರಿಂದ ಮುಕ್ತಗೊಳಿಸುವುದು.
- ಕೃಷಿ ಒಡಂಬಡಿಕೆಯ ಸಹಾಯಧನದ ಪ್ರಕಾರಗಳನ್ನು 3 ಭಾಗಗಳಾಗಿ ವಿಂಗಡಿಸಲಾಗಿದೆ, ಅವುಗಳನ್ನು ನಿಷೇಧಿತ, ಕಾರ್ಯಪ್ರತ ಮತ್ತು ಕಾರ್ಯನಿಷೇಧಿತ ಎಂದು ವ್ಯಾಖ್ಯಾನಿಸಿದೆ.

i. ನಿಷೇಧಿತ ಸಹಾಯಧನಗಳು (Prohibited Subsidies) : ಈ ಸಹಾಯಧನಗಳು ವ್ಯಾಪಾರದ ಮೇಲೆ ನೇರ ಪ್ರಭಾವ ಹೊಂದಿವೆ.

ii. ಕಾರ್ಯಪ್ರತ ಸಹಾಯಧನಗಳು (Actionable Subsidies) : ಈ ಸಹಾಯಧನಗಳು ನಿರೀಕ್ಷಿತ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ.

iii. ಕಾರ್ಯನಿಷೇಧಿತ ಸಹಾಯಧನಗಳು (Non-actionable Subsidies) : ಇವುಗಳು ಕೈಗಾರಿಕಾ ಸಂಶೋಧನೆಗಳಿಗೆ ಮತ್ತು ಸ್ಪರ್ಧಾಪೂರ್ವ ಅಭಿವೃದ್ಧಿಗಳಿಗೆ ಸಂಬಂಧಿಸಿದ ನಿರ್ದಿಷ್ಟ ಹಾಗೂ ಅನಿರ್ದಿಷ್ಟ ಉತ್ಪನ್ನಗಳಿಗೆ ಸಂಬಂಧಿಸಿದೆ. (ಉತ್ಪನ್ನ ಸೀಮಿತ ಅಥವಾ ಅಸಿಮಿತಗಳಿಗೆ ಸಂಬಂಧಿಸಿದ್ದು ಕೈಗಾರಿಕಾ ಸಂಶೋಧನೆಗಳಿಗೆ ಮತ್ತು ಸ್ಪರ್ಧಾಪೂರ್ವ ಅಭಿವೃದ್ಧಿಗಳಿಗೆ ಸಹಾಯ ಮಾಡುತ್ತವೆ). ಅಲ್ಲದೆ ಇವುಗಳು ಅವಕಾಶವಂಚಿತ ಪ್ರದೇಶಗಳನ್ನು ಅಭಿವೃದ್ಧಿ ಪಥದತ್ತ ತರುವ ಸಹಾಯಧನಗಳನ್ನು ಒಳಗೊಂಡಿವೆ.

- ಕೃಷಿ ಸಹಾಯಧನಗಳ ಕುರಿತ ಪ್ರತಿಭಟನೆ ಮತ್ತು ವಿವಾದಗಳನ್ನು ಕಡಿಮೆ ಮಾಡಲು ಶಾಂತಿ ಕ್ರಮಗಳನ್ನು ಒಳಗೊಂಡಿದೆ.
- ಆಂತರಿಕ ಮಾರುಕಟ್ಟೆಗಳಲ್ಲಿ ತೀವ್ರ ಬೆಲೆ ಕುಸಿತ ಮತ್ತು ಅಧಿಕ ಆಮದಿನಿಂದ ರೈತರಿಗೆ ಆಗುವ ಹಾನಿಗಳ ಬಗ್ಗೆ ವಿಶೇಷ ರಕ್ಷಣಾ ಕ್ರಮಗಳನ್ನು ಒದಗಿಸುತ್ತದೆ.

- ವ್ಯಾಪಾರಕ್ಕೆ ಸಂಬಂಧಿಸಿದ ಹೂಡಿಕೆ ಕ್ರಮಗಳ (TRIMs) ಕುರಿತ ಒಡಂಬಡಿಕೆ. ಇದು ಕೃತಕ ಲಾಭಕ್ಕಾಗಿ ಇತರ ದೇಶಗಳು ಬಂಡವಾಳ ಹೂಡುವುದನ್ನು ಇತರ ದೇಶಗಳ ವ್ಯಾಪಾರ ಆಸಕ್ತಿಗಳಿಗೆ ಧಕ್ಕೆಯಾಗುವುದನ್ನು ತಡೆಯಲು ಉದ್ದೇಶಿಸಿದೆ (ಆರ್ಟಿಕಲ್ III, GATT).
- ಅಗ್ಗದ ಬೆಲೆಗೆ ಮಾರಾಟ ಮಾಡುವ ನಿಷೇದದ ಕರಾರು. ಯಾವುದೇ ದೇಶವು ತನ್ನ ಉತ್ಪಾದನೆಗಳನ್ನು ಬೇರೆ ದೇಶದಲ್ಲಿ ವ್ಯಾಪಾರ ಕ್ರಿಯೆಯನ್ನು ಹೆಚ್ಚಿಸಲು ಕಡಿಮೆ ಬೆಲೆಗೆ ಮಾರಾಟ ಮಾಡುವುದಕ್ಕೆ ಅವಕಾಶವಿರುವುದಿಲ್ಲ.
- ಸುಂಕ ಮೌಲ್ಯ ಕರಾರು : ಇದು ಸುಂಕ ಆಡಳಿತ ಮಂಡಳಿಗೆ ಯಾವುದೇ ಆಮದು ವಸ್ತುಗಳ ಮೌಲ್ಯದ ಬಗ್ಗ ಅನುಮಾನ ಬಂದಾಗ ಅದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಹಕ್ಕನ್ನು ನೀಡುತ್ತದೆ.
- ಉತ್ಪನ್ನಗಳನ್ನು ರವಾನೆ ಮಾಡುವುದಕ್ಕೆ ಮೊದಲು ತಪಾಸಣೆಯ ಬಗ್ಗೆ ಕರಾರು : ವಸ್ತುಗಳನ್ನು ಹಡಗುಗಳ ಮೂಲಕ ಸಾಗಿಸುವುದಕ್ಕೆ ಮುಂಚೆ ತನಿಖೆ ಮಾಡುವ ನಿಟ್ಟಿನಲ್ಲಿ ಒಂದು ಮರುವಿಮರ್ಶೆಗೆ ಅವಕಾಶವಿದೆ.
- ಮುಂಜಾಗ್ರತಾ ರಕ್ಷಣೆಯ ಕರಾರು : ಇದು, ಸದಸ್ಯ ರಾಷ್ಟ್ರಗಳಿಗೆ ತಮ್ಮ ಆಂತರಿಕ ಉದ್ಯಮಗಳ ಮೇಲೆ ಆಮದುಗಳಿಂದ ಆಗಬಹುದಾದ ತೀವ್ರ ಅಘಾತಗಳುಂಟಾಗುವ ನಿರ್ದಿಷ್ಟ ಸಂದರ್ಭಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಅವಕಾಶ ನೀಡುತ್ತದೆ. ಆದರೆ ಈ ಸುರಕ್ಷತಾ ಕ್ರಮಗಳು ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಆಮದಾಗುವ ಉತ್ಪನ್ನಗಳಿಗೆ, ಈ ಉತ್ಪನ್ನಗಳ ಆಮದು ಪ್ರಮಾಣ ಶೇ 3 ಕ್ಕಿಂತ ಹೆಚ್ಚಾಗಿರದಿದಲ್ಲಿ ಅನ್ವಹಿಸದು. ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ನಿರ್ದಿಷ್ಟ ಉತ್ಪನ್ನಗಳ ಪ್ರಮಾಣ ಶೇ 3 ಕ್ಕಿಂತ ಕಡಿಮೆ ಇದ್ದರೆ ಹಾಗೂ ಒಟ್ಟು ಆಮದುಗಳ ಶೇ 9 ಕ್ಕಿಂತ ಕಡಿಮೆ ಪ್ರಮಾಣದಲ್ಲಿದ್ದರೆ ಮಾತ್ರ ಈ ಸುರಕ್ಷತಾ ಕ್ರಮಗಳು ಅನ್ವಹಿಸುವುದಿಲ್ಲ.
- ಬೌದ್ಧಿಕ ಆಸ್ತಿಯ ಹಕ್ಕುಗಳನ್ನು ಜಾರಿಗೆ ತರುವುದು ಹಾಗೂ ಅವುಗಳ ರಕ್ಷಣೆಯ ವಿಷಯದಲ್ಲಿ ವಿವಿಧ ಪ್ರಮಾಣಗಳಿರುವ (standards) ಸಾಧ್ಯತೆಯನ್ನು ಬೌದ್ಧಿಕ ಆಸ್ತಿ ಹಕ್ಕು ಕುರಿತ ಒಪ್ಪಂದವು ಗಮನಿಸುತ್ತದೆ. ಅಂತರ್ದೇಶೀಯ ಮಟ್ಟದಲ್ಲಿ ಇಂತಹ ನಿಯಂತ್ರಣಗಳ ವಿಷಯದಲ್ಲಿ ಪ್ರಮಾಣೀಕರಣವಾಗುವುದು ಅವಶ್ಯಕವಾಗಿದೆ.

**ನಾವು ಎದುರಿಸಬೇಕಾಗಿರುವ ಮಹತ್ವದ ಅಂಶಗಳು**

- ಆಂತರಿಕ ಮಾರುಕಟ್ಟೆಯಲ್ಲಿ ಕನಿಷ್ಠ ಶೇ 3 ರಷ್ಟು ಮಾರುಕಟ್ಟೆಯ ಪ್ರವೇಶ ಒದಗಿಸುವುದು.
- ಪ್ರಮಾಣ ನಿರ್ಬಂಧದ ಕಡಿತ ಹಾಗೂ ಸುಂಕನಿರ್ಧಾರ ಬದ್ಧ (bounded) ಸುಂಕದರದ ಬಳಕೆ.
- ಸರಾಸರಿ ಉತ್ತೇಜನ ಕ್ರಮಗಳು ಶೇ 1.33 ಗಿಂತ ಕಡಿಮೆ.
- ಕಾರ್ಯಪ್ರತ ಸಹಾಯಧನಗಳನ್ನು ತೆಗೆದು ಹಾಕುವುದು.
- ಸ್ಯಾನಿಟರಿ ಮತ್ತು ಪೈಟೋಸ್ಯಾನಿಟರಿಗಳ ಗುಣಮಟ್ಟದ ಪ್ರಮಾಣೀಕರಣ
- ಸೇವೆಗಳು ಮತ್ತು ಮಾನವ ಬಂಡವಾಳಗಳ ವ್ಯಾಪಾರೀಕರಣ
- ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ ಪ್ರಮಾಣೀಕರಣ
- ಪರಿಸರದ ಸಂರಕ್ಷಣೆ ಮತ್ತು ಕಲ್ಯಾಣಕ್ಕೆ ಹಾನಿವುಂಟು ಮಾಡುವ ತಂತ್ರಜ್ಞಾನ ಪ್ರವೇಶದ ವಿರುದ್ಧ ಕ್ರಮ.

ಇವುಗಳ ಜೊತೆಗೆ ದೇಶೀಯ ಹಾಗೂ ಕರ್ನಾಟಕ ರಾಜಯ ಮಟ್ಟದಲ್ಲಿ ಕೃ ೀಇ ವಲಯದ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ಇಲ್ಲಿ ಲಕ್ಷಿಸಲಾಗಿದೆ. ಪರಿಣಾಮಗಳ ವಿಶ್ಲೇಷಣೆಯ ಮುಖ್ಯಾಂಶಗಳು ಈ ಕೆಳಗಿನಂತಿವೆ. ವಿಶ್ವ ವ್ಯಾಪಾರ ಸಂಘಟನೆಯ ನಿಯಮಗಳು ರಾಷ್ಟ್ರ ಮತ್ತು ಕರ್ನಾಟಕ ರಾಜ್ಯ ಮಟ್ಟದಲ್ಲಿ ಉಂಟುಮಾಡಬಹುದಾದ ಪರಿಣಾಮಗಳನ್ನು ಪ್ರತ್ಯೇಕಿಸಿ ನೋಡುವುದು ಕಷ್ಟ ಅವು ಪರಸ್ಪರ ಒಂದರ ಜೊತೆ ಇನ್ನೊಂದು ಬೆರೆತಿದ್ದರೂ ಈ ಕೆಳಗಿನಂತೆ ಅವುಗಳನ್ನು ವಿವರಿಸಲಾಗಿದೆ.

### 1.3.2 ರಾಷ್ಟ್ರ ಮಟ್ಟದಲ್ಲಿಯ ಪರಿಣಾಮಗಳು (Implications at Naitonal Level)

- ಸರಾಸರಿ ಸಹಾಯಕ ಕ್ರಮಗಳಿಗೆ (AMS) ಸಂಬಂಧಿಸಿದಂತೆ ಭಾರತದಲ್ಲಿ ಸಹಾಯಧನ ಕಡಿತದ ಬಗ್ಗೆ ತಕ್ಷಣವೆ ಯೋಚಿಸಬೇಕಾಗಿಲ್ಲ, ಏಕೆಂದರೆ AMS ನ ಆವಶ್ಯಕತೆಗಿಂತ ನಮ್ಮ ದೇಶ ದೂರದಲ್ಲಿದೆ. ಇದಕ್ಕೆ ಬದಲು 'ಹಸಿರು ಪಟ್ಟಿಗೆ' ಯ ಅನುಕೂಲತೆ ಪಡೆಯಲಯ ಬಹುಮುಖ್ಯ ಕ್ಷೇತ್ರ (Sunrise Sector) ಮತ್ತು ವ್ಯಾಪಾರದ ಮೂಲ ಸೌಕರ್ಯಗಳ ನಿರ್ಮಾಣದ ಕಡೆಗೆ ಸಹಾಯಧನವನ್ನು ನಿರ್ದೇಶಿಸಬಹುದು, ಅಲ್ಲದೆ ಸಂಪನ್ಮೂಲದ ಕೊರತೆಯಿರುವ ಹಿಂದುಳಿದ ಪ್ರದೇಶಗಳಿಗೆ ಸಹಾಯಧನ ನೀಡಿ ರಫ್ತಿನ ಉತ್ಪನ್ನಗಳನ್ನು ಹೆಚ್ಚಿಸಬಹುದು.
- ವ್ಯಾಪಾರಿ ಕ್ಷೇತ್ರವನ್ನು ನಿಯಂತ್ರಿಸಲು ಸುಂಕ ನೀತಿಯ ಅಡಿಯಲ್ಲಿ ರೂಪಿಸಲಾದ ಸುಂಕ ದರ ಹಾಗೂ ರಿಯಾಯಿತಿಯ ಬಗ್ಗೆ ಈಗ ಗಂಭೀರ ಗಮನ ಕೊಡುವ ಆವಶ್ಯಕತೆ ಇದೆ.
- ಭಾರತವು ಅತಿ ಜನಸಾಂದ್ರತೆ ಹೊಂದಿದ ದೇಶವಾದ್ದರಿಂದ 1986-88 ರ ಅವಧಿಯ ಆಧಾರಿತವಾದ ಶೇ.3 ಅಥವಾ ಶೇ.5 ಮಾರುಕಟ್ಟೆ ಶೇರಿನ ಪ್ರಮಾಣ ಮೇಲಿನ ನಿರ್ಬಂಧವನ್ನು ನಿರ್ಲಕ್ಷಿಸಬಹುದಾದಷ್ಟು ಕಡಿಮೆ ಇದೆ. ಆದ್ದರಿಂದ ಆಮದು ಪ್ರಮಾಣದ ನಿರ್ಬಂಧವನ್ನು ಹೆಚ್ಚು ಮುಕ್ತಗೊಳಿಸಿದರೂ ಆಮದು ಪ್ರಮಾಣ ಅತಿಯಾಗುತ್ತದೆಯೆಂದು ಊಹಿಸುವುದು ಸರಿಯಲ್ಲ. ಆದರೆ ಸಾಂಪ್ರದಾಯಿಕವಾದ ಬಳಕೆಯ ವಸ್ತುಗಳ ಆಮದು ಹೆಚ್ಚಾಗುವುದರ ವಿರುದ್ಧ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆಮದುಗಳ ಮಾರುಕಟ್ಟೆ ಪಾಲನ್ನು ಗಮನಿಸುತ್ತಿರಲು ನಿಯಂತ್ರಣ ವ್ಯವಸ್ಥೆಯೊಂದನ್ನು ರೂಪಿಸುವುದು ಈಗಿನ ತುರ್ತು ಆವಶ್ಯಕತೆಯಾಗಿದೆ. 1986-88 ರ ಆಧಾರದಲ್ಲಿ ಶೇ.3 ರಷ್ಟು ಆಮದು ಮಾಡಿಕೊಂಡರು ಆಹಾರ ಧಾನ್ಯಗಳ ವಿಷಯದಲ್ಲಿ ಅದು 4.54 ದಶಲಕ್ಷ ಟನ್ನುಗಳಾಗುತ್ತದೆ.
- ಭಾರತವು ಕಾರ್ಯನಿಷೇಧಿತ ಸಹಾಯಧನವನ್ನು ಮುಖ್ಯವಾಗಿ ರಫ್ತು ಮಾರುಕಟ್ಟೆಯ ವೆಚ್ಚ ಮತ್ತು ರಾಷ್ಟ್ರೀಯ, ಅಂತರಾಷ್ಟ್ರೀಯ ಸಾಗಣೆ ವೆಚ್ಚಗಳನ್ನು ಕಡಿಮೆ ಮಾಡುವುದರ ಬಗ್ಗೆ ಗಮನ ಹರಿಸಬೇಕು.
- ಸ್ಯಾನಿಟರಿ ಮತ್ತು ಫೈಟೋಸ್ಯಾನಿಟರಿ ಕ್ರಮಗಳನ್ನು ಸಂಬಂಧಿಸಿದ ದೇಶಗಳ ರಫ್ತುದಾರರಿಗೆ ತಿಳಿಯಪಡಿಸಿ ಅವುಗಳನ್ನು ಆ ದೇಶಗಳಲ್ಲಿ ಜಾರಿಗೆ ತರುವಂತೆ ಮಾಡುವುದು ಆವಶ್ಯಕವಾಗಿದೆ. ನಮ್ಮ ವಸ್ತುಗಳಿಗೆ ಯೋಗ್ಯವಾದ ಒಂದು ಸಾಮಾನ್ಯ ಸಂಹಿತೆಯನ್ನು ತರುವುದರ ಬಗ್ಗೆ ಭಾರತವು ಒತ್ತಾಯಿಸಬೇಕು.

- ರಾಷ್ಟ್ರಮಟ್ಟದಲ್ಲಿ ವಿವಿಧ ರಾಜ್ಯಗಳ ಪ್ರತನಿಧಿಗಳು ಸೇರಿ ಅಂತರಾಷ್ಟ್ರೀಯ ಮಾರುಕಟ್ಟೆಯ ಪರಿಸ್ಥಿತಿ, ಸಮಗ್ರ ಸಂರಕ್ಷಣಾ ವಿಧಾನ, ಸ್ಯಾನಿಟರಿ ಮತ್ತು ಫೈಟೋಸ್ಯಾನಿಟರಿ ಕ್ರಮಗಳು, ಕೃತಕವಾಗಿ ವಸ್ತುಗಳ ಬೆಲೆ ಕಡಿಮೆ ಮಾಡುವುದು, ವ್ಯಾಪಾರದ ತಾಂತ್ರಿಕ ನಿರ್ಬಂಧ, ಆಂತರಿಕ ಮಾರುಕಟ್ಟೆಯ ಪಾಲು ಮತ್ತು ವ್ಯಾಪಾರ ಕ್ಷೇತ್ರಕ್ಕೆ ಉತ್ತೇಜನ ನೀಡುವ ಇತ್ಯಾದಿ ವಿಷಯಗಳನ್ನು ನಿರಂತರವಾಗಿ ಪರಿಶೀಲಿಸಲು ಒಂದು ಸಾಮಾನ್ಯ ವೇದಿಕೆಯ ಆವಶ್ಯಕತೆ ಇದೆ.

### 1.3.3 ಕರ್ನಾಟಕ ರಾಜ್ಯದ ಕೃಷಿ ಮೇಲೆ ಪರಿಣಾಮಗಳು

ಕರ್ನಾಟಕ ರಾಜ್ಯವು ಕೃಷಿ ಉತ್ಪನ್ನಗಳ ರಫ್ತಿನಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದೆ. 1996-97 ರಲ್ಲಿ ಕರ್ನಾಟಕದ ರಫ್ತಿನ ಮೊತ್ತ ಸುಮಾರು 1127 ಕೋಟಿ ರೂ. ಗಳಿದ್ದು 1999-2000 ದಲ್ಲಿ 1749 ಕೋಟಿ ರೂ. ಗಳಿಗೆ ಅಧಿಕಗೊಂಡಿದೆ. ಬಹಳಷ್ಟು ವಸ್ತುಗಳು ಮೂಲತಃ ಕರ್ನಾಟಕದಿಂದಲೇ ಹೋಗುತ್ತದ್ದರೂ ಬೇರೆ ಬೇರೆ ಹೊರ ರಾಜ್ಯದ ಕೇಂದ್ರಗಳ ಮುಖಾಂತರ ರಫ್ತಾಗುವುದರಿಂದ ಅವು ಕರ್ನಾಟಕದ ರಫ್ತು ಸಾಧನೆಯಲ್ಲಿ ಸೇರಿಲ್ಲ, ಇದನ್ನು ಸರಿಪಡಿಸಿದರೆ ನಮ್ಮ ರಾಜ್ಯದ ರಫ್ತು ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲಯ ಸಾಧ್ಯ.

### 1.3.4 ವಿಶ್ವವ್ಯಾಪಾರ ಸಂಘಟನೆಯ ಆಡಳಿತ ಕ್ರಮದಿಂದಾಗುವ ಪರಿಣಾಮಗಳು

- ಕರ್ನಾಟಕದ ಉತ್ಪಾದನೆಯ ರಫ್ತು ಸಾಮರ್ಥ್ಯವನ್ನು ಹೆಚ್ಚಿಸಲಯ ಈ ಕೆಳಗಿನ ಮೂರು ಅಂಶಗಳಿಗೆ ಒತ್ತುಕೊಡಬೇಕು. ಅವುಗಳೆಂದರೆ - ರಫ್ತು ಉತ್ತೇಜನ ವ್ಯವಸ್ಥೆಯನ್ನು ಕಲ್ಪಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹಾಗೂ ರಫ್ತು ಆಡಳಿತದಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ತರುವುದು.
- ಕರ್ನಾಟಕ ರಾಜ್ಯವು ರಫ್ತಿನಲ್ಲಿ ಕೆಳಗಿನ ನಾಲ್ಕು ಅಂಶಗಳಲ್ಲಿ ತುಲಾನಾತ್ಮಕವಾಗಿ ಲಾಭ ಹೊಂದಿರುತ್ತದೆ. (1) ಮೂಲ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳು, (2) ತೋಟಗಾರಿಕೆ ಸಂಸ್ಕರಣ ವಸ್ತುಗಳು, (3) ಹೂ ಕೃಷಿ ಬೇಸಾಯ ಮತ್ತು (4) ಅರಣ್ಯ ಉತ್ಪನ್ನಗಳು (ಸಾಧ್ಯವಾದರೆ ಇವುಗಳ ಅಧ್ಯಯನಕ್ಕೆ ಆಯೋಗ ರಚಿಸುವುದು ಉತ್ತಮ). ರಫ್ತಿನ ಹೆಚ್ಚಳಕ್ಕಾಗಿ ಅಂತರಾಷ್ಟ್ರೀಯ ಮಾರುಕಟ್ಟೆಗಳನ್ನು - ವಿಶೇಷವಾಗಿ ಪೂರ್ವಯುರೋಪು, ತೈಲ ರಫ್ತು ಮಾಡುವ ದೇಶಗಳು ಹಾಗೂ ಅಭಿವೃದ್ಧಿಶೀಲ ದೇಶಗಳಲ್ಲಿ ಕಂಡುಗೊಳ್ಳಬೇಕಾಗಿದೆ.
- ಕೆಲವು ಮೂಲ ಸೌಕರ್ಯಗಳನ್ನು ಒದಗಿಸುವಲ್ಲಿ ಅಡತಡೆಗಳಿರುವುದರಿಂದ ರಾಜ್ಯ ಸರ್ಕಾರವು ತೀವ್ರಗತಿಯಲ್ಲಿ ಅವಶ್ಯಕ ಮೂಲ ಸೌಕರ್ಯಗಳನ್ನು ಒದಗಿಸಬೇಕು. ಇದು ರಫ್ತಿನ ಮುಂಚಿನ ವೆಚ್ಚ ಹಾಗೂ ನಂತರದ ವೆಚ್ಚವನ್ನು ಕಡಿಮೆ ಮಾಡುತ್ತದೆ. ಈ ಕಾರಣದಿಂದ ನಮ್ಮ ರಾಜ್ಯದ ರಫ್ತುದಾರರು ಇತರ ರಾಜ್ಯದ ರಫ್ತುದಾರರ ಜೊತೆಗೆ ಪೈಪೋಟಿ ನಡೆಸಲು ಅಸಮರ್ಥರಾಗಿದ್ದಾರೆ.

- ಕೆಲವು ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಆಡಳಿತದ ತೊಂದರೆಗಳಿಂದಾಗಿ ರಫ್ತುದಾರರಿಗೆ ಕೆಲವು ಪ್ರಾಥಮಿಕವಾದ ತೊಂದರೆಗಳಿವೆ. ಆದ್ದರಿಂದ, ಅವುಗಳಿಗೆ ಸಂಬಂಧಿಸಿದ ಅವಶ್ಯಕ ಅನುಕೂಲಗಳು ಹಾಗೂ ಉತ್ತೇಜನ ವ್ಯವಸ್ಥೆಯನ್ನು ಕಲ್ಪಿಸುವ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕು. ಇದು ಕಟಾವು ನಂತರದ ಹಾಗೂ ರಫ್ತು ಮುಂಚಿನ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇಂತಹ ವೆಚ್ಚದ ಭಾರದಿಂದಾಗಿ ನಮ್ಮ ರಾಜ್ಯದ ರಫ್ತುದಾರರು ಹೊರರಾಜ್ಯದ ರಫ್ತುದಾರರೊಡನೆ ಪೈಪೋಟಿ ನಡೆಸಲಾರದವರಾಗಿದ್ದಾರೆ.
- ಪರಿಮಾಣಾತ್ಮಕ ನಿಯಂತ್ರಣ (QRs) ಗಳನ್ನು ತೆಗೆದಿರುವುದರಿಂದ ರಾಜ್ಯ ಸರ್ಕಾರವು ಕೃಷಿ, ತೋಟಗಾರಿಕೆ, ಹೂಗಳ ಆಮದುಗಳನ್ನು ನಿರಂತರವಾಗಿ ನಿಯಂತ್ರಿಸುತ್ತಿರಬೇಕು ಮತ್ತು ಇವುಗಳ ಬೆಲೆಗಳನ್ನು ಗಮನಿಸುತ್ತಿರಬೇಕು. ಇಲ್ಲದಿದ್ದರೆ ಆಮದಿನ ಹೆಚ್ಚಳವು ನಷ್ಟವುಂಟು ಮಾಡುವುದಲ್ಲದೆ ಆಂತರಿಕ ಉತ್ಪಾದಕರಿಗೆ ನಿರುತ್ತೇಜನವನ್ನುಂಟು ಮಾಡುತ್ತದೆ.
- ತಂತ್ರಜ್ಞಾನದ ಆಮದು ಮುಖ್ಯವಾಗಿ ಟರ್ಮಿನೇಟರ್ ಬೀಜಗಳು (terminator seeds) ಆಹಾರದ ಸುರಕ್ಷತೆ ಮತ್ತು ಸ್ಥಳೀಯ ಬೀಜ ಸಂಗ್ರಹಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಆದ್ದರಿಂದ ಈ ನಿಟ್ಟಿನಲ್ಲಿ ಕೆಲವು ವಿಶೇಷ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಿದೆ.
- ಸಂರಕ್ಷಣಾ ಕ್ರಮಗಳು, ಸ್ಯಾನಟರಿ - ಪೈಟೋಸ್ಯಾನಿಟರಿ ಕ್ರಮಗಳು, ಅಕ್ರಮ ದಾಸ್ತಾನು ನಿಯಮಗಳು ಹಾಗೂ ವ್ಯಾಪಾರದ ತಾಂತ್ರಿಕ ನಿರ್ಬಂಧಗಳ ಪ್ರಯೋಜನ ಪಡೆಯಲು ರಾಜ್ಯ ಸರ್ಕಾರವು ವಸ್ತುಗಳ ಗುಣಮಟ್ಟ ಹಾಗೂ ಬೆಲೆಗಳ ತಾರತಮ್ಯದ ಭರ್ತಿಗಳಿಗಾಗಿ ಒತ್ತಾಯಿಸಬೇಕು.
- ರಾಜ್ಯ ಸರ್ಕಾರವು ರಫ್ತುದಾರರಿಗೆ ವಿಧಿಸಿರುವ ಸುಂಕದ ದರಗಳನ್ನು ಪರಿಶೀಲಿಸಬೇಕು. ಈಗ ಕೃಷಿ ಉತ್ಪನ್ನ ಮಾರುಕಟ್ಟೆ ಸುಂಕ ಶೇ.1, ಕೃಷಿ ಸಂಸ್ಕರಣ ಸುಂಕ ಶೇ.0.5 ಮತ್ತು ಆಪೇಡಾ ಸುಂಕ ಶೇ.0.5 ಇವೆ. ಇವುಗಳನ್ನು ರಫ್ತಿನ f.o.b. ಮೌಲ್ಯದ ಮೇಲೆ ವಿಧಿಸಲಾಗತ್ತದೆ. ಇವುಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಯ ಶೇ.1 ಶುಲ್ಕವನ್ನು ತೆಗೆದುಹಾಕುವುದರಿಂದ ರಫ್ತುದಾರರಿಗೆ ಹೆಚ್ಚು ಉತ್ತೇಜನ ದೊರೆಯುತ್ತದೆ. ಹೀಗೆ ಮಾಡುವಾಗ ರಫ್ತಿನ ವಸ್ತುಗಳ ದೃಢೀಕರಣ ಮಾಡಬೇಕು.
- ಉತ್ತರ ಕರ್ನಾಟಕದ ಪ್ರಾಂತ್ಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಮೂಲಕ ಹಾಗೂ ರಫ್ತು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಮೂಲಕ ಕರ್ನಾಟಕವು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ವಿನಾಯಿತಿಯ ಅನುಕೂಲತೆಗಳನ್ನು 'ಹಸಿರು ಪೆಟ್ಟಿಗೆ' ಕಾರ್ಯಕ್ರಮದ ಅಡಿಯಲ್ಲಿ ಪಡೆಯಬಹುದು.
- ರಾಜ್ಯ ಸರ್ಕಾರವು ರೈತರ ಮತ್ತು ರಫ್ತುದಾರರ ಕೂಟ ರಚಿಸುವುದರಿಂದ ಸಣ್ಣ ರೈತರನ್ನು ಒಂದುಗೂಡಿಸಿ ಅಧಿಕ ಲಾಭ ಪಡೆಯಲು ಸಹಾಯವಾಗತ್ತದೆ. ಈ ಮೂಲಗಳು 'ಹಸಿರು ಪೆಟ್ಟಿಗೆ' ಯಲ್ಲಿಯ ಕ್ರಮಗಳ ಲಾಭ ಪಡೆದು ರಫ್ತು ಕ್ಷೇತ್ರವನ್ನು ಬಲಪಡಿಸಲು ಸಹಾಯಕವಾಗತ್ತದೆ.

- ಸ್ಥಳೀಯ ಬೆಲೆಗಳು, ಅಂತರಾಷ್ಟ್ರೀಯ ಬೆಲೆಗಳಿಗಿಂತ ಹೆಚ್ಚು ಏರುಪೇರಾಗುತ್ತವೆ. ಜೊತೆಗೆ ವಸ್ತುಗಳ ಉತ್ಪಾದಕರು ಈ ಬೆಲೆಗಳ ಏರಿಳಿತಗಳಿಗೆ ಅನುಗುಣವಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಸ್ತುಗಳ ಲಭ್ಯತೆಯಲ್ಲೂ ಏರುಪೇರುಂಟು ಮಾಡುತ್ತಾರೆ. ಆದರಿಂದ ರಫ್ತು ಸಂಬಂಧಿತ ವಿಮಾ ಯೋಜನೆಗಳಿಂದ ರಫ್ತು ಮಾಡುವ ಉತ್ಪನ್ನಗಳಿಗೆ ಬೆಲೆ ಏರಿಳಿತದ ವಿರುದ್ಧ ರಕ್ಷಣೆ ದೊರೆಯುತ್ತದೆ. ಆದ್ದರಿಂದ ಇದನ್ನು ರಾಜ್ಯ ಮಟ್ಟದಲ್ಲಿ ಅನುಷ್ಠಾನಗೊಳಿಸಬೇಕು.

- ಅಂತರಾಷ್ಟ್ರೀಯ ಮಾರುಕಟ್ಟೆಗಳ ಮಾಹಿತಿಗಳನ್ನು ರಾಜ್ಯ ಸರ್ಕಾರ ನೋಡಲ್ ಏಜನ್ಸಿ (Nodal Agency) ಗಳ ಮುಖಾಂತರ ಒದಗಿಸಿದರೆ ರಾಜ್ಯವು ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಭಾಗವಹಿಸಲು ಹಾಗೂ ದೇಶಿಯ ಉತ್ಪಾದಕರುಗಳ ಕ್ಷೇಮಾಭಿವೃದ್ಧಿಯನ್ನು ರಕ್ಷಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ವಿಶ್ವವ್ಯಾಪಾರ ಸಂಘಟನ ಸೆಲ್ (WTO Cell) ಸ್ಥಾಪಿಸುವುದರ ಮುಖಾಂತರ ಪ್ರಥಮ ಹೆಜ್ಜೆ ಇಟ್ಟಂತಾಗಿದೆ. ವ್ಯಾಪಾರ ಕ್ಷೇತ್ರದಲ್ಲಿನ ಅಭಿವೃದ್ಧಿ ಮತ್ತು ಸಾಧನೆಗಳನ್ನು ಸೆಲ್ ನಿರಂತರವಾಗಿ ಮೌಲ್ಯಮಾಪನ ಮಾಡುವುದು ಅವಶ್ಯಕವಿದೆ ಹಾಗೂ ವಿಶ್ವವ್ಯಾಪಾರ ಸಂಘಟನೆಯ ಕಾರ್ಯ ವ್ಯಾಪ್ತಿಯಲ್ಲಿ ಇತರ ಕ್ಷೇತ್ರಗಳ ವಸ್ತುಗಳಾದ ಕೈಗಾರಿಕ ಉತ್ಪನ್ನ, ಮಾಹಿತಿ ತಂತ್ರಜ್ಞಾನ, ಬೆಲೆ ಬಾಳುವ ಹರಳುಗಳು, ಆಭರಣ, ಕೈಮಗ್ಗದ ಉತ್ಪನ್ನಗಳು, ಕಚ್ಚಾ ವಸ್ತುಗಳು ಮತ್ತು ಕೃಷಿ ಮತ್ತು ತೋಟಗಾರಿಕೆಯ ವಸ್ತುಗಳಲ್ಲದೇ ಇತರ ಎಲ್ಲಾ ವಸ್ತುಗಳನ್ನು ವಿಶ್ವವ್ಯಾಪಾರ ಸಂಘಟನೆಯ ಸೆಲ್‌ನ ಕಾರ್ಯವ್ಯಾಪ್ತಿಗೆ ತರುವುದು ಅವಶ್ಯಕವಾಗಿದೆ. ಆದರೆ ಈಗ ಈ ಸೆಲ್ ಕೇವಲ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿದೆ.

### 1.3.5 ಕರ್ನಾಟಕದ ಅಭಿವೃದ್ಧಿಗೆ ಅಡಚಣೆಗಳು

ವ್ಯಾಪಾರ ಕ್ಷೇತ್ರದಲ್ಲಿ ಕರ್ನಾಟಕವು ಎದುರಿಸುತ್ತಿರುವ ಅಡಚಣೆಗಳನ್ನು ಗುರುತಿಸಲಯ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತ (ಕಿಪೆಕ್) ವು ಇತ್ತೀಚೆಗೆ ನಡೆಸಿದ ರಫ್ತುದಾರರ ಕಾರ್ಯಾಗರಾದ ನಡಾವಳಿಗಳ ಸಹಾಯವನ್ನು ಪಡೆಯಲಾಗಿದೆ. ಈ ಕಾರ್ಯಾಗಾರದ ಚರ್ಚೆಯಲ್ಲಿ ಬಹುಮಂದಿ ರಫ್ತುದಾರರು ಭಾಗವಹಿಸಿದ್ದು ಅದರ ವರದಿಯು ರಫ್ತುದಾರರು ಎದುರಿಸಿದ ಅಡಚಣಗಳನ್ನು ಪರಿಚಯಿಸುತ್ತದೆ. ಅವರು ಅನುಭವಿಸಿದ ಮೂಲಭೂತ ಅಡಚಣೆಗಳು ಹಾಗೂ ಆಂತರಿಕ ಮಾರುಕಟ್ಟೆಯ ತೊಂದರೆಗಳನ್ನು ದಾಖಲಿಸಿಕೊಳ್ಳಲಾಗಿದೆ.

### 1.3.6 ರಫ್ತುದಾರರ ಪ್ರಮುಖ ಸಮಸ್ಯೆಗಳು

- ಕರ್ನಾಟಕದಲ್ಲಿ ರಫ್ತು ವಸ್ತುಗಳ ಉತ್ಪಾದನಾ ಘಟಕಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ ಕಚ್ಚಾ ವಸ್ತುಗಳ ಅಭಿವೃದ್ಧಿ ಕೇಂದ್ರಗಳ ಕೊರಳೆಯಿದೆ. ಸಂಸ್ಕರಣ ಘಟಕಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ ಕೇಂದ್ರಗಳನ್ನು ಖಾಸಗಿ ಸಹಯೋಗದೊಂದಿಗೆ ಪ್ರಾರಂಭಿಸುವುದು ಅವಶ್ಯಕವಾಗಿದೆ.
- ಮೂಲಭೂತ ಸೌಕರ್ಯದಲ್ಲಿಯ ಲೋಪದೋಷಗಳಾದ ನೀರು ಪೂರೈಕೆ, ಸತತ ವಿದ್ಯುತ್ ಪೂರೈಕೆ, ಉತ್ತಮ ಗುಣಮಟ್ಟದ ರಸ್ತೆಗಳು, ಕೊಯ್ಲಿನ ನಂತರದ ಅವಶ್ಯಕ ಸೌಲಭ್ಯಗಳ ಕೊರತೆ ಮತ್ತು ಅನೇಕ ಆಡಳಿತಾತ್ಮಕ ದೋಷಗಳನ್ನು ಪರಿಹರಿಸುವುದರಿಂದ ರಫ್ತು ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕಗೊಳಿಸಬಹುದು.
- APMC ಸುಂಕ (Cess) ವು ರಫ್ತುದಾರರಿಗೆ ಹೆಚ್ಚಿನ ಭಾರವಾಗಿದೆ. ನಿರ್ಧರಿಸಿದ ಮೊತ್ತಕ್ಕಿಂತ ಹೆಚ್ಚು ರಫ್ತು ಸಾಧಿಸಿರುವ ರಫ್ತುದಾರರಿಗೆ ಈ ಸುಂಕವನ್ನು ಕರ್ನಾಟಕ ಸರ್ಕಾರ ತೆಗೆದುಹಾಕಬೇಕು. ಈ ಕ್ರಮದಿಂದ ರಫ್ತುದಾರರಿಗೆ ಉತ್ತೇಜನ ಸಿಗುವುದರಿಂದ ರಫ್ತಿನಲ್ಲಿ ಪ್ರಗತಿಯನ್ನು ಸಾಧಿಸಬಹುದು.
- ರಾಜ್ಯದಲ್ಲಿಯ ವಿದ್ಯುತ್ ಕಡಿತ ಮತ್ತು ಪೂರೈಕೆಯಲ್ಲಿಯ ಗುಣಮಟ್ಟದ ಅಭಾವದ ಕಾರಣ ರಫ್ತುದಾರರು ವಿದ್ಯುತ್ ಜನರೇಟರ್‌ಗಳನ್ನು ಹೊಂದಬೇಕಾಗಿದೆ. ಇದರಿಂದ ಬಂಡವಾಳ ಹೂಡಿಕೆ ಮತ್ತು ರಫ್ತು ವೆಚ್ಚಗಳು ಏರುತ್ತವೆ. ರಾಜ್ಯ ಸರ್ಕಾರವು ಈ ಸಮಸ್ಯೆಯ ಪರಿಹಾರಕ್ಕಾಗಿ ಅಗತ್ಯ ಕ್ರಮಕೈಗೊಳ್ಳಬೇಕು.
- ಸ್ಥಳೀಯ ರಫ್ತುದಾರರು ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಯ ನಡುವೆ ಹೆಚ್ಚಿನ ಅಂತರವಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಸಂಪರ್ಕದ ಅಭಾವ ಮತ್ತು ಹೊರಗಿನ ಮಾಹಿತಿಗಳ ಅಲಭ್ಯತೆ. ಇವುಗಳ ಜೊತೆಗೆ ಮಾರಾಟ ತೆರಿಗೆ ಅರ್ಜಿಗಳ ಅಲಭ್ಯತೆ ಇತ್ಯಾದಿ ಸೇರಿದೆ. ಆದ್ದರಿಂದ ರಫ್ತುದಾರರಿಗೆ ಅಂತರಾಷ್ಟ್ರೀಯ ಮಾರುಕಟ್ಟೆಯ ಮಾಹಿತಿ ಒಂದೇ ಕೇಂದ್ರದಿಂದ ಲಭ್ಯವಾಗುವಂತೆ ವ್ಯವಸ್ಥೆ ಮಾಡುವುದು ಮತ್ತು ಪಾರದರ್ಶಕ ವ್ಯಾಪಾರದ ವಾತಾವರಣವನ್ನು ಸೃಷ್ಟಿಸುವುದು ಅವಶ್ಯಕವಾಗಿದೆ.
- ಆಹಾರ ಸಂಸ್ಕರಣಗಳ ಕೈಗಾರಿಕೆಯಲ್ಲಿನ ಆಡಳಿತಾತ್ಮಕ ತೊಂದರೆಯಿಂದ ಶೇ.90 ರಷ್ಟು ಮಾವು ಉತ್ಪನ್ನಗಳು ಸಂಸ್ಕರಣೆಗೆ ಹೊರ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಿಗೆ ಹೋಗಿ ಅಲ್ಲಿಂದ ಅಂತರಾಷ್ಟ್ರೀಯ ಮಾರುಕಟ್ಟೆಗಳಿಗೆ ರವಾನೆಯಾಗುತ್ತಿರುವುದು ತಿಳಿದುಬಂದಿದೆ. ಈ ದಿಸೆಯಲ್ಲಿ ಅವಶ್ಯಕವಾದ ತೀವ್ರ ಕ್ರಮಗಳನ್ನು ಅನುಷ್ಠಾನದಲ್ಲಿ ತಂದು ಈ ಲೋಪದೋಷಗಳನ್ನು ಸರಿಪಡಿಸಬೇಕು.
- ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳ ಸ್ಥಾಪನೆ, ಮಂಗಳೂರು ಹಾಗೂ ಕಾರವಾರದಲ್ಲಿಯ ಹಡಗು ನಿಲ್ದಾಣಗಳನ್ನು ಬಲಪಡಿಸಲು ತೀವ್ರ ಕ್ರಮ ಕೈಗೊಳ್ಳಬೇಕು.
- ರಾಜ್ಯದ ರಫ್ತನ್ನು ಹೆಚ್ಚಿಸುವುದರಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿಯ ಯೋಜನೆಗಳ ಅವಶ್ಯವಿದೆ. ತಾತ್ಕಾಲಿಕವಾಗಿ ಈ ಯೋಜನೆಗಳನ್ನು ಕೆಳಗಿನಂತೆ ಸೂಚಿಸಲಾಗಿದೆ.

| ಯೋಜನಾ ಅವಧಿ | ಅಳವಡಿಕೆ (Components) |
|---|---|
| ಅಲ್ಪಾವಧಿ ಯೋಜನೆ (ಮುಂದಿನ 5 ವರ್ಷ) | ▪ ಮಾರುಕಟ್ಟೆಯ ಸವಲತ್ತುಗಳ ವಿಸ್ತಾರ, ರಚನೆಯ ಮೂಲಕ ಉತ್ತೇಜನ<br>▪ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.<br>▪ ಮಾರುಕಟ್ಟೆ ಮತ್ತು ಬೆಲೆ ಮಾಹಿತಿಯ ಲಭ್ಯತೆ<br>▪ ರೈತರ ರಫ್ತು ಘಟಕಗಳ ಸ್ಥಾಪನೆ<br>▪ ರಾಜ್ಯದ ವ್ಯಾಪಾರ ತೆರಿಗೆಯ ರಚನೆಯಲ್ಲಿ ಬದಲಾವಣೆ ಮಾಡುವುದು. |
| ಮಧ್ಯಮ ಮತ್ತು ದೀರ್ಘಾವಧಿ ಯೋಜನೆ (5 ರಿಂದ 20 ವರ್ಷ) | ▪ ರಫ್ತು ಪರಿಷ್ಕರಣ ಮತ್ತು ವಿಶೇಷ ಆರ್ಥಿಕ ವಲಯಗಳ (EPZs & SEZs) ಸ್ಥಾಪನೆ.<br>▪ ರಫ್ತಾಗುವ ಸಂಪ್ರದಾಯವಲ್ಲದ ವಸ್ತುಗಳನ್ನು ಗುರುತಿಸುವುದು.<br>▪ ರಫ್ತು ಸರಕುಗಳನ್ನು ಉತ್ಪಾದಿಸುವ ಘಟಕಗಳಿಗೆ ಉತ್ತೇಜನ ಕೊಡುವ ವ್ಯವಸ್ಥೆ<br>▪ ಸ್ಯಾನಿಟರಿ, ಫೈಟೊಸ್ಯಾನಿಟರಿ ಮತ್ತು ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳ ಅವಶ್ಯಕತೆಗಳನ್ನು ಪಟ್ಟಿಮಾಡುವುದು.<br>▪ ಸತತ ನಿಯಂತ್ರಣಾ ಮತ್ತು ವಿಶ್ಲೇಷಣೆಗೆ ಸಾಂಸ್ಥಿಕ ಕೇಂದ್ರದ ಸ್ಥಾಪನೆ<br>▪ ಮೂಲಭೂತ ಸೌಕರ್ಯದ ಅಭಿವೃದ್ಧಿ. |

### 1.3.7 ಪರಿಶೀಲನಾ ಪ್ರಸ್ತಾವನೆಗಳು (Proposals for Consideration)

ವಿಶ್ವವ್ಯಾಪಾರ ಸಂಘಟನೆಯ ಸಭೆಯಲ್ಲಿ, ಕೇಂದ್ರ ವಾಣಿಜ್ಯ ಸಚಿವರು ನಡೆಸುವ ಒಪ್ಪಂದಗಳ ಸಂದರ್ಭದಲ್ಲಿ, ಪರಿಶೀಲನೆಗಾಗಿ ಕರ್ನಾಟಕವು ಸಚಿವರ ಮುಂದಿಡಬೇಕಾದ ಪ್ರಸ್ತಾವನೆಗಳನ್ನು ಈ ಭಾಗವು ಒಳಗೊಂಡಿದೆ. ಕರ್ನಾಟಕದ ವ್ಯಾಪಾರ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೃಷಿ ನೀತಿಗಳಿಗೆ ತಿದ್ದುಪಡಿ ತರಲು ಅವಶ್ಯಕ ಅಂಶಗಳನ್ನು ಈ ಪರಿಶೀಲನಾ ಪ್ರಸ್ತಾವನೆಯಲ್ಲಿ ವಿವರಿಸಲಾಗಿದೆ.

**<u>ಪ್ರಸ್ತಾವನೆಗಳು:-</u>**

➢ ಕೇಂದ್ರ ಸರ್ಕಾರದ ಜೊತೆಗೆ ನೀತಿ ನಿರ್ಣಯಗಳ ಚರ್ಚೆಯಲ್ಲಿ ರಾಜ್ಯ ಸರ್ಕಾರದ ಪಾತ್ರ : ಕೃಷಿ ಕ್ಷೇತ್ರವು ರಾಜ್ಯ ಸರ್ಕಾರದ ವಿಷಯವಾಗಿದ್ದು, ಅಂತಹ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಾಗ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಜೊತೆಗೆ ಚರ್ಚಿಸಬೇಕು. ಅದೇ ರೀತಿ ರಾಜ್ಯ ಸರ್ಕಾರವು ರೂಪಿಸುವ ನೀತಿಗಳಲ್ಲಿ ಜಿಲ್ಲೆಗಳ ಪೂರ್ಣ ಪ್ರಮಾಣ ಭಾಗವಹಿಸುವಿಕೆಯನ್ನು ನೋಡಿಕೊಳ್ಳುವುದು ಅವಶ್ಯವಿದೆ.

- ಆಮದು ರಪ್ತು ನೀತಿಯಲ್ಲಿಯ ಬಂಡವಾಳಕ್ಕಾಗಿ ಕೋರಿಕೆ: ಕೇಂದ್ರ ವಾಣಿಜ್ಯ ಮಂತ್ರಿಗಳು ರಪ್ತು ಆಮುದು ನೀತಿಯನ್ನು (Exim policy) ಏಪ್ರಿಲ್ 1, 2000 ರಂದು ತಿದ್ದುಪಡಿ ಮಾಡುವಾಗ ರಾಜ್ಯ ಸರ್ಕಾರಗಳಿಗೆ ರಪ್ತು ಅಭಿವೃದ್ಧಿಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದ್ದಾರೆ. ರಫ್ತಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಗಳು ರಫ್ತಿನಲ್ಲಿ ಸಾಧಿಸಿರುವ ಅಭಿವೃದ್ಧಿಗೆ ಅನುಗುಣವಾಗಿ ಅವುಗಳಿಗೆ ಸಹಾಯ ನೀಡಲು ಒಂದು ಯೋಜನೆಯನ್ನು ರೂಪಿಸಲಾಗಿದೆ. ಪ್ರಾರಂಭದಲ್ಲಿ ಇದಕ್ಕಾಗಿ ರೂ 250.00 ಕೋಟಿಗಳನ್ನು ಮಂಜೂರು ಮಾಡಲಾಗಿದ್ದು, ಈ ಬಂಡವಾಳ ಮೊತ್ತವನ್ನು ರಾಜ್ಯ ಸರ್ಕಾರಗಳ ರಫ್ತಿಗೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳಾದ ರಸ್ತೆಗಳು, ಕೃಷಿ ರಪ್ತುಗಳಿಗಾಗಿ ಶೈತ್ಯಾಗಾರದ ಸರಪಳಿ (Cold Chain) ಗಳ ಅಭಿವೃದ್ಧಿ ಕಿರು ಬಂದರುಗಳ ಅಭಿವೃದ್ಧಿ ಹಾಗೂ ರಾಜ್ಯದ ಕೆಲವು ರಫ್ತಿನ ವಸ್ತುಗಳ ಸಂಶೋಧನೆ ಮತ್ತು ಅಭಿವೃದ್ಧಿಗಳಿಗೆ ವ್ಯಯಿಸಬೇಕಾಗುತ್ತದೆ.
- ರಾಜ್ಯಕ್ಕೆ ಅವಶ್ಯವಿರುವ ಮುಖ್ಯ ವಸ್ತುಗಳಿಗೆ ಹೆಚ್ಚು ಗಮನ ಕೊಡುವುದು: ಕರ್ನಾಟಕ ರಾಜ್ಯ ಸರ್ಕಾರವು ಹಲವು ಉತ್ಪನ್ನಗಳ ಉತ್ಪಾದನೆ, ಸಂಸ್ಕರಣೆ ಮತ್ತು ಮಾರುಕಟ್ಟೆಗಳಿಗೆ ವಿಶೇಷ ಗಮನ ಹರಿಸಬೇಕಾಗುತ್ತದೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಮೆಕ್ಕೆ ಜೋಳ, ನೆಲಗಡಲೆ, ಹುಚ್ಚೆಳ್ಳು , ಮೆಣಸಿನಕಾಯಿ, ಮಾವು, ದಾಳಿಂಬೆ, ದ್ರಾಕ್ಷಿ, ಲಿಂಬೆ, ಹೂಗಳು, ಗೋಡಂಬಿ, ಈರುಳ್ಳಿ, ಆಲೂಗೆಡ್ಡೆ, ಕಾಫಿ ಮತ್ತು ತರಕಾರಿ ಬೀಜಗಳು. ರಾಜ್ಯವು ಅವಶ್ಯಕ ವಸ್ತುಗಳಾದ ಬೆಂಗಳೂರು ಗುಲಾಬಿ ಈರುಳ್ಳಿಗೆ ಆದ್ಯತೆ ಮುಂದುವರೆಸಬೇಕು. ಏಕೆಂದರೆ ಇದನ್ನು ರಪ್ತುಗೋಸ್ಕರವೇ ಬೆಳೆಯಲಾಗುತ್ತಿದೆ. ಆದ್ದರಿಂದ ಅವುಗಳಿಗೆ ಸಂರಕ್ಷಣೆ ಇಲ್ಲದಿದ್ದರೆ ಇದನ್ನು ಬೆಳೆಯುವ ರೈತರು ಹಾನಿಗೊಳಗಾಗುತ್ತಾರೆ.
- ವಿಶೇಷ ರಕ್ಷಣಾ ಕ್ರಮಗಳು ಮತ್ತು ಪೈಟೋಸ್ಯಾನಿಟರಿ ಕ್ರಮಗಳು : ಸದ್ಯದಲ್ಲಿ ರಕ್ಷಣಾ ಕ್ರಮಗಳಿಗೆ ಸೂಕ್ತವಾದ ವಿಷಯಗಳ ಕುರಿತು ಹೆಚ್ಚು ಮಾಹಿತಿ ಲಭ್ಯವಿಲ್ಲದಿರುವುದರಿಂದ ರಾಜ್ಯ ಸರ್ಕಾರವು ರಪ್ತುದಾರರಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ತಿಳುವಳಿಕೆ ಮೂಡಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕು.
- ಆಂತರಿಕ ಬೆಲೆಯ ಅನುಕೂಲತೆ : ಕೇಂದ್ರ ಸರ್ಕರವು ಆಮದು ಸುಂಕವನ್ನು ನಿಗದಿಪಡಿಸುವಾಗ ಸ್ವದೇಶಿ/ಆಂತರಿಕ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳಬೇಕು.
- ಹಸಿರು ಪೆಟ್ಟಿಗೆ ಕ್ರಮಗಳು: ಪರಿಸರ ನಶಿಸುವಿಕೆಗೆ ಒಳಗಾಗಿರುವ ವಲಯ (Environmental fragile Zones) ಗಳಾದ ಬಿಜಾಪುರ, ಗುಲ್ಬರ್ಗಾ , ಬೀದರ್ ಇತ್ಯಾದಿಗಳಿಗೆ ವಿಶ್ವವ್ಯಾಪಾರ ಸಂಘಟನೆಯಿಂದ ಅನುಕೂಲವಾಗುವಂತೆ ರಾಜ್ಯ ಸರ್ಕಾರದ ಸೂಕ್ತ ಕ್ರಮ ಕೈಗೊಳ್ಳಬೇಕು.
- ನೋಡಲ್ ಏಜನ್ಸಿ ( Nodal Agency) ಯ ಸ್ಥಾಪನೆ : ವ್ಯಾಪಾರದ ವಾತಾವರಣ ಸೃಷ್ಟಿ ಮಾಡುವುದರ ನಿಟ್ಟಿನಲ್ಲಿ ಎರಡು ಹಂತಗಳನ್ನು ಹೊಂದಿರುವ ವ್ಯವಸ್ಥೆಯನ್ನು ಸ್ಥಾಪಿಸುವುದು ಅವಶ್ಯವಿದೆ. ಒಂದು ಕೇಂದ್ರದಲ್ಲಿ ಕೃಷಿ ಸಚಿವಾಲಯ ಮಟ್ಟದ ಉನ್ನತ ಸಂಸ್ಥೆಯಾಗಿ ಮತ್ತು ಇನ್ನೊಂದು ವಿವಿಧ ರಾಜ್ಯಗಳಲ್ಲಿದ್ದು ಇವುಗಳು ಕೇಂದ್ರದ ಜೊತೆಗೆ ಸಂಪರ್ಕವನ್ನು ಸೃಷ್ಟಿಸುವಂತಿರಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು **ವಿಶ್ವ ವ್ಯಾಪಾರ ಸಂಘಟನೆ ಸೆಲ್** ಸ್ಥಾಪಿಸುವುದರೊಂದಿಗೆ ಮಹತ್ವದ ನಿರ್ಧಾರವನ್ನು ಕೈಗೊಂಡಿದೆ. ಈ ನಿಟ್ಟಿನಲ್ಲಿ ವಿಶ್ವ ವ್ಯಾಪಾರ ಸಂಘಟನೆ ಸೆಲ್ ವು ನಿರಂತರವಾಗಿ ವಿವಿಧ ನೀತಿಗಳ ಬಗ್ಗೆ ಚರ್ಚಿಸುತ್ತದೆ. ಹಾಗೂ ಅವುಗಳನ್ನು

ನಿಯಂತ್ರಿಸುತ್ತದೆ. ಆದರಂತೆ ಕೇಂದ್ರ ಸಂಸ್ಥೆಯು ಸವಿಸ್ತರವಾದ ಮಾಹಿತಿಯನ್ನು ಸಂಗ್ರಹಿಸಿ ಸಂಬಂಧಿಸಿದವರಿಗೆ ಒದಗಿಸಲು ಸಹಕಾರಿಯಾಗುತ್ತದೆ.

- ಪರಿಸರದ ಸಂರಕ್ಷಣೆ: ರಾಜ್ಯ ಸರ್ಕಾರವು ವಿಶ್ವವ್ಯಾಪಾರ ಸಂಘಟನೆ ಸೆಲ್‌ನ ಮುಖಾಂತರ ಅರಣ್ಯ, ತೋಟಗಾರಿಕೆ, ಅಂತರ್ಜಲ ಮಂಡಳಿ ಹಾಗೂ ಪರಿಸರ ಸಂರಕ್ಷಣವಾದಿಗಳ ಜೊತೆಗೂಡಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಡಬ್ಲ್ಯೂ .ಟಿ.ಓ ದಲ್ಲಿ ಅವಶ್ಯಕವಾದ ರೂಪರೇಷೆಗಳನ್ನು ತಯಾರಿಸುವುದರ ಮೂಲಕ ಅಂತರಾಷ್ಟ್ರೀಯ ವ್ಯಾಪಾರದ ಪೈಪೋಟಿಯಿಂದ ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ಮತ್ತು ಜನರ ಕಲ್ಯಾಣಕ್ಕೆ ಉಂಟಾಗುವ ಹಾನಿಯನ್ನು ತಡೆಯಲು ಕ್ರಮ ಕೈಗೊಳ್ಳಬಹುದು.

**ಆ. ಸೆಲ್ ಕೈಗೊಳ್ಳಬೇಕಾದ ವಿಶೇಷ ಅವಶ್ಯಕ ಅಧ್ಯಯನಗಳು:-**

ಅ) ಕರ್ನಾಟಕ ರಾಜ್ಯವು ವ್ಯಾಪಾರದಲ್ಲಿ ತುಲನಾತ್ಮಕವಾಗಿ ಹೆಚ್ಚು ಅನುಕೂಲತೆ ಹೊಂದಿರುವ ಕೋಳಿ ಸಾಕಾಣಿಕೆ, ಹಾಲು ಮತ್ತು ಹಾಲಿನ ಉತ್ಪನ್ನಗಳು, ಜೇನು ಸಾಕಾಣಿಕೆ , ಅಣಬೆ ಕೃಷಿ , ವೆನಿಲ್ಲಾ ಕೃಷಿ ವ್ಯಾಪಾರ, ಅಭಿವೃದ್ಧಿಗಳ ಕುರಿತು ಅಧ್ಯಯನ ಕೈಗೊಳ್ಳಬಹುದು

ಆ) ರಾಜ್ಯ ಸರ್ಕಾರವು ರಫ್ತು ಮತ್ತು ಸ್ಪರ್ಧಾತ್ಮಕವಾಗಿ ಅನುಕೂಲತೆ ಹೊಂದಿದ ಇತರ ವಸ್ತುಗಳನ್ನು ವ್ಯಾಪಾರಕ್ಕೆ ಸೇರ್ಪಡೆ ಮಾಡಲು ಮತ್ತು ಅಭಿವೃದ್ಧಿ ಪಡಿಸುವ ಬಗ್ಗೆ ಅಧ್ಯಯನದ ಅವಶ್ಯವಿದೆ.

ಇ) ಬೆಳೆಗಳ ತಳಿಶಾಸ್ತ್ರ(Crop genetics), ಹೊಸ ತಳಿಗಳು, ಕೊಯ್ಲು ನಂತರದ ತಂತ್ರಜ್ಞಾನ ಮತ್ತು ವ್ಯಾಪಾರದ ಅವಶ್ಯಕತೆಗಳ ಬಗ್ಗೆ ಅಧ್ಯಯನ.

ಈ) ತಾಲೂಕಾ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಪರಿಸರ ನಾಶಕ್ಕೆ ಒಳಗಾಗಿರುವ ಪ್ರದೇಶಗಳು ಮತ್ತು ಅವುಗಳ ಸಂಪನ್ಮೂಲಗಳನ್ನು ಗುರುತಿಸುವುದು. ಈ ಅಧ್ಯಯನವು ವಿಶೇಷ ಪರಿಸರ ಪ್ರದೇಶ ಎಂದು ಪರಿಗಣಿಸಿರುವ ಪಶ್ಚಿಮ ಘಟ್ಟ ಪ್ರದೇಶವನ್ನು ಒಳಗೊಂಡಿರಬೇಕು.

ಉ) ಸ್ಪರ್ಧಾತ್ಮಕವಾಗಿ ಮತ್ತು ತುಲನಾತ್ಮಕವಾಗಿ ಅನುಕೂಲತೆ ಹೊಂದಿರುವ ಮತ್ತು ರಫ್ತು ವ್ಯಾಪಾರದಲ್ಲಿ ವಿಶೇಷ ಪ್ರಾಮುಖ್ಯತೆ ಹೊಂದಿರುವ ಕರ್ನಾಟಕದ ಸರಕುಗಳನ್ನು ಗುರುತಿಸಿ ಅಧ್ಯಯನ ನಡೆಸುವುದು ಅವಶ್ಯವಿದೆ.

ಊ) ಸಾಪೇಕ್ಷ ಅನುಕೂಲಗಳನ್ನು ಕಂಡುಕೊಳ್ಳಲು ಪ್ರಾದೇಶಿಕ ವ್ಯಾಪಾರದ ಒಪ್ಪಂದಗಳು ಮತ್ತು ಬಹುಪಕ್ಷಿಯ ವ್ಯಾಪಾರ ಒಪ್ಪಂದಗಳ ಪಾತ್ರಗಳನ್ನು ನಿರ್ಧರಿಸುವ ಬಗೆಗಿನ ಅಧ್ಯಯನವನ್ನು ಕೈಗೊಳ್ಳುವುದು.

ಎ) ಸ್ಯಾನಿಟರಿ ಮತ್ತು ಫೈಟೊಸ್ಯಾನಿಟರಿ(SPS) ಕ್ರಮಗಳ ಕುರಿತ ಅಧ್ಯಯನ ಮತ್ತು ವ್ಯಾಪಾರದ ಬೌದ್ಧಿಕ ಆಸ್ತಿ ಹಕ್ಕುಗಳ ಅವಶ್ಯಕತೆಗಳ ಕುರಿತಾದ ಅಧ್ಯಯನವು ತಾಂತ್ರಿಕ ರಫ್ತಿನ ದೃಷ್ಟಿಯಿಂದ ಅತಿ ಮಹತ್ವ ಹೊಂದಿದೆ.

ಇ. ರಾಜ್ಯ ಸರಕಾರದ ಪರಿಶೀಲನೆಗಾಗಿ ವಿಶೇಷ ಅಂಶಗಳು:-

- ಸಾರ್ವತ್ರಿಕ ಸಮತೋಲನದ ಅಧ್ಯಯನದ ಪ್ರಕಾರ ಗೋಧಿ, ಅಕ್ಕಿ, ಹೈನು ಉತ್ಪಾದನೆಗಳು ಮತ್ತು ಕೃಷಿ ವಸ್ತುಗಳ ನಿವ್ವಳ ರಫ್ತು ಹಾಗೂ ಆಹಾರೇತರ ಉತ್ಪನ್ನಗಳ ಆಮದು ಅಧಿಕವಾಗಬಹುದು.
- ಆಂತರಿಕ ಸುಧಾರಣೆ(Internal reforms) ಗಳಿಂದಾಗಿ ಕೆಟ್ಟ ಪರಿಣಾಮಗಳಾಗಬಹುದೆಂಬ ಜನರ ತಪ್ಪು ಅಭಿಪ್ರಾಯವನ್ನು ಪರಿಹರಿಸಿ ಜನರ ಮನದಲ್ಲಿ ಸಮತೋಲನ ದೃಷ್ಟಿ ಮೂಡಿಸುವುದು ಅವಶ್ಯವಿದೆ. ಸವಿಸ್ತಾರ ಯೋಜನಾ ತತ್ವಗಳನ್ನು ಕೈಗೆತ್ತಿಕೊಂಡು ಸದ್ಯದ ಪರಿಸ್ಥಿತಿಯಲ್ಲಿಯ ಪ್ರಮುಖ ಅಂಶಗಳನ್ನು ಸರಿಪಡಿಸುವುದು.
- ಕೆಲವು ಅವಶ್ಯ ಸಹಾಯಕ ಕ್ರಮಗಳಾದ ಬೆಳೆ ವಿಮೆ , ಬರಗಾಲ ನಿಯಂತ್ರಕ ವೆಚ್ಚದ ಬಗೆಗೆ ಗಮನ ಹರಿಸುವುದು. ಇದು ಕೃಷಿ ಕ್ಷೇತ್ರದಲ್ಲಿ ಸುಸ್ಥಿತಿಯ ಪರಿಣಾಮ ಬೀರುತ್ತದೆ.
- ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ರಾಜ್ಯದ ಪಾತ್ರ ಮತ್ತು ಉದ್ಭವಿಸುವ ಪರಿಸ್ಥಿತಿಯ ಬಗ್ಗೆ ನಿರಂತರ ಸಲಹೆಗಳನ್ನು ಕೊಡಲು ರಾಜ್ಯಮಟ್ಟದಲ್ಲಿ ಕೇಂದ್ರ ವ್ಯವಸ್ಥೆಯ ಸ್ಥಾಪನೆಯ ಅವಶ್ಯವಿದೆ.
- ಸಹಕಾರಿ ಮತ್ತು ಸಾಂಸ್ಥಿಕ ಕೃಷಿಗಳಿಗೆ ಉತ್ತಮ ಬೀಜಗಳು ಮತ್ತು ಇತರ ಬಂಡವಾಳ ಒದಗಿಸುವುದರಿಂದ ಸಣ್ಣ ಸೀಮಂತ ಹಿಡುವಳಿಗಳ ಕ್ರೋಢೀಕರಣ ಸಾಧಿಸಬಹುದು. ಈ ಕೃಷಿ ನೀತಿಗಳನ್ನು ರೈತರ ಪೂರ್ಣ ಸಹಯೋಗದಿಂದ ತೆಗೆದುಕೊಳ್ಳುವುದು.
- ಕೇಂದ್ರ ಮತ್ತು ರಾಜ್ಯ ಮಟ್ಟದ ಕೃಷಿಯಲ್ಲಿ ಬಂಡವಾಳ ವೃದ್ದಿಸುವುದು ಅಗತ್ಯವಾಗಿದೆ. ಈ ಬಂಡವಾಳದಲ್ಲಿ ಖಾಸಾಗಿವಲಯವು ಬೆಳವಣಿಗೆಯ ದರದ ವೃದ್ದಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.
- ರಫ್ತು ಉತೇಜನ ನೀಡುವುದಕ್ಕಾಗಿ ಉತ್ತಮ ಮೌಲ್ಯವಿರುವ ಬೆಳೆಗಳ ಕ್ಷೇತ್ರದ ನೈಪುಣ್ಯತೆಯ ಕಡೆಗೆ ಹೆಚ್ಚಿನ ಗಮನ ಹರಿಸುವುದು ಅಗತ್ಯವಾಗಿದೆ.
- ಸಾಂಬಾರು ಸರಕು ಉದ್ಯಮವು ಪೈಟೋಸ್ಯಾನಿಟರಿ ಕ್ರಮಗಳಿಂದ ಸುಂಕ ರಹಿತ ಅನುಕೂಲಗಳನ್ನು ಹೊಂದಿವೆ. ಈ ವಸ್ತುಗಳ ಪರವಾಗಿ ರಾಜಯ ಸರಕಾರವು ಹೆಚ್ಚು ದಕ್ಷವಾದ ವಾದವನ್ನು ಮಂಡಿಸಬೇಕು.
- ಭಾರತ ಕಾಫಿಯು ಆರ್ ಕ್ರಾಟಾಕ್ಷಿಯನ್ (Orchrotoxian) ಹೊಂದಿರುವ ಸ್ಥಿತಿಯಿದೆ. ಆರ್ಥಿಕ ಮತ್ತು ತಾಂತ್ರಿಕ ಅಂಶಗಳ ಬಗ್ಗೆ ಅವಶ್ಯಕ ಕ್ರಮ ಕೈಗೊಂಡು ಈ ಸಮಸ್ಯೆಗಳನ್ನು ಎದುರಿಸಬೇಕು.
- ಪರಿಸರ ನಾಶಕ್ಕೆ ಒಳಗಾಗಿರುವ ಪ್ರದೇಶದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಪ್ರಾಂತಗಳಿಗೆ ಡಬ್ಲ್ಯೂ .ಟಿ.ಒ ದಿಂದ ಬರುವ ಅನುಕೂಲಗಳನ್ನು ಪಡೆಯುವುದಕ್ಕೆ ಸಿದ್ದತೆ ಮಾಡಬೇಕಾಗಿದೆ.
- ಕರ್ನಾಟಕದಲ್ಲಿ ಬೀಜ ಉದ್ಯಮವು ಸದಯದಲ್ಲಿ ಉದ್ಭವಗೊಳ್ಳುತ್ತಿದ್ದು . ಕೃಷಿ ಸಂಸ್ಕರಣಾ ಮತ್ತು ಬೀಜ ಉದ್ಯಮವು ಪೂರ್ಣ ಪ್ರಮಾಣದ ಉತೇಜನದೊಂದಿಗೆ ವಿಶ್ವ ಮಾರುಕಟ್ಟೆ ಪ್ರವೇಶಿಸಬೇಕಾಗಿದೆ.
- ಕೃಷಿ ಸಂಶೋಧನೆ ಮತ್ತು ಅಭಿವೃದ್ದಿಯಲ್ಲಿ ಬಂಡವಾಳು ನಿರ್ದಿಷ್ಟ ಮಟ್ಟದಲ್ಲಿಲ್ಲ. ಸಂಸ್ಕರಣಗೊಂಡ ಉತ್ಪನ್ನಗಳು ಪೈಪೋಟಿಯನ್ನು ಸಮರ್ಥವಾಗಿ ಎದುರಿಸಲು ಸಂಶೋಧನೆ ಮತ್ತು ಅಭಿವೃದ್ದಿಯನ್ನು ಬಲಪಡಿಸುವುದಕ್ಕಾಗಿ ಹೆಚ್ಚು ಬಂಡವಾಳ ಹೊಡಿಕೆಯ ಅವಶ್ಯವಿದೆ.
- ರೇಷ್ಮೆ ಕೃಷಿಯ ರಫ್ತು ಅಭಿವೃದ್ದಿಯ ಕಡೆಗೆ ಗಮನವಹಿಸಬೇಕಾಗಿದೆ. ರಾಜ್ಯದ ಹೂ ಕೃಷಿ , ರೇಷ್ಮೆ, ಕೋಳಿ ಸಾಕಾಣಿಕೆ, ಎಣ್ಣೆ ಬೀಜಗಳು ಮತ್ತು ಕೃಷಿ ಸಂಸ್ಕರಣೆ ಕ್ಷೇತ್ರಗಳಿಂದ ಉತ್ತಮ ಅನುಕೂಲ ಪಡೆಯಬಹುದಾಗಿದೆ.

- ಕೃಷಿ ವಿಶ್ವವಿದ್ಯಾಲಯಗಳು ಬದಲಾಗುತ್ತಿರುವ ಪರಿಸ್ಥಿತಿಗೆ ಅನುಗುಣವಾಗಿ ಕೃಷಿ ತಂತ್ರಜ್ಞಾನದ ಬಗ್ಗೆ ಸಂಶೋಧನೆ ಮತತು ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಬೇಕು. ಕೃಷಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು, ಸ್ಯಾನಿಟರಿ ಮತ್ತು ಫೈಟೊ ಸ್ಯಾನಿಟರಿ ಕ್ರಮಗಳು ಮತ್ತು ವ್ಯಾಪಾರ ಸಂಬಂಧಿತ ಬೌದ್ದಿಕ ಆಸ್ತಿಹಕ್ಕುಗಳ ಸ್ಥಳೀಯ ಅವಶ್ಯಕತೆಗಳ ಕಡೆಗೆ ಗಮನ ಹರಿಸಬೇಕು.
- ಮಾರುಕಟ್ಟೆಯ ತತ್ವಗಳ ಬಗ್ಗೆ ಸರಕಾರವು ಮೂಲಭೂತ ಸೌಕರ್ಯಗಳಿಗೆ ಸಾಲ ಒದಗಿಸಲು ಅವಶ್ಯಕ ಕ್ರಮ ಕೈಗೊಳ್ಳಬೇಕಾಗಿದೆ. ಇವುಗಳು ಮಾರುಕಟ್ಟೆ ಸ್ಥಿರತೆಯಿಂದ ಅಶಕ್ತ ಪಂಗಡಗಳಿಗೆ ಉತ್ತಮ ಆದಾಯ ತರುವಲ್ಲಿ ಸಹಾಯಕವಾಗುತ್ತದೆ. ಮಾರುಕಟ್ಟೆ ಪರಿಮಿತ ತತ್ವಗಳಿಂದ ಭಾರತದ ಆಹಾರ ಕೊರತೆ, ಗ್ರಾಮೀಣ ಉದ್ಯೋಗ ವಾತಾವರಣದ ರಕ್ಷಣೆಗಳನ್ನು ಆಲಕ್ಷಿಸಬಾರದೆಂದು ವಿಶ್ವವ್ಯಾಪಾರ ಸಂಘಟನೆ ಸೆಲ್ ಶಿಫಾರಸ್ಸು ಮಾಡುತ್ತದೆ.
- ಬಾಂಡೆಡ್ ಸುಂಕ ( Bonded tariffs) ಗಳ ಮಟ್ಟವನ್ನು ನಿರ್ಧರಿಸಲು ಭಾರತ ಸರಕಾರವು ಅನುರೂಪದ ಮತ್ತು ಸಮಂಜಸವಾದ ಉತ್ಪಾದನಾ ಕ್ಷೇತ್ರ , ರಫ್ತು ಸ್ಪರ್ಧೆ, ಸ್ವದೇಶಿ ಮಾರುಕಟ್ಟೆಯ ಸುಧಾರಣೆಗಳ ಬಗ್ಗೆ ಗಮನವಿಡುವುದು ಅವಶ್ಯಕವಾಗಿದೆ.
- ರಾಜ್ಯ ವ್ಯಾಪಾರಿ ಘಟಕಗಳು ನಿರಂತರವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುವುದು ಅಗತ್ಯವಿದೆ. ಈ ರೀತಿ ಕ್ರಮಗಳು ಮುಂದುವರೆಯುತ್ತಿದ್ದರೆ ಸ್ವದೇಶಿ ಮತ್ತು ವಿದೇಶಿ ಮಾರುಕಟ್ಟೆಯ ಬೇಡಿಕೆಗಳಿಗೆ ಸಾಧನವಾಗುತ್ತದೆ.
- ಪ್ರಸ್ತಾಪಿತ ತೆರಿಗೆ ಧರಗಳು ಪೂರ್ಣ ಪಾರದರ್ಶಕತೆಗಳನ್ನು ಹೊಂದಿರಬೇಕು ಮತ್ತು ರಾಜ್ಯ ಸರಕಾರಗಳ ಜೊತೆಗೆ ಪರಾಮರ್ಶಿಸಬೇಕು. ಈ ತೆರಿಗೆ ದರಗಳನ್ನು ವಿಶೇಷವಾಗಿ ಹೆಚ್ಚು ವಸ್ತುಗಳನ್ನು ಉತ್ಪಾದಿಸುವ ರಾಜ್ಯಗಳ ಜೊತೆಗೆ ಪರಾಮರ್ಶಿಸಿ ನಿರ್ಧರಿಸಬೇಕು.
- ಭಾರತವು ಅಭಿವೃದ್ಧಿ ಪೆಟ್ಟಿಗೆ (development box) ಯ ಬಗೆಗೆ ಪ್ರಯತ್ನಿಸಬೇಕು.
- ವಿಶ್ವವ್ಯಾಪಾರ ಸಂಘಟನೆ ಸೆಲ್‌ವು ವ್ಯಾಪಾರಕ್ಕೆ ಸಂಬಂಧಿಸಿದ ಸೂಕ್ತ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಬೇಕು ಮತ್ತು ಸೆಲ್‌ವು ವ್ಯಾಪಾರ ವಾತಾವರಣವನ್ನು ಅಭಿವೃದ್ಧಿಗೊಳಿಸಲು ಸ್ವದೇಶ ವ್ಯಾಪಾರಕ್ಕೆ ಸಂಬಂಧಿಸಿದ ವಸ್ತುಗಳ ಬಗೆಗಿನ ಅಂಕಿ ಅಂಶಗಳನ್ನು ಶೇಖರಿಸಿ ರೈತರಿಗೆ, ವ್ಯಾಪಾರಸ್ತರಿಗೆ ಮತ್ತು ಸರ್ಕಾರಕ್ಕೆ ಸೂಕ್ತ ಮಾಹತಿ ಕೊಡುವುದರಿಂದ ವ್ಯಾಪಾರ ಕ್ಷೇತ್ರವು ಹೆಚ್ಚು ಸಾಮರ್ಥ್ಯ ಹೊಂದಲು ಸಹಾಯವಾಗುತ್ತದೆ. ಈ ಮಾಹಿತಿಗಳಿಂದ ಪಣ ಒಡ್ಡುವವರು ಮುಂಬರುವ ಅಡೆತಡೆಗಳಿಗೆ ಸ್ಪಂದಿಸಲು ಸಹಕಾರಿಯಾಗುತ್ತದೆ.
- ವಿಶ್ವವ್ಯಾಪಾರ ಸಂಘಟನೆ ಸೆಲ್ ತನ್ನ ವರದಿಯನ್ನು ಸ್ಥಳೀಯ (ಕನ್ನಡ) ಭಾಷೆಗೆ ತರ್ಜುಮೆ ಮಾಡಿದಲ್ಲಿ ರೈತರಿಗೆ ಮತ್ತು ವ್ಯಾಪಾರಸ್ಥರಿಗೆ ಅದರ ಉಪಯೋಗವನ್ನು ಪಡೆಯಲು ಸಹಕಾರಿಯಾಗುತ್ತದೆ. ಸೆಲ್ ನಿರಂತರವಾಗಿ ಲಘು ಪ್ರಕಟಣೆ(bulletin) ರೂಪದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರಿ ಕ್ಷೇತ್ರಕ್ಕೆ ಸಂಬಂಧಿಸಿದ ಸೂಕ್ತ ಮಾಹಿತಿಯನ್ನು ಒದಗಿಸುತ್ತಿರಬೇಕು.

# ಭಾಗ-2

## ಪೀಠಿಕೆ

### 2.1 ವಿಶ್ವವ್ಯಾಪಾರ ಸಂಘಟನೆಯ ಬಗ್ಗೆ:

ಸುಂಕ ಮತ್ತು ವ್ಯಾಪಾರದ ಸಾರ್ವತ್ರಿಕ ಒಪ್ಪಂದ (ಗ್ಯಾಟ್) ಸ್ಥಾಪನೆಯಾದ 1947 ರಿಂದ ನಡೆದ ಸಂಧಾನಗಳ ಫಲವಾಗಿ ವಿಶ್ವವ್ಯಾಪಾರ ಸಂಘಟನೆಯು 1995 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಪ್ರಾರಂಭದ ಸುತ್ತುಗಳಲ್ಲಿ ಸುಂಕ ರಿಯಾಯಿತಿ ತೋರಿಸಲು ಸದಸ್ಯರುಗಳು ತಮ್ಮ ನಡುವೆ ಮಾಡಿಕೊಳ್ಳುವ ಒಪ್ಪಂದಗಳ ಬಗ್ಗೆ ಗಮನ ನೀಡಲಾಗಿತ್ತು. ಇತ್ತೀಚಿನ ಅಂದರೆ 1986 ರ ಉರುಗ್ವೇ ಸುತ್ತಿನಲ್ಲಿ ವಿಶ್ವವ್ಯಾಪಾರದ ಸುಧಾರಣೆಗೆ ಸಂಬಂಧಿಸಿದಂತೆ ಒಂದು ಶಾಶ್ವತ ಸಂಘಟನೆಯ ಅವಶ್ಯಕತೆಯನ್ನು ಮನಗಂಡು ಇದಕ್ಕೆ ಸಂಬಂಧಿಸಿದಂತೆ ಸರ್ ಆರ್ಥರ್ ಡಂಕೆಲ್ಲರು ಕರಡು ಪ್ರಸ್ತಾವನೆಗಳನ್ನು ಮಂಡಿಸಿದರು. ಈ ಕರಡು ಎಲ್ಲಾ ರಾಷ್ಟ್ರಗಳಲ್ಲಿ ವ್ಯಾಪವಾಗಿ ಚರ್ಚಿಸಲ್ಪಟ್ಟಿತ್ತು. ಭಾರತವು ಗ್ಯಾಟ್ ಸ್ಥಾಪನಾ ಸದಸ್ಯ ರಾಷ್ಟ್ರವಾಗಿ ಪ್ರಥಮ ಸುತ್ತಿನ ಮಾತುಕತೆಯಲ್ಲಿ ಭಾಗವಹಿಸಿದ್ದರೂ ಕೂಡ ಜಟಿಲ ವ್ಯಾಪಾರ ನೀತಿಯಿಂದ ಭಾರತಕ್ಕೆ ಸಂಬಂಧಿಸಿದ ಹಲವು ವಿಷಯಗಳು ಹಿಂದಿನ ಸುತ್ತುಗಳಲ್ಲಿ ಹೆಚ್ಚಿಗೆ ಬೆಳಕಿಗೆ ಬರಲಿಲ್ಲ. ಪ್ರಸ್ತುತ ಮಹತ್ವದ ವ್ಯಾಪರ ನೀತಿಗಳಲ್ಲಿಯ ಬದಲಾವಣೆಗಳಿಂದ ಚರ್ಚಿತ ವಿಷಯಗಳನ್ನು ಪರಿಗಣಿಸುವುದು ಸೂಕ್ತವಾಗಿದೆ. ಜಾಗತಿಕ ವ್ಯಾಪಾರದಲ್ಲಿ ಸಂಮಿಶ್ರಿತ ವ್ಯವಹಾರಗಳು ವಿವಿಧ ದೇಶಗಳ ಜೊತೆಗೆ ನಡೆಯುತ್ತಿರುವುದರಿಂದ ಈ ರೀತಿಯ ವ್ಯವಹಾರಗಳಲ್ಲಿ ಹಲವಾರು ದೇಶದ ಕಾನೂನುಗಳ ಮಧ್ಯ ವ್ಯವಹರಿಸಬೇಕಾಗುತ್ತದೆ. ಜಾಗತಿಕ ವ್ಯಾಪಾರದಲ್ಲಿ ಏಕರೂಪ ಕಾನೂನಿನ ಅವಶ್ಯಕತೆಯು ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಮಹತ್ವ ಪಡೆದಿರುತ್ತದೆ. ವಿಶ್ವ ವ್ಯಾಪಾರವು ಅಂತರಾಷ್ಟ್ರೀಯ ಸಾಮರ್ಥ್ಯ ವೃದ್ಧಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ವ್ಯಾಪಾರದಲ್ಲಿ ಭಾಗಿಯಾದ ವಿವಿಧ ದೇಶಗಳು ತಮಗೆ ಅನುಕೂಲವಾದ ಹೆಚ್ಚಿನ ಸಂಪನ್ಮೂಲ ಹೊಂದಿದ ವಸ್ತುಗಳನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದಿಸಲು ಸಮರ್ಥ್ಯವಾಗುತ್ತವೆ. ಈ ನಿಟ್ಟಿನಲ್ಲಿ ವಿಶ್ವ ವ್ಯಾಪಾರ ಸಂಘಟನೆಯು ಮಾನವ ಜನಾಂಗದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ವಿಶ್ವ ವ್ಯಾಪಾರ ಸಂಘಟನೆಯು ಸದಸ್ಯ ದೇಶಗಳ ನಡುವಿನ ವ್ಯಾಪಾರದಲ್ಲಿ ಬರುವ ನಿಯಮಾವಳಿಗಳನ್ನು ಕಾಪಾಡುವ ಅಂತರಾಷ್ಟ್ರೀಯ ಮಟ್ಟದ ಪ್ರಮುಖ ಸಂಘಟನೆಯಾಗಿದೆ. ಇದರ ಕರಾರು, ಅಂತರಾಷ್ಟ್ರೀಯ ವ್ಯಾಪಾರಕ್ಕೆ ನ್ಯಾಯಯುತ ತಳಹದಿಯನ್ನು ಒದಗಿಸುತ್ತದೆ. ಇವುಗಳು ವ್ಯಾಪಾರದಲ್ಲಿ ವಿವಿಧ ದೇಶಗಳು ಕೈಗೊಂಡ ವ್ಯಾಪಾರ ಒಪ್ಪಂದಗಳ ಪರಿಧಿಯಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತದೆ. ವಿಶ್ವ ವ್ಯಾಪಾರ ಸಂಘಟನೆಯು ಒಂದು ಅಂತರ್ ಸರಕಾರಗಳ ಸಂಘಟನೆ ನಿಜ, ಆದರೆ ಇದರಲ್ಲಿಯ ನಿಯಮಾವಳಿಗಳು ಕೇವಲ ವ್ಯಾಪಾರಕ್ಕೆ ಸೀಮಿತವಾಗಿದ್ದು, ಆಮದು ರಫ್ತುಗಳಿಗೊಳಪಡುವ ಸರಕು ಸೇವೆಗಳ ಮೇಲೆ ಕೇಂದ್ರೀಕೃತವಾಗಿದೆ. ಪ್ರಸ್ತುತ ಇತ್ತೀಚಿನ ವರ್ಷಗಳಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಮೇಲೆ ಮಾನವ ಸಮೂಹದ ಒತ್ತಡ ಹೆಚ್ಚುತ್ತದೆ. ಅಂದರೆ ಇದು ಜನತೆ, ಕೆಲಸಗಾರರ, ರೈತರ ಮತ್ತು ಗ್ರಾಹಕರ ಇಚ್ಛೆ ಮತ್ತು ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸಬೇಕಾಗಿದೆ. ಅದರಂತೆ ಜಾಗತಿಕ ಸಮಸ್ಯೆಗಳಾದ ಬಡತನ, ಪರಿಸರ ಮತ್ತು ಕೂಲಿಕಾರರ ಸಾಧಕ ಬಾಧಕಗಳ ಕಡೆಗೆ ಪೂರ್ಣ ಲಕ್ಷ್ಯವಹಿಸಬೇಕಾಗಿದೆ.

**2.2 ಸುಂಕ ಮತ್ತು ವ್ಯಾಪಾರದ ಸಾರ್ವತ್ರಿಕ ಒಪ್ಪಂದ ಮತ್ತು ವಿಶ್ವ ವ್ಯಾಪಾರ ಸಂಘಟನೆಯ ಒಂದು ಪಕ್ಷಿನೋಟ:**

| ಕ್ರ. ಸಂ. | ವರ್ಷ/ದಿನಾಂಕ | ಸಭೆ ನಡೆದ ಸ್ಥಳ/ದೇಶದ ಹೆಸರು | ಪ್ರಮುಖ ನಿರ್ಣಯಗಳು |
|---|---|---|---|
| 1. | 1947, ಅಕ್ಟೋಬರ್ 30 | ಪ್ಯಾಲೈಸ್, ಡಿಸ್ ಸ್ಟೇಷನ್, ಜಿನೀವಾ | ಗ್ಯಾಟ್ ಉದಯ, ಭಾರತವೂ 23 ರಾಷ್ಟ್ರಗಳು ಗ್ಯಾಟ್ ಒಪ್ಪಂದದ ಸ್ಥಾಪಕ ಸದಸ್ಯರು. |
| 2. | 1948, ಜನವರಿ 01 | ಜಿನೀವಾ | ಗ್ಯಾಟ್‌ನ ಕಾರ್ಯ ಆರಂಭ. |
| 3. | 1948, ಫೆಬ್ರವರಿ 28 ರಿಂದ ಮಾರ್ಚ್ 20 | ಮೊದಲನೇ ಸುತ್ತು ಹವಾನಾ, ಕ್ಯೂಬಾ | ಪ್ರಥಮ ವಾಣಿಜ್ಯ ಒಪ್ಪಂದದಲ್ಲಿ ಭಾಗವಹಿಸಿದ ರಾಷ್ಟ್ರಗಳ ನಡುವೆ ಮಾತುಕತೆ ನಡೆಯಿತು. |
| 4. | 1949, ಏಪ್ರಿಲ್ ನಿಂದ ಆಗಸ್ಟ್ | ಎರಡನೇ ಸುತು ಅನೇಸಿ, ಫ್ರಾನ್ಸ್ | ವ್ಯಾಪಾರ ಒಪ್ಪಂದದ ರಾಷ್ಟ್ರಗಳು ಸುಮಾರು 5,000 ಸುಂಕ ರಿಯಾಯಿತಿಗಳನ್ನು ವಿನಿಮಯ ಮಾಡಿಕೊಂಡವು. |
| 5. | 1950-51 ಸೆಪ್ಟಂಬರ್ ನಿಂದ ಏಪ್ರಿಲ್ | ಮೂರನೇ ಸುತ್ತು ಟರಕ್ವೇ, ಇಂಗ್ಲೆಂಡ್ | ವ್ಯಾಪಾರ ಒಪ್ಪಂದದ ರಾಷ್ಟ್ರಗಳು ಸುಮಾರು 8,700 ಸುಂಕ ರಿಯಾಯಿತಿಗಳನ್ನು ವಿನಿಮಯ ಮಾಡಿಕೊಂಡವು. 4 ಹೊಸ ರಾಷ್ಟ್ರಗಳು ಸೇರ್ಪಡೆಯಾದವು. |
| 6. | 1956, ಮೇ | ನಾಲ್ಕನೇ ಸುತ್ತು ಜಿನೀವಾ | ಸುಮಾರು 2.5 ಬಿಲಿಯನ್ ಡಾಲರ್ ಮೌಲ್ಯದ ಸುಂಕಗಳನ್ನು ಕಡಿತಗೊಳಿಸಲಾಯಿತು. |
| 7. | 1960, ಸೆಪ್ಟಂಬರ್ | ಐದನೆ (ಡಿಲ್ಲಾನ್) ಸುತ್ತು ಜಿನೀವಾ | ಯೂರೋಪಿನ ಆರ್ಥಿಕ ಸಮುದಾಯದ ಸದಸ್ಯ ರಾಷ್ಟ್ರಗಳ ಜೊತೆಗೆ ಏಕ ರೂಪದ ಸುಂಕ ರಿಯಾಯಿತಿ ಪಡೆಯಲು ಸಮುದಾಯದ ಸಾರ್ವತ್ರಿಕ ಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸಂಧಾನ ಪ್ರಾರಂಭ. |
| 8. | 1964, ಮೇ | ಆರನೇ ಸುತ್ತು ಕೆನಡಾ, ಜಿನೀವಾ | ಮಂತ್ರಿಮಂಡಲ ಮಟ್ಟದ ಮಾತುಕತೆ. |
| 9. | 1965, ಫೆಬ್ರವರಿ | ಜಿನೀವಾ | ಹೊಸ ಅಧ್ಯಾಯ ಸೇರ್ಪಡೆ. ಇದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಂದ ಬಂದ ವಸ್ತುಗಳಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ತೆರಿಗೆ ಕಡಿತ. ಗ್ಯಾಟ್ ಹೊಸ ಕಾರ್ಯಾಚರಣೆಯನ್ನು ನೋಡಿಕೊಳ್ಳಲು ವ್ಯಾಪಾರ ಮತ್ತು ಅಭಿವೃದ್ಧಿ ಸಮಿತಿಯನ್ನು ಸ್ಥಾಪಿಸಲಾಯಿತು. |
| 10. | 1967, ಜೂನ್ | ಜಿನೀವಾ | ಸುಮಾರು 50 ರಾಷ್ಟ್ರಗಳು ಕೆನಡಾ ಸುತ್ತಿನ ಅಂತಿಮ ನಿಯಮಕ್ಕೆ ಸಹಿ ಹಾಕಿದವು. |

| | | | |
|---|---|---|---|
| 11. | 1973, ಸೆಪ್ಟಂಬರ್ | ಏಳನೇ ಸುತ್ತು ಟೋಕಿಯೋ, ಜಪಾನ್ | ಸುಂಕ ಮತ್ತು ಸುಂಕೇತರ ವಿಷಯಗಳ ಕುರಿತು ಒಂದು ಬಹು ವ್ಯಾಪಾರ ಒಪ್ಪಂದ ತರಲು 99 ದೇಶಗಳು ಭಾಗವಹಿಸಿದ್ದವು. |
| 12. | 1974 ಜನವರಿ 1 | ಜಿನೀವಾ | ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಬಟ್ಟೆ ಉದ್ಯಮ ಸೇರಿಸಲ್ಪಟ್ಟಿತು. |
| 13. | 1982 ನವೆಂಬರ್ | ಎಂಟನೇ ಸುತ್ತು ಉರುಗ್ವೆ | ಉರುಗ್ವೆ ಸುತ್ತಿನ ಒಪ್ಪಂದದ ಕಾರ್ಯದಲ್ಲಿ ಕೆಲಸ ಪ್ರಾರಂಭಿಸಲು ಮಂತ್ರಿಗಳು ಒಪ್ಪಿಗೆ ನೀಡಿದ್ದರು. |
| 14. | 1986 ಸೆಪ್ಟಂಬರ್ | ಪುಂಟಾ ಡಿಲ್ ಎಸ್ಟೆ ಜಿನೀವಾ | ವ್ಯಾಪಾರ ಸಂಧಾನದಲ್ಲಿಯೇ ದೊಡ್ಡದೆಂದು ಪರಿಗಣಿಸಲಾದ ಮಂತ್ರಿಮಂಡಲದ ಪ್ರಕಟಣೆ ಜಾರಿಯಲ್ಲಿ ಬಂದಿತು. |
| 15. | 1988 | ಮೊಂಟ್ರೀಲ್, ಕೆನಡಾ | ಪುಂಟಾ ಡಿಲ್ ಪ್ರಕಟಣೆಯ ಮಧ್ಯಂತರ ವಿಮರ್ಶೆ ನಡೆಯಿತು. |
| 16. | 1990 ಡಿಸೆಂಬರ್ | ಬ್ರುಸೆಲ್ಸ್ | ಮಂತ್ರಿಮಂಡಲದ ಸಭೆಯು ನಿರೀಕ್ಷಿತ ಯಶಸ್ಸು ಹೊಂದಲಿಲ್ಲ. |
| 17. | 1993 ಡಿಸೆಂಬರ್ 15 | ಜಿನೀವಾ, ಸ್ವಿಟ್ಸ್‌ಜರ್‌ಲ್ಯಾಂಡ್ | ಉರುಗ್ವೆ ಸುತ್ತಿನ ಅಂತಿಮ ಕ್ರಿಯೆಗೆ ಮಂತ್ರಿಮಂಡಲದ ಹಸ್ತಾಕ್ಷರ ದೊರೆಯಿತು. |
| 18. | 1994 ಏಪ್ರಿಲ್ 15 | ಮರಕೇಶ್, ಮೊರಾಕ್ಕೊ | ಉರುಗ್ವೆ ಸುತ್ತಿನ ಅಂತಿಮ ಕ್ರಿಯೆಗೆ ಮಂತ್ರಿಮಂಡಲದ ಸಹಿ ದೊರೆಯಿತು. |
| 19. | 1995 ಜನವರಿ 1 | ಮರಕೇಶ್, ಮೊರಾಕ್ಕೊ | ವಿಶ್ವ ವ್ಯಾಪಾರ ಸಂಘಟನೆಯ ಉದಯವಾಯಿತು. |
| 20. | 1995 ಮೇ 31 | ಜಿನೀವಾಸ್ | ವಿಶ್ವ ವ್ಯಾಪಾರ ಸಂಘಟನೆಯ ಸಾಮಾನ್ಯ ಮಂಡಳಿಯ ಪ್ರಧಾನ ಕಾರ್ಯಾಲಯ ಮತ್ತು ಸ್ವಿಸ್ ರಾಷ್ಟ್ರಗಳ ಒಕ್ಕೂಟ ಹಾಗೂ ಜಿನೀವಾದಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಪ್ರಧಾನ ಕಛೇರಿಯ ಸ್ಥಾಪನೆಗೆ ಒಪ್ಪಿಗೆ ನೀಡಿತು. |
| 21. | 1996 ಡಿಸೆಂಬರ್ 9-13 | ಸಿಂಗಪೂರ್ | ಮೂರು ಪ್ರಮುಖ ಕಾರ್ಯಗುಂಪುಗಳಾದ ವ್ಯಾಪಾರ ಮತ್ತು ಹೂಡಿಕೆ, ವ್ಯಾಪಾರ ಮತ್ತು ಸ್ಪರ್ಧೆ ಮತ್ತು ಸರಕಾರದ ವ್ಯವಹಾರದಲ್ಲಿ ಪಾರದರ್ಶಕತೆಗಳಲ್ಲದೆ ವ್ಯಾಪಾರ ಸವಲತ್ತು ಕುರಿತು ಅಧ್ಯಯನಕ್ಕೆ ಬಹುಮತ ದೊರೆಯಿತು. |

| | | | |
|---|---|---|---|
| 22. | 1997<br>ಫೆಬ್ರವರಿ 15 | ಜಿನೀವಾ | ದೂರ ಸಂಪರ್ಕ ಸೇವೆ ಕುರಿತು ಸಂಧಾನ ಕಾರ್ಯ ಅಂತಿಮಗೊಂಡಿತು. 69 ದೇಶಗಳು ಹೆಚ್ಚಿನ ವ್ಯಾಪಾತಿಯ ಉದಾರೀಕರಣ ಕ್ರಮಗಳಿಗೆ ಒಪ್ಪಿಗೆ ನೀಡಿದವು. |
| 23. | 1997<br>ಮಾರ್ಚ್ 26 | ಜಿನೀವಾ | ಮಾಹಿತಿ ತಂತ್ರಜ್ಞಾನ ವಸ್ತುಗಳ ಮೇಲಿನ ವ್ಯಾಪಾರ ಸುಂಕವನ್ನು ಜುಲೈ 1997 ರಿಂದ ಕಡಿತಗೊಳಿಸಲು 40 ದೇಶಗಳು ಒಪ್ಪಿಗೆ ನೀಡಿದವು. |
| 24. | 1999 ನವೆಂಬರ್ 30 ರಿಂದ ಡಿಸೆಂಬರ್ 3 | ಸಿಯಾಟಲ್, ಅಮೇರಿಕಾ | ಸಿಯಾಟಾಲ್ ನಲ್ಲಿ ಕಾರ್ಮಿಕರು ಮತ್ತು ಪರಿಸರದ ವಿಷಯ ಕುರಿತು ಪ್ರತಿಭಟನೆ ನಡೆಯಿತು. ಈ ಸಭೆಯಲ್ಲಿ ಕಾರ್ಮಿಕರು, ಬಂಡವಾಣ ಹೂಡಿಕೆ, ಪೈಪೋಟಿ ನೀತಿ ಮತ್ತು ಕೃಷಿ ಅನುಷ್ಟಾನ ಇತ್ಯಾದಿ ಹೊಸ ವಿಷಯಗಳು ಚರ್ಚೆಗೆ ಬಂದವು. ಆದರೂ, ಈ ಸಂಧಾನ ಸಭೆಯು ಧೃಡ ನಿರ್ಣಯ ಕೈಗೊಳ್ಳುವಲ್ಲಿ ವಿಫಲಗೊಂಡಿತು. |
| 25. | 2000 | ಜಿನೀವಾ | ಕೃಷಿಗೆ ಸಂಬಂಧಿಸಿದ ಉತ್ತೇಜನ ಮತ್ತು ಸಂಸ್ಕರಣ ನೀತಿಯಲ್ಲಿ ಕಡಿತ ಕುರಿತು ಚರ್ಚೆ. |
| 26. | 2001 | ಕಾರ್ಯಕ್ರಮ | ಜವಳಿ ಉಧ್ಯಮ ಮತ್ತು ಜವಳಿ ಕುರಿತಾದ ನಿರ್ಣಯಗಳನ್ನು 2001 ರಲ್ಲಿ ಜಾರಿ ತರುವುದು. |
| 27. | 2004 | ಕಾರ್ಯಕ್ರಮ | ಜವಳಿ ಉಧ್ಯಮ ಮತ್ತು ಜವಳಿ ಮುಂತಾದ ನಿರ್ಣಯಗಳನ್ನು 2004 ರಲ್ಲಿ ಜಾರಿಗೆ ತರುವುದು. |

ಆಧಾರ: ಅರುಣ್ ಗೋಯೆಲ್ ((2000).

## 2.3 ವಿಶ್ವ ವ್ಯಾಪಾರ ಸಂಘಟನೆಯಲ್ಲಿ ವ್ಯಾಪಾರ ವ್ಯವಸ್ಥೆಯ ಮೂಲ ತತ್ವಗಳು:

### i. ರಾಷ್ಟ್ರಗಳ ನಡುವೆ ತಾರತಮ್ಯವಿರುವುದಿಲ್ಲ; ಸಮಾನ ಬೆಂಬಲ:

ವ್ಯಾಪಾರ ವ್ಯವಸ್ಥೆಯಲ್ಲಿ ಯಾವುದೇ ತಾರತಮ್ಯವಿರುವುದಿಲ್ಲ. ಎಲ್ಲಾ ರಾಷ್ಟ್ರಗಳನ್ನು 'ಅತ್ಯಂತ ಒಲವಿನ ರಾಷ್ಟ್ರ' ವೆಂದು ಪರಿಗಣಿಸಲಾಗುತ್ತದೆ. ಎಲ್ಲಾ ರಾಷ್ಟ್ರಗಳು ಒಂದೇ ಸಮನಾವೆಂದು ತಿಳಿದು ಕಾರ್ಯ ನಿರ್ವಹಿಸಲು ಸಹಕಾರಿಯಾಗುವಂತೆ ವ್ಯವಸ್ಥೆ ಇದೆ. ಎಲ್ಲಾ ದೇಶಗಳು ವ್ಯಾಪಾರ ತಡೆಗಳನ್ನು ಕಡಿಮೆ ಮಾಡಿ ಎಲ್ಲಾ ಸಮಯದಲ್ಲೂ ವ್ಯಾಪಾರ ಅಡೆತಡೆಗಳ ನಿವಾರಣೆಗೆ ಅಥವಾ ಮಾರುಕಟ್ಟೆ ಅವಕಾಶಗಳನ್ನು ಪಡೆಯಲು ಬಡರಾಷ್ಟ್ರ, ಹಿಂದುಳಿದ ರಾಷ್ಟ್ರ , ಬಲಯುತ ರಾಷ್ಟ್ರ ಮತ್ತು ಬಲಹೀನ ರಾಷ್ಟ್ರ ಎಂಬ ಭೇದವಿಲ್ಲದೆ ಸುಂಕ ಸೇವೆಗಳ ವ್ಯಾಪಾರವನ್ನು ವಿಶ್ವ ಸಂಘಟನೆಯ

ಒಂದು ಸದಸ್ಯ ರಾಷ್ಟ್ರವೆಂದು ಪರಿಗಣಿಸಿ ನಡೆಸಬೇಕು.  ಹೀಗೆ ಎಲ್ಲಾ ರಾಷ್ಟ್ರಗಳು ಸಮತತ್ವವನ್ನು ವ್ಯಾಪಾರದಲ್ಲಿ ಅನುಷ್ಟಾನಕ್ಕೆ ತರಲು ಸಾಧ್ಯ.

ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರಗಳು ಸರಿಸಮಾನವಾಗಿ ವರ್ತಿಸಬೇಕು.  ಯಾವುದೇ ದೇಶ ವ್ಯಾಪರದಲ್ಲಿ ಒಂದು ದೇಶದ ಜೊತೆಗಿನ ವ್ಯಾಪಾರ ಸುಗಮಗೊಳಿಸಲು ಕೆಲವು ಆಕರ್ಷಕ ಕಾನೂನು ಜಾರಿಗೆ ತಂದರೆ ಆದೇ ತರಹದ ಕಾನೂನುಗಳನ್ನು ಇತರ ದೇಶಗಳಿಗೂ ಅನ್ವಯವಾಗುವಂತೆ ಮೋಡಿಕೊಳ್ಳಬೇಕು.  ಇದರಿಂದ ಎಲ್ಲಾ ರಾಷ್ಟ್ರಗಳು ಸಮನಾದ ಸ್ಥಾನಮಾನವನ್ನು ಹೊಂದಿರುತ್ತವೆ.

**ii. ದೇಶದೊಳಗೆ ತಾರತಮ್ಯವಿರಬಾರದು; ರಾಷ್ಟ್ರೀಯ ಉಪಚಾರ:**

ವಿದೇಶಿ ವಸ್ತುಗಳು ಮಾರುಕಟ್ಟೆ ಪ್ರವೇಶ ಮಾಡಿದ ದೇಶದಲ್ಲಿ ಆಮದಾದ ವಸ್ತುಗಳು ಮತ್ತು ಸ್ಥಳೀಯವಾಗಿ ಉತ್ಪಾದನೆಯಾದ ವಸ್ತುಗಳನ್ನು ಸಮಾನವಾಗಿ ಪರಿಗಣಿಸಬೇಕು.  ಇದೇ ನಿಯಮ ಸ್ಥಳೀಯ ಮತ್ತು ವಿದೇಶಿಯ ಸೇವೆಗಳು, ದೇಶೀಯ ವ್ಯಾಪಾರಿ ಪೇಟೆಂಟ್ ಮತ್ತು ಕಾಪಿರೈಟ್‌ಗಳಿಗೂ ಅನ್ವಯವಾಗುತ್ತದೆ.

**iii. ಮುಕ್ತವ್ಯಾಪಾರ; ಸಂಧಾನದ ಮೂಲಕ:**

ವ್ಯಾಪಾರದಲ್ಲಿಯ ಅಡಿತಡೆಗಳನ್ನು ಕಡಿಮೆ ಮಾಡುವುದು ಒಂದು ವ್ಯಾಪಾರಕ್ಕೆ ಉತ್ತೇಜನ ನೀಡುವ ಮಾರ್ಗ. ಈ ಅಡೆತಡೆಗಳನ್ನು ಪ್ರಮುಖವಾದವುಗಳೆಂದರೆ ಸುಂಕಗಳು ಮತ್ತು ಪರಿಮಾಣಾತ್ಮಕ ನಿರ್ಬಂಧಗಳಾದ ಆಮದಿನ ತಡೆ ಮತ್ತು ಕೋಟಾಗಳು.

**iv. ಪೂರ್ವ ಸೂಚನೆ: ನಿಗದಿತ ಸುಂಕದ ಮುಖಾಂತರ:**

ವಿಶ್ವ ವ್ಯಾಪಾರ ಸಂಘಟನೆಯಲ್ಲಿನ ಸದಸ್ಯ ರಾಷ್ಟ್ರಗಳು ಮತ್ತು ಸೇವೆಗಳ ವ್ಯಾಪಾರಕ್ಕಾಗಿ ಮುಕ್ತ ಮಾರುಕಟ್ಟೆ ನೀತಿಯನ್ನು ಅನುಸರಿಸುವಾಗ ತಮ್ಮ ಕರಾರುಗಳಿಗೆ ಬದ್ಧವಾಗಿರುತ್ತವೆ.  ವಸ್ತುಗಳ ವ್ಯಾಪಾರದ ವಿಷಯದಲ್ಲಿ ಈ ಬದ್ಧತೆಯು ಸುಂಕದ ದರವನ್ನು ಗರಿಷ್ಟ ಮಿತಿಗೆ ಒಳಪಡಿಸುವುದಾಗಿದೆ.  ದೇಶಗಳು ಯಾವುದೇ ಸಂದರ್ಭದಲ್ಲಿ ಈ ದರವನ್ನು ಹೆಚ್ಚಿಸಲು ಅವಕಾಶವಿಲ್ಲ.  ಈಗ ಈ ಬದ್ಧತೆಯನ್ನು ದೂರಸಂಪರ್ಕ ಕ್ಷೇತ್ರಕ್ಕೆ ವಿಸ್ತರಿಸಲಾಗಿದೆ.

**v. ನಿಸ್ಪಕ್ಷಪಾತರ ಸ್ಪರ್ಧೆಗೆ ಉತ್ತೇಜನ:**

ವಿಶ್ವ ವ್ಯಾಪಾರ ಸಂಘಟನೆಯ ವ್ಯವಸ್ಥೆಯು ನಿಸ್ಪಕ್ಷಪಾತವಾದ ಸ್ಪರ್ಧೆಗೆ ಸಮರ್ಥಿತವಾಗಿದ್ದು ಅಂತಹುದಕ್ಕೆ ಸುಗಮ ಮಾರ್ಗ ಕಲ್ಪಿಸಿಕೊಡುತ್ತದೆ.  ಕರ ಕಡಿತ, ಕೆಲವು ವಚುವಟಿಕೆಗಳ ಕಡಿತವು ಒಂದಕ್ಕೊಂದು ಹೊಂದಿಕೊಂಡು ಹೋಗುತ್ತದೆ.  ಅಂತರಿಕವಾಗಿ ತಯಾರಾದ ಉತ್ಪನ್ನಗಳು ವಿದೇಶದ ವಸ್ತುಗಳ ಜೊತೆಗೆ ಒಂದೇ ಸಮನಾದ ತೆರಿಗೆ ಹಾಗೂ

ರಿಯಾಯಿತಿ ಪಡೆಯುತ್ತವೆ ಮತ್ತು ದಕ್ಷತೆ ಹಾಗೂ ಬಳಕೆದಾರರ ಕಲ್ಯಾಣವನ್ನು ಕಾಪಾಡುತ್ತದೆ. ಈ ನಿಟ್ಟಿನಲ್ಲಿ ಸಿಂಗಾಪೂರದಲ್ಲಿ ನಡೆದ ಮಂತ್ರಿಮಂಡಲ ಸಭೆಯು ವ್ಯಾಪಾರ ಮತ್ತು ಸ್ಪರ್ಧೆಗಳಲ್ಲಿ ಸಂಶೋಧನೆ ಮಾಡಲು ಒಂದು ಕಾರ್ಯ ತಂಡವನ್ನು ರಚಿಸಿದೆ.

**vi. ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರಗಳಿಂದ ನಿರ್ವಹಿಸಲ್ಪಡುತ್ತದೆ:**

ಎಲ್ಲಾ ಮಹತ್ವದ ನಿರ್ಣಯಗಳನ್ನು ಎಲ್ಲ ಸದಸ್ಯ ರಾಷ್ಟ್ರಗಳು ಎರಡು ವರ್ಷಕ್ಕೊಮ್ಮೆ ನಡೆಯುವ ಮಂತ್ರಿಮಂಡಲ ಸಭೆಯಲ್ಲಿ ಭಾಗವಹಿಸಿ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಒಟ್ಟಾಗಿ ನಿರ್ಣಯ ಕೈಗೊಳ್ಳುತ್ತವೆ. ಸಾಮಾನ್ಯವಾಗಿ ಒಮ್ಮತದಿಂದ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ. ಈ ನಿಟ್ಟಿನಲ್ಲಿ ಕನಿಷ್ಟ ಪಕ್ಷ ಎರಡು ವರ್ಷಗಳಿಗೊಮ್ಮೆ ನಡೆಯುವ ಮಂತ್ರಿಮಂಡಲ ಸಭೆಗೆ ಹೆಚ್ಚಿನ ಅಧಿಕಾರವಿರುತ್ತದೆ. ಅದರಂತೆ ಕೌನ್ಸಿಲ್ಸ್ ಮತ್ತು ಇತರ ಸಂಘ ಸಂಸ್ಥೆಗಳು ನಿರ್ದಿಷ್ಟ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುತ್ತವೆ. ಸದಸ್ಯತ್ವ ಪಡೆದ. ಸದಸ್ಯ ರಾಷ್ಟ್ರಗಳಿಗೆ ಮುಕ್ತ ಅವಕಾಶವಿದೆ. ಈ ಸಂಘ ಸಂಸ್ಥೆಗಳು ಇತರ ಸಂಘ ಸಂಸ್ಥೆಗಳನ್ನು ಸಭೆಗಳಲ್ಲಿ ನಿರೀಕ್ಷಕರಾಗಿ ಆಮಂತ್ರಿಸಲು ಅವಕಾಶ ಕಲ್ಪಿಸಿದೆ.

## 2.4 ಗ್ಯಾಟ್ (GATT) ಮತ್ತು ವಿಶ್ವ ವ್ಯಾಪಾರ ಸಂಘಟನೆಗಳ (WTO)ನಡುವಿನ ಮುಖ್ಯ ವ್ಯತ್ಯಾಸ:

| GATT | WTO |
|---|---|
| ❖ ತಾತ್ಕಾಲಿಕ ಮತ್ತು ಮಧ್ಯಕಾಲಿನ ಒಪ್ಪಂದದ ಪಂಗಡ ಹೊಂದಿದೆ. | ❖ ಒಪ್ಪಂದಗಳು ಸ್ಥಿತವಾದುದು, ನ್ಯಾಯಯುತ ತಳಹದಿಯ ಮೇಲಿದೆ. |
| ❖ ನ್ಯಾಯಯುತ ಕರಾರು ಪಕ್ಷಗಳನ್ನು ಹೊಂದಿದೆ. | ❖ ಸದಸ್ಯರನ್ನು ಹೊಂದಿದೆ. |
| ❖ ವಸ್ತು ವ್ಯಾಪಾರಗಳಿಗೆ ಮಾತ್ರ ಅನ್ವಯಿತ್ತದೆ. | ❖ ವಸ್ತುಗಳು, ಸೇವೆಗಳು ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳಿಗೂ ಅನ್ವಯಿಸುತ್ತದೆ. |
| ❖ ನ್ಯಾಯ ನಿರ್ಣಯದ ವೇಗ, ಎಲ್ಲ ಸದಸ್ಯರ ಒಮ್ಮತದ ಮೇಲೆ ಅವಲಂಬಿಸಿದೆ. | ❖ ನ್ಯಾಯ ತೀರ್ಮಾನ ತ್ವರಿತಗತಿಯಲ್ಲಿ ಮತ್ತು ಯಾಂತ್ರಿಕವಾಗಿದೆ. |

## 2.5. ವಿಶ್ವ ವ್ಯಾಪಾರ ಸಂಘಟನೆಯು ನಿರ್ವಹಿಸುವ ಕೆಲವು ಪ್ರಮುಖ ವಿಷಯಗಳು:

**i. ಕೃಷಿ:**

ವಿಶ್ವ ವ್ಯಾಪಾರ ಸಂಘಟನೆಯಲ್ಲಿ ಕೃಷಿಯ ಒಪ್ಪಂದವು ಒಂದು ಮಹತ್ವದ ಭಾಗವಿಗಿದೆ. ಈ ಒಪ್ಪಂದವು ಮುಖ್ಯವಾಗಿ ಮಾರುಕಟ್ಟೆಯ ಪ್ರವೇಶ, ಪರಿಮಾಣಾತ್ಮಕ ನಿಬಂಧವನ್ನು ತೆಗೆದುಹಾಕುವುದು. ಸ್ವದೇಶಿ ಮಾರುಕಟ್ಟೆಗಾಗಿ ಉತ್ತೇಜನ ಕ್ರಮಗಳು, ವ್ಯಾಪಾರಕ್ಕೆ ಅಡಚಣೆ ಮಾಡುವ ಸಬ್ಸಿಡಿ ಕಡಿತ- ಇವುಗಳನ್ನು ಒಳಗೊಂಡಿದೆ. ಕೃಷಿಯ ಒಪ್ಪಂದವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಸಮತಲ ಮತ್ತು ಅವಧಿಯ ಅನುಸರಿಸುವಿಕೆಯು ಮುಖಾಂತರ ಹೆಚ್ಚಿನ ಸ್ಥಾನ ಕೊಟ್ಟಿದೆ.

### ii. ಸ್ಯಾನಿಟರಿ ಮತ್ತು ಫೈಟೊ ಸ್ಯಾನಿಟರಿ ಕ್ರಮಗಳು:

ಈ ಕ್ರಮಗಳು ಮುಖ್ಯವಾಗಿ ಆಹಾರದ ಭದ್ರತೆ, ಪ್ರಾಣಿ ಮತ್ತು ಗಿಡಮರಗಳ ಆರೋಗ್ಯ ಮಟ್ಟ ಕುರಿತಾಗಿದೆ. ವಿಶ್ವ ವ್ಯಾಪಾರ ಸಂಘಟನೆಯ ಕ್ರಮಗಳು ಸದಸ್ಯ ರಾಷ್ಟ್ರಗಳು, ಮತ್ತಿತರ ಸಂಸ್ಥೆಗಳು ಒದಗಿಸಿದ ಗುಣಮಟ್ಟಗಳನ್ನು ಉಪಯೋಗಿಸಲು ಉತ್ತೇಜಿಸುತ್ತದಲ್ಲದೆ ಸದಸ್ಯ ದೇಶಗಳಿಗೆ ತಮ್ಮದೇ ಆದ ಗುಣಮಟ್ಟವನ್ನು ಅಳವಡಿಸಲೂ ಸಹ ಅವಕಾಶ ಮಾಡಿಕೊಡುತ್ತದೆ.

### iii. ತಾಂತ್ರಿಕ ಮಾಷನಗಳು (TBT):

ವ್ಯಾಪಾರದಲ್ಲಿ ತಾಂತ್ರಿಕ ಅಡೆಡತೆಗಳ ಕರಾರು ಇತರ ಸದಸ್ಯ ರಾಷ್ಟ್ರಗಳ ತಾಂತ್ರಿಕ ಗುಣಮಟ್ಟದ ಬಗ್ಗೆ ಚರ್ಚಿಸುತ್ತದೆ. ಸದಸ್ಯ ರಾಷ್ಟ್ರಗಳು ಶಾಸನ ಮಾಡುವಾಗ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಬಗ್ಗೆ ವಿಶೇಷ ಗಮನವರಿಸಲು ಒಪ್ಪಿರುತ್ತದೆ. ಆದರೂ ಅಂಶರ್ದೇಶೀಯ ಮಟ್ಟದ ಗುಣಮಟ್ಟವನ್ನು ನಿರ್ಧರಿಸುವಲ್ಲಿ ತಮ್ಮನ್ನು ಪರಿಗಣಿಸಲಾಗುತ್ತಿಲ್ಲ ಹಾಗೂ ತಮ್ಮ ತಾಂತ್ರಿಕ ಸಾಮರ್ಥ್ಯ ಮೀರಿದ ಗುಣಮಟ್ಟಗಳನ್ನು ಪಾಲಿಸಲು ಒತ್ತಾಯಿಸಲಾಗುತ್ತಿವೆಯೆಂದು ಅಭಿವೃದ್ಧಿಶೀಲ ರಾಷ್ಟ್ರಗಳು ಭಾವಿಸಿವೆ.

### iv. ಜವಳಿ ಉಧ್ಯಮಗಳು ಮತ್ತು ಜವಳಿ (ATC):

ಜವಳಿ ಉದ್ಯಮದ ಒಪ್ಪಂದವು ಬಹು - ಎಳೆ ಒಪ್ಪಂದಕ್ಕೆ (Multifibre Agreement) ಅನುಗುಣವಾಗಿ ನಡೆಯುತ್ತಿದೆ. ಇದನ್ನು 2001 ಮತ್ತು 2004 ರಲ್ಲಿ ಪುನ: ವಿಮರ್ಶಿಸಲಾಗುವುದು. ನಂತರ ಪ್ರಸ್ತುತ ಕೋಟಾ ಪದ್ಧತಿಯನ್ನು ಸುಂಕವನ್ನಾಗಿ ಮಾರ್ಪಡಿಸಲಾಗುವುದು.

### v. ಉತ್ಪನ್ನ ತಂದು ತುಂಬುವ ಕ್ರಮಕ್ಕೆ (Anti Dumping) , ಸಂರಕ್ಷಣೆ ಮತ್ತು ವ್ಯತಿರಿಕ್ತ ಸುಂಕ:

ಉತ್ಪನ್ನಗಳನ್ನು ತಂದು ತುಂಬುವ ಕ್ರಮವೆಂದರೆ ವಿದೇಶಗಳಲ್ಲಿ ವಸ್ತುಗಳನ್ನು ಅವುಗಳ ನ್ಯಾಯಯುತ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವುದು. ಇದರಿಂದ ತಮ್ಮ ಉದ್ಯಮವನ್ನು ಕಾಪಾಡಲು ಆಮದಿನ ವಸ್ತುಗಳನ್ನು ತಡೆಯಲು ಅವಕಾಶವಿದೆ. ಹಾಗೆಯೇ ಆಮದಿನ ವಸ್ತುಗಳ ಮೇಲೆ ಅಧಿಕ ಸುಂಕ ವಿಧಿಸುವುದರ ಮೂಲಕವೂ ಅವುಗಳನ್ನು ತಡೆಯಬಹುದು.

**vi. ಕಸ್ಟಮ್ಸ್ ಸುಂಕದ ಮೌಲ್ಯಮಾಪನ:**

ಸದಸ್ಯ ರಾಷ್ಟ್ರಗಳು ಕಸ್ಟಮ್ಸ್ ಮಾಪನ ಕರಾರಿನ ಮುಖಾಂತರ ಆಮದುಗಳ ಮೇಲಿನ ಕರಗಳನ್ನು ಲೆಕ್ಕಹಾಕಲು ಕೆಲವು ನಿಯಮಗಳನ್ನು ಮಾಡಿಕೊಂಡಿವೆ. ಇವು ಕಸ್ಟಮ್ಸ್ ಸುಂಕಗಳನ್ನು ಮನಸ್ಸು ಬಂದಂತೆ ವಿಧಿಸುವುದನ್ನು ತಡೆಯುತ್ತದೆ.

vii. **ನಿಯಮಗಳ ಮೂಲ**:

ಇದು ವಸ್ತು ಎಲ್ಲಿ ತಯಾರಿಸಿದೆ ಎಂಬುದನ್ನು ವ್ಯಾಖ್ಯಾನಿಸಲು ಬಳಸುವ ಒಂದು ಕ್ರಮವಾಗಿದೆ. ಇದು ವ್ಯಾಪಾರ ಕ್ರಮಗಳಾದ ಒಲುವಿನ ಸುಂಕಗಳು. ಉತ್ಪನ್ನಗಳನ್ನು ತಂದು ತುಂಬುವ ಕ್ರಮದ ತಡೆ, ಕೋಟಾ ಮತ್ತು ವ್ಯತಿರಿಕ್ತ ಸುಂಕಗಳ ವಿಧಿಸುವಿಕೆ ಸಹಾಯಕವಾಗುತ್ತದೆ ವಿನ: ಇದು ಯಾವುದೇ ಧನಾತ್ಮಕ ಅಥವಾ ಋಣಾತ್ಮಕ ಪರಿಣಾಮಗಳನ್ನು ಬೀರುವುದಿಲ್ಲ.

**viii. ಸೇವೆಗಳು:**

ಸೇವಾ ವ್ಯಾಪಾರ ಕುರಿತ ಸಾರ್ವತ್ರಿಕ ಒಪ್ಪಂದವು ಅಂತರಾಷ್ಟ್ರೀಯ ಸೇವೆಗಳ ವ್ಯಾಪಾರದಲ್ಲಿ ವಿಧಿಸಿರುವ ಪ್ರಥಮ ಕಾನೂನು. ಇದು ಉರುಗ್ವೇ ಸುತ್ತಿನ ಒಪ್ಪಂದದ ಮೂಲಕ ಜಾರಿಗೆ ಬಂದಿದೆ. ವಿಶ್ವ ವ್ಯಾಪಾರ ಸಂಘಟನೆಯ ಮುಖ್ಯ ನಿಯಮವಾದ 'ಅತ್ಯಂತ ಒಲವಿನ ರಾಷ್ಟ್ರ' (MFN) ಸವಲತ್ತು ಮತ್ತು ಪಾರದರ್ಶಕತೆ ಇದಕ್ಕೆ ಸಿಗುತ್ತದೆ.

**ix. ವ್ಯಾಟಪಾರ ಸಂಬಂಧಿತ ಭೌತಿಕ ಆಸ್ತಿಹಕ್ಕುಗಳು(TRIPs):**

ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಜನವರಿ 1, 2000 ದಿಂದ ವ್ಯಾಪಾರ ಸಂಬಂಧವಾದ ಭೌದ್ಧಿಕ ಆಸ್ತಿ ಹಕ್ಕು ಕುರಿತ ಒಪ್ಪಂದಗಳನ್ನು ಹೊಂದಬೇಕಾರಿತ್ತು. (ಅಲ್ಪಾಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಜನವರಿ 1,2000 ರವರೆಗೆ ಕಾಲಾವಕಾಶವಿದೆ.) ಭಾರತದಲ್ಲಿ ಇತದ ಕುರಿತಂತೆ ಶಾಸನವನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದ್ದು ಕರಡು ಬಿಲ್ಲನ್ನು ಲೋಕ ಸಭೆಯಲ್ಲಿ ತಡೆಹಿಡಿಯಲಾಗಿದೆ.

**x. ವ್ಯಾಪಾರ ಸಂಬಂಧಿ ಹೂಡಿಕೆ ಕ್ರಮಗಳು (TRIMs):**

ವ್ಯಾಪಾರ ಸಂಬಂಧಿ ಹೂಡಿಕೆ ಕ್ರಮಗಳು ವ್ಯಾಪಾರದಲ್ಲಿ ಭಾಗಿಯಾದ ದೇಶಗಳಿಂದ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಿಕೊಟ್ಟಿರುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಇದರಲ್ಲಿಯ ಅಸಮಾನತೆಗಳನ್ನು ಜನವರಿ 1,2000 ರೊಳಗೆ ತೆಗೆದುಹಾಕಬಹುದು. ಅಲ್ಪಾವಧಿವೃದ್ಧಿ ಹೊಂದಿದ ದೇಶಗಳಿಗೆ ಜನವರಿ 1, 2002 ರವರೆಗೆ ಕಾಲಾವಕಾಶವಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಇಚ್ಛಿಸಿದಲ್ಲಿ ಈ ಬಂಡವಾಳ ಉತ್ತೇಜಕ ಕ್ರಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಯ ಅವಶ್ಯಕತೆಗಳನ್ನು ನೀಗಿಸಿಕೊಳ್ಳಬಹುದು.

### xi. ವಿವಾದಗಳನ್ನು ಬಗೆಹರಿಸುವುದು (DSU):

ಇದು ವಿಶ್ವ ವ್ಯಾಪಾರ ಸಂಘಟನೆಯಲ್ಲಿ ಉಂಟಾಗುವ ವಿವಾದಗಳನ್ನು ಪರಿಹರಿಸಲು ಸೂಕ್ತ ಕಾನೂನು ಮತ್ತು ಕ್ರಮಗಳನ್ನು ಹೊಂದಿದೆ. ಅಲ್ಲದೆ ಇದು 27 ಪರಿಚ್ಛೇದಗಳನ್ನು ಹೊಂದಿದ್ದು ಸದಸ್ಯ ರಾಷ್ಟ್ರಗಳಿಗೆ ಒಂದು ಕಾನೂನಿನ ಕಟ್ಟಪ್ಪಣೆಯಾಯಿತು. ಇದು ಬಹು ಪಕ್ಷೀಯ ವ್ಯಾಪಾರ ಒಪ್ಪಂದದ ವ್ಯವಸ್ಥೆಗೆ ಬೆನ್ನೆಲಬಾಗಿದೆ.

## xii. ಕಾರ್ಮಿಕ (Labour):

ಸಧ್ಯದಲ್ಲಿ ಕಾರ್ಮಿಕ ಕ್ಷೇತ್ರ ವಿಶ್ವ ವ್ಯಾಪಾರ ಸಂಘಟನೆಯ ಪರಿಮಿತಿಯಾಚೆಯಿದ್ದರೂ ಕೆಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವಿಶ್ವ ವ್ಯಾಪಾರ ಸಂಘಟನೆಯ ಕಾರ್ಯಪಟ್ಟಿಯಲ್ಲಿ ಕಾರ್ಮಿಕರನ್ನು ಸೇರಿಸುವ ಪ್ರಯತ್ನ ನಡೆಸುತ್ತಿದೆ. ಸಿಯಾಟಲ್ ನಲ್ಲಿ ನಡೆದ ಸಭೆಯಲ್ಲಿ WTO/ILO ಗಳು ಹಂಟಿಯಾಗಿ ಕಾರ್ಯ ಪಡೆಯ ರಚನೆ ಬಗ್ಗೆ ಪಟ್ಟು ಹಿಡಿದವು. ಆದರೆ ಕಾರ್ಮಿಕರನ್ನು ವ್ಯಾಪಾರದ ಜೊತೆಗೆ ಜೋಡಿಸುವ ಯತ್ನ ವಿಫಲಗೊಂಡಿತು.

### xiii. ತಂತ್ರಜ್ಞಾನ ವರ್ಗಾವಣೆ:

ಅಭಿವೃದ್ಧಿ ಹೊಂದುತ್ತಿರುವ ದೇಶಗಳ ತೀವ್ರ ಆರ್ಥಿಕ ಅಭಿವೃದ್ಧಿಗೆ ತಾಂತ್ರಿಕತೆಯ ವರ್ಗಾವಣೆ ಮಹತ್ವದ ಅಂಶವಾಗಿದೆ. ಇದಕ್ಕಾಗಿ ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದದನ್ವಯ ಅವಕಾಶವಿದ್ದರೂ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತಂತ್ರಜ್ಞಾನ ವರ್ಗಾವಣೆಯು ತೃಪ್ತಿಕರವಾಗಿ ನಡೆದಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಈ ದೇಶಗಳಿಗೆ ತಂತ್ರಜ್ಞಾನದ ಅವಶ್ಯಕತೆಗಳು ವಿಭಿನ್ನ ರೀತಿಯದಾಗಿರುವುದು.

### xiv. ಮಾಹಿತಿ ಮತ್ತು ತಂತ್ರಜ್ಞಾನದ ಒಪ್ಪಂದ:

ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದವು ಮಾಹಿತಿ ತಂತ್ರಜ್ಞಾನದ ಕ್ರಾಂತಿಯನ್ನು ಅಭಿವೃದ್ಧಿ ಪಡಿಸಲು ತುಂಬಾ ಸಹಾಯಕವಾಗಿದೆ. ಈ ಒಪ್ಪಂದದ ಪ್ರಕಾರ 2000 ನೇ ಇಸ್ವಿಯ ನಂತರ ಮಾಹಿತಿ ತಂತ್ರಜ್ಞಾನದ ವಸ್ತುಗಳು ಸುಂಕವಿಲ್ಲದೆ ವಿವಿಧ ದೇಶಗಳಿಗೆ ಪ್ರವೇಶಿಸುವ ಮಾರ್ಗ ಕಲ್ಪಿಸಿಕೊಡುತ್ತದೆ. ಅದಲ್ಲದೆ 1997 ರಿಂದ ಕಂಪ್ಯೂಟರ್ ಗಳು ಮತ್ತು ದೂರವಾಣಿ ಉಪಕರಣಗಳ ಮೇಲಿನ ಕಸ್ಟಂಸ್ ತೆರಿಗೆಯ ಕಡಿತವಾಗುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಈ ಕಡಿಮೆ ಬೆಲೆಯ ವ್ಯವಸ್ಥೆಯು ಜಾಗತಿಕ ಗ್ರಾಹಕರಿಗೆ ಮತ್ತು ಕಛೇರಿಗಳಿಗೆ ತುಂಬಾ ಲಾಭಕಾರಿಯಾಗುತ್ತದೆ.

## 2.6 ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ವಿಶೇಷ ಸವಲತ್ತುಗಳು:

ವಿಶ್ವ ವ್ಯಾಪಾರ ಸಂಘಟನೆಯ 135 ಸದಸ್ಯ ರಾಷ್ಟ್ರಗಳಲ್ಲಿ ಸುಪೂರು 104 ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿವೆ. ಈ ರಾಷ್ಟ್ರಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಮತ್ತು ಜಾಗತಿಕ ವ್ಯಾಪಾರದಲ್ಲಿ ಪ್ರಾಮುಖ್ಯತೆ ಪಡೆದಿರುವುದರಿಂದ ಸಂಧಾನ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಚೀನಾ ದೇಶವು ಕೂಡ ಈಗ ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯತ್ವ ಪಡೆಯಲು ತುದಿಗಾಲಿನ ಮೇಲೆ ನಿಂತಿದೆ. ಆದರೆ ಈಗ ಇದರ ಪ್ರವೇಶದ ಭವಿಷ್ಯವು ಪ್ರವೇಶ ಕಾರ್ಯದಲ್ಲಿ ಅಡಚಣೆಯಾದ ಅಮೇರಿಕಾದ ಅನುಮತಿಯ ಮೇಲೆ ಅವಲಂಭಿಸಿದೆ.

ವಿಶ್ವ ವ್ಯಾಪಾರ ಸಂಘಟನೆಯು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಈ ಕೆಳಗಿನ ಸವಲತ್ತುಗಳನ್ನು ನೀಡುವುದು:

i. ಈ ಒಪ್ಪಂದದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಕೆಲವು ವಿಶೇಷ ಅವಕಾಶಗಳನ್ನು ನೀಡಲಾಗುವುದು.
ii. ಈ ಅವಕಾಶಗಳಿಗೆ ಸಂಬಂಧಿಸಿದಂತೆ ವ್ಯಾಪಾರ ಮತ್ತು ಅಭಿವೃದ್ಧಿ ಸಮಿತಿಯು ಮೇಲ್ವಿಚಾರಣೆಯನ್ನು ನಡೆಸುತ್ತದೆ.
iii. ಕಾರ್ಯದರ್ಶಿ ವರ್ಗವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಬೇಕಾದ ತಾಂತ್ರಿಕ ಸಹಾಯವನ್ನು ಮುಖ್ಯವಾಗಿ ವಿವಿಧ ತರಹದ ತರಬೇತಿಯನ್ನು ಕೊಡುತ್ತದೆ.
iv. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಬದ್ಧತೆಗಳನ್ನು ಪೂರೈಸಲು ಹೆಚ್ಚಿನ ಕಾಲಾವಕಾಶ ಒದಗಿಸಿದೆ.
v. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ವ್ಯಾಪಾರ ಅವಕಾಶಗಳನ್ನು ಹೆಚ್ಚಿಸಲು , ಮಾರುಕಟ್ಟೆ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದೆ ( ಉದಾ: ಜವಳಿ, ಸೇವೆಗಳು ಮತ್ತು ವ್ಯಾಪಾರಕ್ಕೆ ತಾಂತ್ರಿಕ ನಿರ್ಬಂಧಗಳು).
vi. ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ತಮ್ಮ ಅಂತರಿಕ ಮತ್ತು ಅಂತರಾಷ್ಟ್ರೀಯ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಅವನ್ನು ಕಾಪಾಡಲು ಅವಕಾಶ ಕಲ್ಪಿಸಿವೆ.

## 2.7 ಕನಿಷ್ಟ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ವಿಶೇಷ ಗಮನ:

ಇದಕ್ಕೆ ಸಂಬಂಧಿಸಿದಂತೆ 1994 ರಲ್ಲಿ ಮರಕೇಶ್ ಊರುಗ್ವೇ ಸುತ್ತು ಮುಕ್ತಾಯಗೊಂಡಾಗ ಸುಂಕದರಗಳ ಕಡಿತ ಮತ್ತು ಸುಂಕೇತರ ನಿರ್ಬಂಧಗಳನ್ನು ತೆಗೆಯುವುದರಿಂದ ಕನಿಷ್ಟ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮೇಲೆ ಋಣಾತ್ಮಕ ಪರಿಣಾಮ ಬೀರುವ ಬಗ್ಗೆ ಗಮನ ಹರಿಸಲಾಯಿತು. ಕೃಷಿ ಸಮಿತಿಯು ಈ ಸಂದರ್ಭದಲ್ಲಿ ನಿಯಂತ್ರಿಸುವಂತೆ ಮಂತ್ರಿಗಳು ನಿರ್ಣಯವನ್ನು ಕೈಗೊಂಡರು. ಆದರಂತೆ ಈ ರಾಷ್ಟ್ರಗಳ ಆರ್ಥಿಕತೆಯ ಬದಲಾವಣೆಗೆ ಹೊಂದಿಕೊಳ್ಳಲು ಧನ ಸಹಾಯದ ಅವಶ್ಯಕತೆ ಇದೆ ಎಂದು ಅಬಿಪ್ರಾಯ ಪಡಲಾಯಿತು.

## 2.8 ವಿಶ್ವ ವ್ಯಾಪಾರ ಸಂಘಟನೆಯಿಂದ ಹೊರಬರುವುದು:

ವಿಶ್ವ ವ್ಯಾಪಾರ ಸಂಘಟನೆಯ ಪರಿಚ್ಛೇದ 31 ರ ಪ್ರಕಾರ ಯಾವುದೇ ದೇಶವು ಇಚ್ಛಿಸಿದರೆ ತೆರಿಗೆಯಿಂದ ವಿವಿಧ ದೇಶಗಳ ಸರಹದ್ದಿನ ವ್ಯವಹಾರಗಳಿಂದ ಬೇರೆಯಾಗಬಹುದು. ಈ ಹೊರಬರುವ ಅವಕಾಶವು ವಿಶ್ವ ಸಂಸ್ಥೆಯ ಮುಖ್ಯ ಕಾರ್ಯದರ್ಶಿಯವರಿಗೆ ಈ ಬಗ್ಗೆ ಅರ್ಜಿ ತಲುಪಿದ ದಿನದಿಂದ ಆರು ತಿಂಗಳುಗಳ ನಂತರ ಕಾರ್ಯರೂಪಕ್ಕೆ ಬರುತ್ತದೆ.

ಹಲವು ವಿದ್ವಾಂಸರು ವಿಶ್ವ ವ್ಯಾಪಾರ ಸಂಘಟನೆಯು ರಾಜಕೀಯ ಕೇವಲ ಅಭಿವೃದ್ಧಿ ಹೊಂದಿದ ದೇಶಗಳ ತೆಕ್ಕೆಯಲ್ಲಿದೆ ಮತ್ತು ರೈತರ ಕಲ್ಯಾಣ ದೃಷ್ಟಿಗೆ ವಿರುದ್ಧವಾಗಿದೆ. ಆದ್ದರಿಂದ ಕೆಲವು ದೇಶಗಳು ಈ ಒಪ್ಪಂದದಿಂದ ಹೊರಬರಲು ಅಭಿಪ್ರಾಯ ಪಡುತ್ತಾರೆ. ವಿಶ್ವ ವ್ಯಾಪಾರ ಸಂಘಟನೆಯ ರಚನೆಯನ್ನು ನೋಡಿದರೆ ಅಭಿವೃದ್ಧಿ ಹೊಂದಿದ ದೇಶಗಳು ಹೆಚ್ಚಿನ ಅಧಿಕಾರ ಹೊಂದಿವೆ ಎಂಬುದು ಸೂಕ್ತವೆನ್ನಿಸುವುದಿಲ್ಲ. ಏಕೆಂದರೆ ಒಟ್ಟು 135 ಸದಸ್ಯ ರಾಷ್ಟ್ರಗಳಲ್ಲಿ 104 ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು, ಕೇವಲ 31 ರಾಷ್ಟ್ರಗಳು ಹೆಚ್ಚಿನ ಅಧಿಕಾರ ಚಲಾಯಿಸುತ್ತವೆ ಎನ್ನುವುದು ತರವಲ್ಲ. ಒಂದು ವೇಳೆ ಭಾರತ ದೇಶವು ಒಪ್ಪಂದದಿಂದ ಹೊರ ಬರಲು ಇಚ್ಛಿಸಿದರೆ ಅದು ಸದಸ್ಯ ರಾಷ್ಟ್ರಗಳ ಜೊತೆಗೆ ವ್ಯಾಪಾರ ಮಾಡಲು ಸ್ಥಾನವನ್ನು ಕೋರಬೇಕು. ಭಾರತ ದೇಶವು ಸಹ 23 ರಾಷ್ಟ್ರೀಗಳಲ್ಲಿ ಸ್ಥಾಪಕ ಸದಸ್ಯರಿದ್ದ ಲಾಭವನ್ನು ಕಳೆದುಕೊಳ್ಳುವುದು ಜಾಣತನದ ಕ್ರಮವಾಗಲಿಕ್ಕಿಲ್ಲ. ಚೀನಾ ದೇಶವು ಸದಸ್ಯತ್ವ ಪಡೆಯಲು ಭಾರತ ಬೆಂಬಲ ಕೋರುತ್ತಿದ್ದು ಭಾರತವು ಅನುಭವಿಸಿದ ವಿದೇಶಿ ವಿನಿಮಯದಲ್ಲಿ ಸಾಲ ಹಿಂದಿರುಗಿಸುವುದರಲ್ಲಿಯ ತೊಂದರೆಯನ್ನು ನೋಡಿದರೆ ವಿದೇಶಿ ವಿನಿಮಯ ಬೇಡಿಕೆ ತೀವ್ರ ಮಹತ್ವವೆನ್ನಿಸುತ್ತದೆ. ವಿದೇಶಿ ವಿನಿಮಯ ಕಾಪಾಡಿ ಸಾಲ ಹಿಂದಿರುಗಿಸುವಿಕೆಯನ್ನು ಬೆಂಬಲಿಸುವುದು ಮೂರು ವಿವಿಧ ಕಾರ್ಯಗಳಿಂದ ಸೂಕ್ತವೆನ್ನಿಸುತ್ತದೆ. ಅವುಗಳಲ್ಲಿ ವಿವಿಧ ವ್ಯಾಪಾರಿ ಒಪ್ಪಂದಗಳಿಂದ, ರಫ್ತು ಪ್ರಮಾಣವನ್ನು ಹೆಚ್ಚಿಸುವುದು ಒಂದಾಗಿದೆ. ಆದ್ದರಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಒಪ್ಪಂದದಿದ ಹೊರಬರುವುದು ಸಮಂಜಸವೆಂದು ತೋರುವುದಿಲ್ಲ. ಇದರಿಂದ ಅಭಿವೃದ್ಧಿಗೆ ಹೆಚ್ಚಿನ ಹೊಡೆತ ಬೀಳುತ್ತದೆ.

## ಭಾಗ - 3

## ಕರ್ನಾಟಕ ಮತ್ತು ಭಾರತದಲ್ಲಿ ಕೃಷಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ವ್ಯಾಪಾರ: ಒಂದು ಪಕ್ಷಿ ನೋಟ

ಗ್ಯಾಟ್ ಒಪ್ಪಂದ ಮತ್ತು ಅದರ ಫಲವಾಗಿ ಭಾರತದಲ್ಲಿ ವಿದೇಶಿ ವ್ಯಾಪಾರ ನೀತಿಯ ಉದಾರೀಕರಣದ ಪ್ರಕ್ರಿಯೆ ಚುರುಕುಗೊಂಡಿತು. ಇದಕ್ಕೆ ಸಂಬಂಧಿಸಿದಂತೆ ಚರ್ಚೆಯು ಮುಖ್ಯವಾಗಿ ಐದು ವಿಷಯಗಳನ್ನು ಒಳಗೊಂಡಿದೆ. ಅವುಗಳೆಂದರೆ - ಮಾರುಕಟ್ಟೆ ಪ್ರವೇಶ, ಸುಂಕೀಕರಣ, ಅಂತರಿಕೆ ನೆರವು ಮತ್ತು ಇತರೆ ವಿನಾಯಿತಿಗೆ ಸಂಬಂಧಿಸಿದ ವಿಷಯಗಳು. ಭಾರತವು ವಿಶ್ವವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರವಾಗಿದ್ದು, ಮತ್ತು ರಿಯಾಯಿತಿಗೆ ಸಂಬಂದಿಸಿದ ವಿಷಯಗಳು ಸಾಕಷ್ಟು ಚರ್ಚೆಗೆ ಒಳಗಾಗಿವೆ. ಆಮುದು ರಪ್ತು ನೀತಿ 1997-2002 ದ ಪರಿಣಾಮವಾಗಿ ರಪ್ತು ಬೆಳವಣಿಗೆ ದರ ಹೆಚ್ಚಾಯಿತು. ಅದನ್ನೇ ಮುಂದುವರೆಸುವಂತೆ ನೀತಿಯಲ್ಲಿ ಏಪ್ರಿಲ್ 1999 ಮತ್ತು 2000 ದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲಾಯಿತು. ಇವುಗಳು ರಪ್ತು ಪರಿಷ್ಕರಣ ವಲಯ, ರಪ್ತುದಾರರಿಗೆ ಹಸಿರು ಕಾರ್ಡ್ ಸೇವೆಗಳ ರಪ್ತಿಗೆ ಪ್ರೋತ್ಸಾಹ ಮತ್ತು 1429 ಸುಂಕ ಸಾಲಿನ ಮೇಲೆ ಕೋಟಾ ನಿಯಂತ್ರಣದ ಸಡಿಲಿಕೆ.

### 3.1 ಭಾರತದ ಅಂತಾರಾಷ್ಟ್ರೀಯ ವ್ಯಾಪಾರ ನೀತಿ

ಭಾರತ ಮೊದಲಿನಿಂದಲೂ, ಅಂದರೆ ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ರಕ್ಷಣಾತ್ಮಕ ವ್ಯಾಪಾರ ನೀತಿಯನ್ನು ಅಳವಡಿಸಿಕೊಂಡು ಬಂದಿದೆ. ಅದು ಮುಖ್ಯವಾಗಿ ಆಮದಿನ ಬದಲೀಕರಣ ಮತ್ತು ಬಾಲ್ಯಾವಸ್ಥೆಯ ಕೈಗಾರಿಕಾ ವಾದದ ಮೇಲೆ ಆಧಾರಿತವಾಗಿತ್ತು. ಈ ಪರಿಣಾಮವಾಗಿ 1960 ರ ದಶಕದ ಮಧ್ಯದಲ್ಲಿ ಔದ್ಯೋಗಿಕ ಮತ್ತು ರಪ್ತಿನ ಬೆಳವಣಿಗೆಯು ಕುಂಠಿತವಾಗಿರುವುದು ಗಮನಕ್ಕೆ ಬಂತು. 1970 ರ ದಶಕದ ವೇಳೆಗೆ ವ್ಯಾಪಾರ ನೀತಿಯಲ್ಲಿ ಕೆಲವೊಂದು ಬದಲಾವಣೆಗಳು ಕಂಡು ಬಂದವು. ಅದು ಆಮದಿನ ಬದಲೀಕರಣದಿಂದ ರಪ್ತಿನ ಉತ್ತೇಜನದತ್ತವಾಲಿತು. ಮತ್ತು ಇತರೆ ವಿನಾಯಿತಿಗಳು ಸೇರಿದಂತೆ ರಪ್ತಿಗೆ ಸಾಕಷ್ಟು ಉತ್ತೇಜನ ನೀಡಲಾಯಿತು. 1970 ರ ದಶಕದಲ್ಲಿ ರಪ್ತಿನ ಉತ್ತೇಜನ, ಅದರ ಬೆಳವಣಿಗೆ ದರ ಹೆಚ್ಚಿಸುವ ಕುರಿತು ಅಭ್ಯಸಿಸಲು ಮೂರು ಸಮಿತಿಗಳನ್ನು ರಚಿಸಲಾಯಿತು. ಅಲೆಕ್ಸಾಂಡರ್ ಸಮಿತಿ (1978), ಡಾಗ್ಲಿ ಸಮಿತಿ (1979) ಮತ್ತು ಟಂಡನ್ ಸಮಿತಿ (1980) ಗಳು ಈ ಮಿಶೆಯಲ್ಲಿ ಸಾಕಷ್ಟು ಉತ್ತೇಜನ ಕ್ರಮಗಳನನು ಸೂಚಿಸಿದವು. ರಪ್ತು ತೀವ್ರಗತಿಯಲ್ಲಿ ಬೆಳೆಯುವುದರಿಂದ ದೇಶದ ಒಟ್ಟಾರೆ ಆರ್ಥಿಕ ಬೆಳವಣಿಗೆಯ ದರ ಕೂಡ ಹೆಚ್ಚಾಗುವುದು ಎಂದು ಟಂಡನ್ ಸಮಿತಿ ಅಭಿಪ್ರಾಯಪಟ್ಟಿತು. ಏಕೆಂದರೆ ರಪ್ತುಗಳು ವಿದೇಶಿ ವಿನಿಮಯವನ್ನು ಗಳಿಸಿ ಕೊಡುವುದಲ್ಲದೆ ಸಂಪನ್ಮೂಲಗಳ ಉತ್ತಮ ಹಂಚಿಕೆ ಮತ್ತು ಬಳಕೆಗೂ ಕೂಡ ದಾರಿ ಮಾಡುವುದು.

ಈ ಮೂರು ಸರ್ಕಾರಿ ಸಮಿತಿಗಳು ಮಾಡಿದ ಶಿಫಾರಸ್ಸುಗಳನ್ನು 1985-86 ರಿಂದ 1990-91 ರವರೆಗಿನ ದೀರ್ಘಕಾಲಿನ ಆಮದು - ರಪ್ತು ನೀತಿಯಲ್ಲಿ ಅಳವಡಿಸಿಕೊಳ್ಳಲಾಯಿತು. ರಾಜಕೀಯ ಸ್ತಿತಿಯಲ್ಲಿ ಉಂಟಾದ ಬದಲಾವಣೆಗಳಿಂದಾಗಿ ಮಾರ್ಚ್ 1990 ರಲ್ಲಿ ಈ ನೀತಿಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿದರು. ಒಟ್ಟಾರೆ

ಸಮಗ್ರ ನೀತಿಯು ಅದೇ ರೂಪದಲ್ಲಿ ಮುಂದುವರೆಯಿತು. ಈ ದಿಸೆಯಲ್ಲಿ ಆಮುದು ಮತ್ತು ರಫ್ತಿನ ತಾತ್ಕಾಲಿಕ ಪ್ರಮಾಣ ಪತ್ರಗಳ ವಿಶೇಷ ಆಮುದು ಪರವಾನಿಗೆ ಯೋಜನೆ, ಅನುಮತಿ ನಿಯಮದಲ್ಲಿ ಮತ್ತು ರಫ್ತಿನ ನಿಯಂತ್ರದ ಸಡಿಲಿಕೆ ಇತಾದಿ ಮುಖ್ಯ ಹೆಜ್ಜೆಗಳು. ಒಂದೆಡೆ ರಫ್ತಿನ ಪ್ರಯೋಜನ ಇನ್ನೊಂದೆಡೆ ಆಮದಿನ ಉದಾರೀಕರಣ - ಈ ಹೊಸ ನೀತಿಯ ಮುಖ್ಯ ತಿರುಳಾಯಿತು. ಪ್ರಮುಖವೆಂದರೆ ಹಿಂದಿನ ವ್ಯಾಪಾರ ನೀತಿಗೆ ವಿರುದ್ದವಾಗಿ ಹೊಸ ನೀತಿಯಲ್ಲಿ ದೀರ್ಘಕಾಲಿನ ದೃಷ್ಟಿಕೋನ ಮತ್ತು ಸಾಮರಸ್ಯ ಇರುವುದು. ಆದರೆ ಆಮುದು - ರಫ್ತಿನ ದೀರ್ಘಕಾಲೀನ ಒಲವಿನ ಮೇಲೆ ಈ ನೀತಿಯ ಆದಾವ ಪರಿಣಾಮ ಬೀರಬಹುದು ಎಂಬ ಜಿಜ್ಞಾಸೆಗೆ ದಾರಿಮಾಡಿತು.

ನಮ್ಮ ವಿದೇಶಿ ವ್ಯಾಪಾರ ನೀತಿಯಲ್ಲಿ 1990 ರಿಂದ ಇತ್ತೀಚೆಗೆ ಉಂಟಾಗಿರುವ ಬದಲಾವಣೆಗಳನ್ನು ಈ ಕೆಳಗಿನ ಪಟ್ಟಿಯ ಮುಖಾಂತರ ತಿಳಿದುಕೊಳ್ಳಬಹುದು.

| ವರ್ಷ | ವ್ಯಾಪಾರ ನೀತಿಯ ಮುಖ್ಯ ಬದಲಾವಣೆಗಳು |
|---|---|
| 1990-91 | " 82 ಹೊಸ ಬಂಡವಾಳ ವಸ್ತುಗಳು OGL ಗೆ ಸೇರ್ಪಡೆಯಾದವು. 153 ಬಂಡವಾಳ ವಸ್ತುಗಳನ್ನು OGL ನಿಂದ ಸ್ಥಳಾಂತರಿಸಿ ನಿಯಂತ್ರಣ ಪಟ್ಟಿಗೆಗೆ ಸೇರಿಸಲಾಗಿದೆ.<br>" ಪರವಾನಿಗಿಯನ್ನು ಸರಳಗೊಳಿಸಲಾಯಿತು.<br>" ಶೇ 15 ರಷ್ಟು ಉಚಿತ ವಿದೇಶಿ ವಿನಿಮಯದಲ್ಲಿ ಕಡಿತ. ಇದನ್ನು ಗ್ರಾಹಕರ ವಿಲಾಸಿ ವಸ್ತುಗಳಿಗೆ ಗ್ರಾಂಟ್ ರೂಪದಲ್ಲಿ ಕೊಡಲಾಗುವುದು.<br>" ಏಪ್ರಿಲ್ 22 ರಿಂದ ಬಂಡವಾಳ ವಸ್ತುಗಳನ್ನು ಹೊರತುಪಡಿಸಿ ಇತರ ವಸ್ತುಗಳ ಆಮದಿನ ಮೇಲೆ 200 ಪ್ರತಿಶತ ಹೆಚ್ಚಾಯಿತು. |
| 1991-92 | " ಜುಲೈ - ಆಗಸ್ಟ್ ನಲ್ಲಿ ರಫ್ತಿನ ಮೇಲೆ ಸಮನಾದ 30 ಶೇಕಡಾ ಸುಂಕ ಪ್ರಾರಂಭವಾಯಿತು.<br>" ಆಮುದು ನಿಯಂತ್ರಣವನ್ನು ತೆಗೆದು, ಉಚಿತ ಆಮದನ್ನು ಪ್ರಾರಂಭಿಸಲಾಯಿತು.<br>" ಡಿಸೆಂಬರ್ ನಲ್ಲಿ OGL ನಲ್ಲಿದ್ದ 34 ವಸ್ತುಗಳನ್ನು ಸೀಮಿತ ಪಟ್ಟಿಗೆ ಸ್ಥಳಾಂತರಿಸಲಾಯಿತು.<br>" ಆಮುದು ಪರವಾನಿಗೆಯಲ್ಲಿ ಬದಲಾವಣೆ<br>" 42 ಕಚ್ಚಾವಸ್ತುಗಳನ್ನು ನಿಯಂತ್ರಿತ ಪಟ್ಟಿಯಿಂದ ತೆಗೆದು ಹಾಕಲಾಯಿತು. |
| 1992-93 | " ರೂಪಾಯಿಯ ಭಾಗಶಃ ಪರಿವರ್ತನೆಯ ಸೌಲಭ್ಯವನ್ನು ಪ್ರಕಟಿಸಲಾಯಿತು.<br>" ಅಗತ್ಯ ಆಮುದುಗಳಿಗೆ ವಿದೇಶಿ ವಿನಿಮಯ ದರದಲ್ಲಿ ಹಣ ಪೂರೈಕೆ. |
| 1993-94 | " ವಿಷೇಶ ಆಮದು ಪರವಾನಿ (SIL) ಗೆ ಯೋಜನೆಯ ಸಡಿಲಿಕೆ.<br>" ನಿಯಂತ್ರಿತ ವಸ್ತುಗಳ ಸಂಖ್ಯೆಯನ್ನು 215 ಕ್ಕೆ ಕಡಿಮೆ ಮಾಡಲಾಯಿತು.<br>" ರೂಪಾಯಿಯ ಪೂರ್ಣ ಪರಿವರ್ತನೆಯ ಸೌಲಭ್ಯ ದೊರೆಯಿತು. |
| 1994-95 | " ನಿಯಂತ್ರಿತ ವಸ್ತುಗಳನ್ನು ಪುನಃ 209 ಕ್ಕೆ ಕಡಿಮೆ ಮಾಡಲಾಯಿತು.<br>" ಬಳಕೆ ವಸ್ತುಗಳ ಆಮದನ್ನು ಉದಾರೀಕರಿಸಲಾಯಿತು. |
| 1995-96 | " ರಫ್ತಿನ ನಿಯಂತ್ರಣಗಳನ್ನು ಕಡಿಮೆ ಮಾಡಲಾಯಿತು.<br>" ರಫ್ತು ತೆರಿಗೆಯನ್ನು ತೆಗೆದುಹಾಕಲಾಯಿತು. |

| | |
|---|---|
| 1996-97 | " ರಫ್ತು ಮನೆಗಳು ಮತ್ತು ವ್ಯಾಪಾರಿ ಮನೆಗಳನ್ನು ಬಲಪಡಿಸುವ ರಫ್ತಿಗೆ ಉತ್ತೇಜನ ನೀಡಲಾಯಿತು.<br>" ಬಂಡವಾಳ ವಸ್ತುಗಳ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸಲಾಯಿತು. |
| 1997-2000 | " ಹೊಸ ಆಮುದು - ರಫ್ತೆ ನೀತಿ 1997-2002 ಪ್ರಕಟಣೆ ಮಾಡಲಾಯಿತು. |
| ಏಪ್ರಿಲ್ 1 2000 | " ರಾಜ್ಯ ಸರ್ಕಾರಗಳನ್ನು ರಫ್ತು ಅಭಿವೃದ್ಧಿ ಯೋಜನೆಯಲ್ಲಿ ತೊಡಗಿಸಿಕೊಳ್ಳುವುದು.<br>" ಇ-ಕಾಮರ್ಸ್ (E-Commerce) ನ ಕಡೆಗೆ ಗಮನ ನೀಡುವುದು.<br>" 31.03.2001 ರಿಂದ ವಿಶೇಷ ಆಮುದು ಪರವಾನಿಗಿಯನ್ನು ತೆಗೆದುಹಾಕುವುದು.<br>" 714 ಸುಂಕ ವಿಷಯಗಳ ಮೇಲೆ ಪರಿಮಾಣಾತ್ಮಕ ನಿಯಂತ್ರಣಗಳನ್ನು ತೆಗೆದುಹಾಕುವುದು. |

ಆಧಾರ : ದೇಶಪಾಂಡೆ ಆರ್.ಎಸ್. ಮತ್ತು ಪಿ.ತಿಪ್ಪಯ್ಯ (2000).

ವಿದೇಶಿ ವ್ಯಾಪಾರ ನೀತಿಯ ಜಾಗತಿಕ ವ್ಯಾಪಾರೀ ಪರಿಸರಕ್ಕೆ ತಕ್ಕಂತಿರಬೇಕು. ವ್ಯಾಪಾರ ನೀತಿಯೊಂದೇ ದೇಶದ ಅಭಿವೃದ್ಧಿಯನ್ನು ಬದಲಾಯಿಸುವುದಿಲ್ಲ ಇದಕ್ಕೆ ಪೂರಕವಾಗಿ ವ್ಯಾಪಾರೇತರ ಸ್ವದೇಶಿ ನೀತಿಯ ಅವಶ್ಯಕತೆ ಇದೆ. ಇದರಲ್ಲೂ ಕೃಷಿಗೆ ಸಂಬಂಧಿಸಿದ ನೀತಿಯು ಮುಖ್ಯ ಪಾತ್ರವಹಿಸುತ್ತದೆ. ಭಾರತದ ವ್ಯಾಪಾರ ನೀತಿ - ಕೃಷಿ ಮತ್ತು ಔದ್ಯೋಗಿಕ ರಂಗಗಳ ನಡುವೆ ಭಿನ್ನತೆಯನ್ನು ಉಳಿಸಿಕೊಂಡು ಬಂದಿದೆ. ಕೆಲವೊಂದು ಕೃಷಿ ವಸ್ತುಗಳು (ಚಹಾ, ಕಾಫೀ, ತಂಬಾಕು, ಮಸಾಲೆ, ಇತ್ಯಾದಿ) ಭಾರತದ ಒಟ್ಟು ರಫ್ತಿನ ಮಂಚೂಣಿಯಲ್ಲಿವೆ. ಆದರೆ ಔದ್ಯೋಗಿಕ ನೀತಿಗೆ ಸಂಬಂಧಿಸಿದ ಪರಿಸರ ರಫ್ತಿಗೆ ಸಹಾಯಕಾರಿಯಾಗಿಲ್ಲ. ಲೈಸೆನ್ಸ್ ಕೋಟಾ, ಕ್ಯಾನಲೈಸೇಷನ್ ಮುಖಾಂತರ ಸಾಕಷ್ಟು ವಸ್ತುಗಳಲ್ಲಿನ ವಿದೇಶಿ ವ್ಯಾಪಾರವನ್ನು ನಿಯಂತ್ರಿಸಲಾಗಿತ್ತು. ಆಮುದು ಮತ್ತು ರಫ್ತುಗಳ ಪ್ರಮಾಣ ದೇಶದಲ್ಲಿನ ಬೇಡಿಕೆ, ಪೂರೈಕೆ ಮತ್ತು ಬೆಲೆಗಳನ್ನು ಆಧರಿಸಿ ನಿರ್ಧಾರವಾಗುತ್ತಿತ್ತು. ವ್ಯಾಪಾರ ನೀತಿ ಪರಿಮಾಣಾತ್ಮಕ ನಿರ್ಬಂಧಗಳಾದ ಪರವಾನಿಗೆ ಮತ್ತು ಕೋಟಾಗಳ ಮುಖಾಂತರ ಅದನ್ನು ನಿಯಂತ್ರಿಸಲಾಗುತ್ತಿತ್ತು. 1988ರ ಮಾತುಕತೆಗ ಪ್ರಕಾರ ವ್ಯಾಪಾರ ನೀತಿಯಲ್ಲಿ ಬದಲಾವಣೆಗಳನ್ನು ತಂದು 1992-97 ಅವಧಿಗಾಗಿ ಆಮುದು- ರಫ್ತು ನೀತಿಯನ್ನು ರೂಪಿಸಲಾಯಿತು. ನಂತರ ಏಪ್ರಿಲ್ 1999 ಮತ್ತು ಏಪ್ರಿಲ್ 2000 ದಲ್ಲಿ ಈ ದಿಸೆಯಲ್ಲಿ ಇನ್ನೂ ಕೆಲವೊಂದು ಕ್ರಮಗಳನ್ನು ಕೈಗೊಳ್ಳಲಾಯಿತು. ಸುಂಕೀಕರಣ, ಡಿಕ್ಯಾನಲೈಸೇಷನ್ ಮತ್ತು ಪರಿಮಾಣಾತ್ಮಕ ನಿಯಂತ್ರಣಗಳನ್ನು ತೆಗೆದು ಹಾಕುವುದು - ಇವುಗಳಿಂದಾಗಿ ಹೊಸ ವ್ಯಾಪಾರ ನೀತಿಯ ದಿಕ್ಕು ತುಂಬಾ ಸುಸ್ಪಷ್ಟವಾಗಿದೆ.

## 3.2 ಭಾರತ ಮತ್ತು ಕರ್ನಾಟಕದಲ್ಲಿ ಕೃಷಿ ವ್ಯಾಪಾರ ಕಾರ್ಯನಿರ್ವಹಣೆ

ಭಾರತದ ವ್ಯಾಪಾರ ವ್ಯವಸ್ಥೆಯು 1990 ಕ್ಕಿಂತ ಮುಂಚೆ ನಿರ್ಬಂಧಿತ ವ್ಯಾಪಾರ ವ್ಯವಸ್ಥೆಯಾಗಿತ್ತು. ಕೇವಲ ಶೇಕಡ 10 ಕ್ಕಿಂತ ಕಡಿಮೆ ಕೃಷಿ ವಸ್ತುಗಳನ್ನು ಮುಕ್ತವಾಗಿ ಆಮುದು ಮಾಡಿಕೊಳ್ಳ ಬಹುದಿತ್ತು. ರಫ್ತಿನಂತೆ ಆಮುದು ಕ್ರಮವು ಸಹ ನಿರ್ಬಂಧಿತವಾಗಿತ್ತು. ಸುಮಾರು ಶೇಕಡ 31 ಕೃಷಿ ಉತ್ಪನ್ನಗಳನ್ನು ರಫ್ತಿನಿಂದ ನಿಷೇಧಿಸಲಾಗಿತ್ತು. ಇದರಿಂದಾಗಿ ಆಮುದು, ರಫ್ತಿನ ಬೆಳವಣಿಗೆ ದರವು ಗಮನಾರ್ಹವಾಗಿರಲಿಲ್ಲ. 1970-76 ರಲ್ಲಿ ಕೃಷಿ ಉತ್ಪನ್ನಗಳ ಆಮುದು ಒಟ್ಟು ಆಮದಿನ ಪರಿಮಾಣದಲ್ಲಿ ಶೇ 20 ರಿಂದ 30 ಆಗಿತ್ತು. 1976 ರ ನಂತರ ಈ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿ

ಭಾರತವು ಧಾನ್ಯಗಳ ನಿವ್ವಳ ರಫ್ತಿನ ದೇಶವಾಯಿತು. 1980 ರ ದಶಕದಲ್ಲಿ ಎಣ್ಣೆ ಪದಾರ್ಥಗಳು ಒಟ್ಟು ಆಮದಿನಲ್ಲಿ ಹೆಚ್ಚು ಭಾಗವನ್ನು ಪಡೆದಿದ್ದವು. 1982-83 ರಲ್ಲಿ ಈ ಸುಚಿಯಲ್ಲಿ ಅಧಿಕ ಬದಲಾವಣೆಗಳು ಕಂಡು ಬಂದವು.

ಕರ್ನಾಟಕ ರಾಜ್ಯದ ಆರ್ಥಿಕತೆಯಲ್ಲಿ ಕೃಷಿ ಕ್ಷೇತ್ರವು ಪಾತ್ರ ವಹಿಸುತ್ತಿದೆ. 1997-98 ರಲ್ಲಿ ಕೃಷಿ ಉತ್ಪನ್ನಗಳ ಪಾಲು ರಾಜ್ಯದ ಒಟ್ಟು ಉತ್ಪಾದನೆಯ ಶೇಕಡ 28.20 ರಷ್ಟಿತ್ತು. ಆದರಂತೆ ಕೃಷಿಯು ಹೆಚ್ಚು ಉದ್ಯೋಗ ಒದಗಿಸುವ ಕ್ಷೇತ್ರವಾಗಿದೆ (ಸುಮಾರು ಶೇಕಡ 67). ಕರ್ನಾಟಕವು 10 ಕೃಷಿ ಹವಾಮಾನ ವಲಯಗಳನ್ನು ಹೊಂದಿದೆ. ಕರ್ನಾಟಕವು ಹೊಂದಿರುವ ವಿವಿಧ ಮಣ್ಣು ದ್ವಿಮಾದರಿಯ ಮಳೆ ಮತ್ತು ನೀರಾವರಿ ಸಾಮರ್ಥ್ಯವು ಕೃಷಿ ಕ್ಷೇತ್ರಕ್ಕೆ ತುಂಬಾ ಅನುಕೂಲವಾಗುತ್ತದೆ. ಕರ್ನಾಟಕ ರಾಜ್ಯವು ಆಹಾರ ಧಾನ್ಯ, ಹತ್ತಿ ಮತ್ತು ಸಕ್ಕರೆ ಉತ್ಪಾದನೆಯಲ್ಲಿ ಸ್ವಾವಲಂಭಿಯಾಗಿದೆ. ಕರ್ನಾಟಕದ ಜನ ಸಂಖ್ಯೆಯು 2000-2001 ಕ್ಕೆ ಸುಮಾರು 5.58 ಕೋಟಿ ತಲುಪುವ ಅಂದಾಜಿದ್ದು, 98.08 ಲಕ್ಷ ಟನ್ ಆಹಾರ ಧಾನ್ಯಗಳ ಅವಶ್ಯಕತೆ ಇದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರವು 2000-2001 ಕ್ಕೆ 100.08 ಲಕ್ಷ ಟನ್ ಅಹಾರೋತ್ಪಾದನೆಯ ಯೋಜನೆ ಹಾಕಿಕೊಂಡಿದೆ.

ಕರ್ನಾಟಕ ರಾಜ್ಯವು 1996-97 ರಲ್ಲಿ ಭಾರತದ ಒಟ್ಟು ಆಹಾರ ಉತ್ಪಾದನೆಯಲ್ಲಿ ಶೇಕಡ 4.6 ಭಾರ, ಎಣ್ಣೆ ಬೀಜಗಳಲ್ಲಿ ಶೇಕಡ 5.10, ಹತ್ತಿಯಲ್ಲಿ ಶೇಕಡ 7.2, ಸಕ್ಕರೆ - ಶೇ 8.9 ಭಾಗ ಹೊಂದಿದೆ. ಅಕ್ಕಿ, ಹತ್ತಿ, ಸಕ್ಕರೆ ಇಳುವರಿಯು ದೇಶದ ಸರಾಸರಿ ಇಳುವರಿಗಿಂತ ಹೆಚ್ಚಿದೆ. ಆದರಂತೆ ಜೋಳ ಮತ್ತು ಸಜ್ಜೆಯ ಇಳುವರಿಯು ಸಹ ದೇಶದ ಮತ್ತು ಸುತ್ತಮುತ್ತಲಿನ ರಾಜ್ಯಗಳ ಸರಾಸರಿ ಉತ್ಪಾದನಾ ಪ್ರಮಾಣಕ್ಕಿಂತಲೂ ಅಧಿಕವಾಗಿದೆ. ಮೆಕ್ಕೆ ಜೋಳದ ಉತ್ಪಾದನೆಯಲ್ಲಿ ಕರ್ನಾಟಕವೇ ಪ್ರಥಮ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ ಹತ್ತಿ, ಸಕ್ಕರೆ, ತಂಬಾಕು ಮತ್ತು ಮೆಕ್ಕೆ ಜೋಳಗಳನ್ನು ರಫ್ತು ಮಾಡಲು ಹೆಚ್ಚು ಅವಕಾಶಗಳಿವೆ. ಭಾರದಲ್ಲಿಯ ಒಟ್ಟು ರಫ್ತು ಮೊತ್ತದಲ್ಲಿ ಕರ್ನಾಟಕ ಕೃಷಿ ಉತ್ಪನ್ನಗಳು ಮಹತ್ವದ ಸ್ಥಾನ ಪಡೆದಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕರ್ನಾಟಕದ ಒಟ್ಟು ರಫ್ತಿನ ಪ್ರಮಾಣವು 1994 ರಲ್ಲಿ 4000 ಕೋಟಿ ರೂ.ಗಳಷ್ಟು ಇದ್ದುದು 2000 ರಲ್ಲಿ ಇದು ರೂ 7200 ಕೋಟಿ ತಲುಪಿದೆ. ಕರ್ನಾಟಕದ ರಫ್ತು ವಸ್ತುಗಳಲ್ಲಿ ಕಾಫಿಯು ಪ್ರಥಮ ಸ್ಥಾನದಲ್ಲಿದ್ದು, ನಂತರ ಗೋಡಂಬಿ ಮತ್ತು ಸಂಸ್ಕರಿಸಿದ ಆಹಾರ ವಸ್ತುಗಳಿವೆ. ಪ್ರಾಣಿ ಉತ್ಪನ್ನ ಹೊಗಾರಿಕೆ ಮತ್ತು ಇತರ ಧಾನ್ಯಗಳು ಉತ್ತಮ ಸಾಮರ್ಥ್ಯವನ್ನು ಹೊಂದಿವೆ. ಭಾರತದ ಕೃಷಿ ವ್ಯಾಪಾರದಲ್ಲಿ ಕರ್ನಾಟಕ ರಾಜ್ಯವು ಅಗ್ರಮಾನ್ಯ ಸ್ಥಾನವನ್ನು ಅಲಂಕರಿಸುವ ಸೂಚನೆಗಳು ಕಂಡುಬರುತ್ತಿವೆ.

# ಭಾಗ - 4

## ರಫ್ತು ಸಂಸ್ಕರಣ ವಲಯಗಳ ರಚನೆ

### 4.1 ರಫ್ತು ಸಂಸ್ಕರಣ ವಲಯಗಳೆಂದರೇನು?

ಇವುಗಳು ಸಾಂಪ್ರದಾಯಕವಲ್ಲದ ರಫ್ತುಗಳ ಉತ್ತೇಜನಕ್ಕಾಗಿ ಇರುವ ಸಾಧನಗಳಲ್ಲೊಂದು ವಿಶ್ವ ಬ್ಯಾಂಕಿನ ಪ್ರಕಾರ ಇದು ಸುಮಾರು 10 ರಿಂದ 300 ಹೆಕ್ಟೇರುಗಳ ವರೆಗೆ ಹರಡಿರುವಂತಹ ಒಂದು ಔದ್ಯೋಗಕ ಎಸ್ಟೇಟು, ಅದು ಮುಕ್ತವ್ಯಾಪಾರ ಪರಿಸರವನ್ನು ಒದರಿಸುತ್ತದೆ. ಇವು ಮೂಲತಃ ರಫ್ತಿಗಾಗಿಯೇ ಉತ್ಪಾದನೆಯನ್ನು ಕೈಗೊಳ್ಳುತ್ತದೆ, ಕೆಲವೊಂದು ಸಾರಿ ಆಂತರಿಕ ಮಾರಯಕಟ್ಟೆಯಲ್ಲಿ ಮಾರಾಟಕ್ಕೆ ವಸ್ತು ತಯಾರಿಸುವವರು ಸಹ ರಫ್ತು ಸಂಸ್ಕರಣ ಘಟಕಗಳನ್ನು ಹೊಂದಬಹುದು.

### 4.2 ರಫ್ತು ಸಂಸ್ಕರಣ ವಲಯಗಳ ಮುಖ್ಯ ಗುರಿಗಳು

1. ಸಾಂಪ್ರದಾಯಕವಲ್ಲದ ರಫ್ತುಗಳಿಗೆ ಉತ್ತೇಜನ ನೀಡುವ ಮುಖಾಂತರ ವಿದೇಶಿ ವಿನಿಮಯಗಳನ್ನು ಗಳಿಸಿಕೊಡುವುದು.
2. ನಿರುದ್ಯೋಗ ಅಥವಾ ಅರೆನಿರುದ್ಯೋಗದ ನಿವಾರಣೆಗೆ ಮತ್ತು ವರಮಾನ ಗಳಿಸಲು ಸಹಾಯ ಮಾಡುವುದು.
3. ನೇರ ವಿದೇಶಿ ಬಂಡವಾಳ ಆಕರ್ಷಿಸುವುದರ ಮೂಲಕ ಮುಂದುವರೆದ ಆಧುನಿಕ ತಂತ್ರಜ್ಞಾನದ ವರ್ಗಾವಣೆಯಲ್ಲಿ ಸಹಾಯ ಮಾಡುವುದು.

### 4.3 ರಫ್ತು ಸಂಸ್ಕರಣ ವಲಯಗಳ ಸಾಮಾನ್ಯ ಲಕ್ಷಣಗಳು

1. ನಿರ್ಬಂಧ ಮತ್ತು ತೆರಿಗೆ ರಹಿತ ಕಚ್ಚಾ ವಸ್ತು ಮಧ್ಯಮಗುಣದ ಮತ್ತು ಬಂಡವಾಳ ವಸ್ತುಗಳ ಆಮದಿಗೆ ಅವಕಾಶ.
2. ಸರ್ಕಾರದ ಕಡಿಮೆ ಹಸ್ತಕ್ಷೇಪ.
3. ಈ ಘಟಕವಳಿಗೆ ದೀರ್ಘಕಾಲಿಕ ತೆರಿಗೆ ರಜೆ ಮತ್ತು ಇತರೆ ವಿನಾಯಿತಿಗಳು.
4. ಒಳ್ಳೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
5. ರಫ್ತು ಸಂಸ್ಕರಣ ವಲಯಗಳು, ದೇಶಿಯ ಅಂತರ್ದೇಶೀಯ ಅಥವಾ ಜಂಟಿವಲಯ ಕಂಪನಿಗಳಾಗಿರಬಹುದು. ಇಲ್ಲಿ ನೇರ ವಿದೇಶಿ ಬಂಡವಾಳ ಮುಖ್ಯ ಪಾತ್ರ ವಹಿಸುತ್ತದೆ.
6. ರಫ್ತು ಸಂಸ್ಕರಣ ವಲಯಗಳು ಸಾರ್ವಜನಿಕ ಅಥವಾ ಖಾಸಗಿ ಒಡೆತನಕ್ಕೆ ಒಳಪಟ್ಟಿರಬಹುದು.

## 4.4 ರಫ್ತು ಸಂಸ್ಕರಣ ವಲಯ ಮತ್ತು ರಫ್ತು ಪರಷರಣ ಘಟಕಗಳ ಲಕ್ಷಣ ಮತ್ತು ಗುರಿಗಳು

ಈ ಮೇಲೆ ತಿಳಿಸದಂತೆ ಇವುಗಳ ಮುಖ್ಯ ಉದ್ದೇಶ ರಫ್ತಿಗೆ ಉತ್ತೇಜನ, ನೇರ ವಿದೇಶಿ ಬಂಡವಾಳದ ಆಕರ್ಷಣೆ, ನಿರುದ್ಯೋಗ ನಿವಾರಣೆ ಇತ್ಯಾದಿ ಬಗ್ಗೆ ಒಮ್ಮತವಿದೆಯಾದರೂ ಅವುಗಳ ಲಕ್ಷಣಗಳ ಬಗ್ಗೆ ಒಟ್ಟಾಭಿಪ್ರಾಯ ಇಲ್ಲ. ಇವು ಮೊದಲಿನಿಂದಲೂ ಇವೆಯಾದರೂ 1990 ರ ದಶಕದಲ್ಲಿ ಇವು ಹೆಚ್ಚಿನ ಪ್ರಾಮುಖ್ಯತೆ ಪಡೆದವು.

ರಫ್ತು ಸಂಸ್ಕರಣ ವಲಯಗಳ ಪಾತ್ರದ ಬಗ್ಗೆ ಮುಖ್ಯವಾಗಿ ನಾಲ್ಕು ಅಭಿಪ್ರಾಯಗಳಿವೆ. ಮೊದಲನೆಯ ಅಭಿಪ್ರಾಯದ ಪ್ರಕಾರ, ಇವು ಸಮಗ್ರ ಆರ್ಥಿಕ ಸುಧಾರಣೆಗಳ ಒಂದು ಅಖಂಡ ಭಾಗ. ಈ ಪ್ರಕಾರದಲ್ಲಿ ಇವುಗಳಿಗೆ ನಿರ್ದಿಷ್ಟ ಜೀವಿತಾವಧಿ ಇದ್ದು ಆರ್ಥಿಕ ಸುಧಾರಣಾ ಕ್ರಮಗಳು (ವಿಶೇಷವಾಗಿ ಅಂತರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ) ಮುಂದುವರೆದಂತೆ ತಮ್ಮ ಪ್ರಾಮುಖ್ಯತೆ ಕಳೆದುಕೊಳ್ಳುತ್ತವೆ. ಜಾಗತೀಕರಣ ಪ್ರಕ್ರಿಯೆ ಮುಂದುವರೆದಂತೆ ಇವುಗಳ ಪಾತ್ರ ಕುಂಠಿತವಾಗುತ್ತದೆ. ತೈವಾನ್ ಮತ್ತು ದಕ್ಷಿಣ ಕೋರಿಯಾಗಳ ಅನುಭವ ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುತ್ತದೆ. ಎರಡನೆಯ ಅಭಿಪ್ರಾಯದ ಪ್ರಕಾರ ರಫ್ತು ಸಂಸ್ಕರಣ ವಲಯಗಳು ಒಂದು ರೀತಿಯ ಸುರಕ್ಷಾಕಿಂಡಿ ಇದ್ದಂತೆ. ಇವು ಮುಖ್ಯವಾಗಿ ಅತ್ಯಾವಶ್ಯಕ ವಿದೇಶಿ ವಿನಿಮಯ, ಉದ್ಯೋಗ ಅವಕಾಶ ಒದಗಿಸಕೊಡುತ್ತದೆಯಾದರೂ ಆರ್ಥಿಕ ಸುಧಾರಣಾ ಕ್ರಮಗಳ ಅಖಂಡ ಅಂಗವಾಗಿದೆ, ಪ್ರತ್ಯೇಕ ಪ್ರದೇಶಗಳಾಗಿ ಉಳಿಯುತ್ತವೆ. ಟುನೀಷಿಯಾ ಇದಕ್ಕೊಂದು ಉದಾಹರಣೆ. ಮೂರನೆಯ ಅಭಿಪ್ರಾಯದಂತೆ, ಇವುಗಳು ಮಾರುಕಟ್ಟೆ ಆರ್ಥಿಕತೆಯ ಪ್ರಯೋಗ ಶಾಲೆಯಂತೆ (ಚೀನಾ ದೇಶದ ಅನುಭವದ ಪ್ರಕಾರ). ಕೊನೆಯದಾಗಿ ಇತ್ತೀಚಿನ ಅಭಿಪ್ರಾಯದಂತೆ ಇವುಗಳು ನೇರ ವಿದೇಶಿ ಬಂಡವಾಳಗಳನ್ನು ಆಕರ್ಷಿಸುವ ಮುಖ್ಯ ಸಾಧನಗಳು.

## 4.5 ರಫ್ತು ಪರಿಷ್ಕರಣ ಘಟಕದ ಕೆಲವೊಂದು ಅನುಭವಗಳು

ರಫ್ತು ಸಂಸ್ಕರಣ ವಲಯಗಳು ಪ್ರಮುಖವಾಗಿ ಉದ್ಯೋಗಾವಕಾಶದ ನಿರ್ಮಾಣ ಮತ್ತು ವಿದೇಶಿ ವಿನಿಮಯದ ಗಳಿಕೆಯಲ್ಲಿ ಮುಖ್ಯ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ 1994 ರಲ್ಲಿ ಮಾರಷಿಸ್ ದೇಶದ ರಫ್ತಿನ ಶೇಕಡಾ 71 ಭಾಗ ಮತ್ತು ಉದ್ಯೋಗದ 16.6 ರಷ್ಟು ರಫ್ತು ಸಂಸ್ಕರಣ ವಲಯದ ಕೊಡುಗೆ. ಆದರೆ ಕೆಲವರ ಪ್ರಕಾರ ರಫ್ತು ಸಂಸ್ಕರಣ ವಲಯಗಳಲ್ಲಿ ತೊಡಗಿಸಿರುವ ಸಾರ್ವಜನಿಕ ಬಂಡವಾಳಕ್ಕೆ ಹೋಲಿಸಿದರೆ ಮತ್ತು ಅವುಗಳಿಗೆ ಒದಗಿಸುವ ತೆರಿಗೆ ಮತ್ತು ಇತರೆ ವಿನಾಯಿತಿಯನ್ನು ಕೂಡ ಗಣನೆಗೆ ತೆಗೆದುಕೊಂಡರೆ ಅವುಗಳಿಂದ ಉಂಟಾಗುತ್ತಿರುವ ಲಾಭ ಹೆಚ್ಚೇನೂ ಇಲ್ಲ. ಮೇಲಾಗಿ ರಫ್ತು ಸಂಸ್ಕರಣ ವಲಯಗಳ ಕಾರ್ಯನಿರ್ವಹಣೆ ಸಮಗ್ರ ರಾಷ್ಟ್ರೀಯ ಆರ್ಥಿಕ ನೀತಿಯ ಮೇಲೆ ಅವಲಂಬಿತವಾಗಿದ್ದು, ಆರ್ಥಿಕ ನೀತಿ ಆರೋಗ್ಯಕರವಾಗಿದ್ದರೆ ಮಾತ್ರ ಅವು ನಿರೀಕ್ಷಿತ ಫಲ ನೀಡುತ್ತವೆ. ಏನೇ ಇರಲಿ, ಇವುಗಳು ಮಾನವ ಸಂಪನ್ಮೂಲಗಳ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಕಂಡು ಬರುತ್ತದೆ. ಹೇಗೆಂದರೆ ಅಲ್ಲಿಯ ಕಾರ್ಮಿಕ ಹೆಚ್ಚು ನುರಿತವರಾಗಿದ್ದು ಅವರು ಕೌಶಲ್ಯ, ಔದ್ಯೋಗಿಕ ಶಿಸ್ತು ಮತ್ತು ಉತ್ಪಾದಕತೆಯಲ್ಲಿ ಗಣನೀಯ ಪ್ರಗತಿ ಮಾಡಿರುವುದು ಕಂಡು ಬಂದಿದೆ. ಮಾರುಕಟ್ಟೆಯ ಕೌಶಲ್ಯವು, ಆಡಳಿತ ಅನುಭವ, ವಿದೇಶಗಳ ಸಂಬಂಧ ಇತ್ಯಾದಿಗಳಲ್ಲಿ ಸೂಕ್ತ ತರಬೇತಿ ಸಿಕ್ಕಿದ ವಿಷಯಗಳಲ್ಲಿ ಕೂಡ ಗಣನೀಯ ಸುಧಾರಣೆ ಆಗಿದೆ. ವ್ಯಾಪಾರ

ಆಧಾರದ ರಾಷ್ಟ್ರಗಳಲ್ಲಿ ರಫ್ತು ಸಂಸ್ಕರಣ ವಲಯಗಳು ಸಮರ್ಥ ಮತ್ತು ಪೈಪೋಟಿಯಂತೆ ಔದ್ಯೋಗಿಕ ಪರಿಸರವನ್ನು ನಿರ್ಮಿಸಿದ್ದು ಇದೆ. ಈ ಮುಖಾಂತರ ದೇಶದ ಬೆಳವಣಿಗೆಗೆ ಶಾಶ್ವತ ಕೊಡುಗೆಯನ್ನು ನೀಡಬಲ್ಲವು.

ಬೇರೆ ಪ್ರದೇಶಗಳಿಗೆ ಹೋಲಿಸಿದಾಗ ರಫ್ತು ಸಂಸ್ಕರಣ ಪ್ರದೇಶಗಳಲ್ಲಿ ಕೂಲಿಯ ದರ ಹೆಚ್ಚಾಗಿದೆಯಾದರೂ ಅಲ್ಲಿನ ಶ್ರಮಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟಂತೆ ಕಳವಳ ವ್ಯಕ್ತವಾಗಿದೆ. ಅದೇ ರೀತಿ ಇವುಗಳಲ್ಲಿನ ಪರಿಸರ ಮಾಲಿನ್ಯ ಮತ್ತು ಸಡಿಲ ಸರ್ಕಾರಿ ನಿಯಂತ್ರಣದ ಬಗ್ಗೆಯ ಚಿಂತೆ ವ್ಯಕ್ತವಾಗಿದೆ. ಒಟ್ಟಾರೆಯಾಗಿ ನೋಡುವುದಾದರೆ ಈ ವಲಯಗಳು ನಿರೀಕ್ಷೆಯಂತೆ ಎಲ್ಲೆಡೆ ಔದ್ಯೋಗಿಕ ಮತ್ತು ಆರ್ಥಿಕ ಪ್ರಗತಿಯ ಇಂಜಿನ್ ಆಗಿ ಕಾರ್ಯ ನಿರ್ವಹಿಸಿದಂತೆ ಕಂಡುಬಂದಿಲ್ಲ. ಆದರೆ ಒಳ್ಳೆಯ ಆರ್ಥಿಕ ನೀತಿಯ ಪರಿಸರದಲ್ಲಿ ಅವು ತೃಪ್ತಿದಾಯಕವಾಗಿ ಕಾರ್ರ ನಿರ್ವಹಿಸಿರುವುದನ್ನು ಅಲಕ್ಷಿಸುವಂತಿಲ್ಲ.

ವಿಶ್ವ ವ್ಯಾಪಾರ ಸಂಘಟನೆಯ ಕಾಯ್ದೆಗೆ ಸಂಬಂಧಿಸಿದಂತೆ ರಫ್ತು ಸಂಸ್ಕರಣ ವಲಯಗಳಿಗೆ ಒದಗಿಸುವ ವಿನಾಯಿತಿಗಳನ್ನು ಸಂಬಂಧಿಸಿದ ಸಬ್ಸಿಡಿಗಳೆಂದು ಪರಿಗಣಿಸಲಾಗಿದ್ದು, ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ಇದರಿಂದ ವಿನಾಯಿತಿ ಸಿಗಬಹುದು ಅಥವಾ ಸಿಗಲಿಕ್ಕಿಲ. ವಾರ್ಷಿಕ ತಲಾ ಆದಾಯ 1000 ಡಾಲರ್ಗಳಿಗಿಂತ ಕಡಿಮೆ ಇರುವ ಅತಿ ಹಿಂದುಳಿದ ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ಮಾತ್ರ ಈ ವಿನಾಯಿತಿ ಇದೆ. ಏನೇ ಇರಲಿ ಇವುಗಳನ್ನು ಸರಿಯಾಗಿ ನಿರ್ವಹಿಸಿದಲ್ಲಿ ಮತ್ತು ರಾಷ್ಟ್ರೀಯ ಆರ್ಥಿಕ ಸುಧಾರಣಾ ಕ್ರಮದಲ್ಲಿ ಒಂದು ಪ್ರಮುಖ ಅಂಗವೆಂಬಂತೆ ಪರಿಗಣಿಸಿದಲ್ಲಿ ರಾಷ್ಟ್ರಕ್ಕೆ ಹೆಚ್ಚಿನ ಪ್ರಮಾಣದ ಮತ್ತು ದೀರ್ಘಾವಧಿಯ ಲಾಭವನ್ನು ತಂದು ಕೊಡಬಲ್ಲವು. ಕನಿಷ್ಠವೆಂದರೂ ಸಹ ರಫ್ತು ಸಂಸ್ಕರಣ ವಲಯಗಳು ಆರ್ಥಿಕ ಸುಧಾರಣಾ ಪ್ರಕ್ರಿಯೆಯಲ್ಲಿ ರಕ್ಷಣಾ ಮೌಲ್ಯವಾಗಿಯಾದರೂ ಕಾರ್ಯಮಾಡಬಲ್ಲವು.

## 4.6 ಕರ್ನಾಟಕದಲ್ಲಿ ರಫ್ತು ಸಂಸ್ಕರಣ ವಲಯಗಳ ರಚನೆ

ಕರ್ನಾಟಕದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳು ರಫ್ತಿಗೆ ಯೋಗ್ಯವಿದ್ದು ರಫ್ತು ಸಂಸ್ಕರಣ ವಲಯಗಳನ್ನು ಅಭಿವೃದ್ಧಿಪಡಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅವುಗಳ ಸ್ಪರ್ಧಾಶಕ್ತಿ ಹೆಚ್ಚಿಸುವುದು ಅವಶ್ಯಕವಾಗಿವೆ. ಕರ್ನಾಟಕದ ತೋಟಗಾರಿಕೆಯ ಪ್ರಮುಖ ಬೆಳೆಗಳಾದ ಹಣ್ಣು, ತರಕಾರಿ, ಸಾಂಬಾರ ಪದಾರ್ಥಗಳು, ಹೂಗಳು, ಔಷಧಿ ಮೂಲಿಕೆಗಳು ಮತ್ತು ತೋಟಗಾರಿಕೆ ಬೆಳೆಗಳಿಗೆ ಹೆಚ್ಚು ಅನುಕೂಲವಾಗುತ್ತದೆ.

ಪ್ರಸ್ತುತದಲ್ಲಿ ನಮ್ಮ ರಾಜ್ಯದ ಹಣ್ಣು, ತರಕಾರಿ, ಹೂವು ಅಭಿವೃದ್ಧಿಯ ರಫ್ತು ಸಾಮರ್ಥ್ಯವು ಅವುಗಳ ಬೇಡಿಕೆಗೆ ಹೋಲಿಸಿದರೆ ಅಷ್ಟೊಂದು ಸಮಾಧಾನಕರವಾಗಿಲ್ಲ. ಇದಕ್ಕೆ ಮುಖ್ಯ ಕಾರಣಗಳೆಂದರೆ ವ್ಯಾಪಾರದ ಅವಕಾಶಗಳ ತಿಸುವತಿಕೆಯ ಅಭಾವ, ಮೂಲಭೂತ ಸೌಕರ್ಯಗಳ ಕೊರತೆ, ಉತ್ಪಾದಕರು ಮತ್ತು ರಫ್ತುದಾರರಿಗೆ ಪ್ರೋತ್ಸಾಹದ ಅಭಾವ. ಈ ಮಹತ್ವದ ಅಂಶಗಳನ್ನು ರಾಜ್ಯ ಸರ್ಕಾರ ಕೂಡಲೇ ಬಗೆಹರಿಸಬೇಕು ಹಾಗೂ ರಾಜ್ಯ ಸರ್ಕಾರವು ಕೆಲವು ರಫ್ತಿನ ಸಾಮರ್ಥ್ಯವನ್ನು ಅಧಿಕವಾಗಿ ಹೊಂದಿರುವ ಬೆಳೆಗಳಿಗೆ ರಫ್ತು ಸಂಸ್ಕರಣ ವಲಯಗಳನ್ನು ರಚಿಸಲು ಕ್ರಮ ಕೈಗೊಳ್ಳಬೇಕು.

## 4.7 ರಾಜ್ಯದ ರಫ್ತು ಕ್ಷೇತ್ರದ ಸಾಮರ್ಥ್ಯ ಮತ್ತು ಅಸಾಮರ್ಥ್ಯ

**ಸಾಮರ್ಥ್ಯಗಳು** : 1. ರಾಜ್ಯದ ವಿವಿಧ ಕೃಷಿ ಹವಾಮಾನವು ನಾನಾ ತರಹದ ರಫ್ತು ಉತ್ಪನ್ನಗಳಿಗೆ ಪೂರಕವಾಗಿದೆ, 2. ಕರ್ನಾಟಕದ ರೈತ ಸಮುದಾಯ ಹೆಚ್ಚು ಆಸಕ್ತಿ ಹೊಂದಿದೆ ಎಂದು ಹೇಳಬಹುದು. ಅವರು ಸಹ ವ್ಯಾಪಾರಿಕವಾಗಿ ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿದ್ದಾರೆ. ಬಿಜಾಪುರ, ಬೆಳಗಾಂ, ಬೆಂಗಳೂರು, ಕೋಲಾರ ಮತ್ತು ಚಿತ್ರದುರ್ಗದ ರೈತರು ರಫ್ತುಗಳ ಕಡೆಗೆ ಹೆಚ್ಚು ಗಮನ ಕೊಟ್ಟಿರುತ್ತಾರೆ.

**ಅವಕಾಶಗಳು** : 1. ಜಾಗತಿಕ ವ್ಯಾಪಾರಕ್ಕಾಗಿ ಕರ್ನಾಟಕದಲ್ಲಿ ತಯಾರಾದ ತಾಜಾ ಮತ್ತು ಸಂಸ್ಕರಿಸಿದ ವಸ್ತುಗಳನ್ನು ಯುರೋಪ್, ಪಶ್ಚಿಮ ಏಶಿಯಾ, ವಿವಿಧ ಪೂರ್ವದೇಶಗಳು ಅಧಿಕವಾಗಿ ಉಪಯೋಗಿಸುತ್ತವೆ. ಆದ್ದರಿಂದ ಕೃಷಿ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗೆ ಹೆಚ್ಚಿನ ಅವಕಾಶವಿದೆ, 2. ಮುಂದುವರೆದ ದೇಶಗಳ ಮಾರುಕಟ್ಟೆಗೆ ಋತುಮಾನದ ಪ್ರಕಾರ ಕೆಲವು ಹಣ್ಣು ಮತ್ತು ತರಕಾರಿಗಳು ಬರುವುದಿಲ್ಲ. ಇವುಗಳನ್ನು ರಾಜ್ಯ ಸರ್ಕಾರ ಗುರುತಿಸಿ ಅವುಗಳ ಅಭಿವೃದ್ಧಿಗೆ ಗಮನ ಹರಿಸಿ ಅಧಿಕ ರಫ್ತನ್ನು ಹೊಂದುವ ಅವಕಾಶವಿದೆ, 3. ಅಮೇರಿಕಾ, ಫ್ರಾನ್ಸ್, ಜಪಾನ್ ಮತ್ತು ಇಂಗ್ಲೆಂಡ್ಗಳಲ್ಲಿ ಉಷ್ಣ ಹವಾಮಾನದಲ್ಲಿ ಬೆಳೆಯುವ ತೋಟಗಾರಿಕೆ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ. ಕ್ರಮೇಣ ಸ್ಥಳೀಯ ಗ್ರಾಹಕರು ಸಹ ಇವುಗಳ ಉಪಯೋಗದಲ್ಲಿ ಆಸಕ್ತಿ ಹೊಂದಬಹುದು, ಆದ್ದರಿಂದ ನಮ್ಮ ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳಿಗೆ ಉತ್ತೇಜನ ನೀಡಿ ರಫ್ತನ್ನು ಹೆಚ್ಚಿಸಬಹುದು.

## 4.8 ಕರ್ನಾಟಕದಲ್ಲಿ ರಫ್ತು ಪರಿಷ್ಕರಣ ವಲಯಗಳ ರಚನೆಯ ಸ್ಥಳಗಳು

ಕರ್ನಾಟಕದಲ್ಲಿ ಪ್ರಾರಂಭಕ್ಕೆ ರಫ್ತು ಸಂಸ್ಕರಣ ವಲಯಗಳ ಸ್ಥಾಪನೆಗೆ ಯೋಗ್ಯವಾದ ಸ್ಥಳಗಳೆಂದರೆ ಬಿಜಾಪುರ, ಚಿತ್ರದುರ್ಗ, ಕೋಲಾರ. ಈ ಮೂರು ಜಿಲ್ಲೆಗಳಲ್ಲಿನ ರೈತರು ತಾಂತ್ರಿಕ ಬೆಳವಣಿಗೆಗೆ ಸ್ಪಂದಿಸುತ್ತಿದ್ದು ಹೊಸ ಕೃಷಿ ತಂತ್ರಜ್ಞಾನವನ್ನು ಅಳವಡಿಸಕೊಳ್ಳಲು ಸಮರ್ಥರಿದ್ದಾರೆ ಮತ್ತು ಈ ಜಿಲ್ಲೆಗಳ ಬಹಳಷ್ಟು ರೈತರು ದೊಡ್ಡ ಹಿಡುವಳಿದಾರರಿದ್ದಾರೆ.

**ಬಿಜಾಪುರ :** ಈ ಜಿಲ್ಲೆಯಲ್ಲಿ ವಿವಿಧ ಬಗೆಯ ಹಣ್ಣುಗಳನ್ನು ಮತ್ತು ಅನೇಕ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಿದ್ದು, (ಉದಾ:- ಥಾಮ್ ಸನ್ ಬೀಜ ರಹಿತ ದ್ರಾಕ್ಷಿ, ಲಿಂಬೆ, ದಾಳಿಂಬೆ, ಈರುಳ್ಳಿ, ಮೆಕ್ಕೆ ಜೋಳ) ಇವುಗಳು ಅಧಿಕ ರಫ್ತು ಸಾಮರ್ಥ್ಯವನ್ನು ಹೊಂದಿದೆ.

**ಚಿತ್ರದುರ್ಗ** : ಈ ಜಿಲ್ಲೆಯು ವಿವಿಧ ತೋಟಗಾರಿಕಾ ಬೆಳೆಗಳಾದ ದಾಳಿಂಬೆ, ಅಂಜೂರ, ಪಪಾಯ, ಈರುಳ್ಳಿ, ಮೆಕ್ಕೆ ಜೋಳ, ನೆಲಗಡಲೆ ಮತ್ತು ಹುಚ್ಚೆಳ್ಳು ಗಳಿಗೆ ಪ್ರಸಿದ್ದಿಯನ್ನು ಪಡೆದಿದೆ. ಈ ಉತ್ಪನ್ನಗಳು ರಫ್ತಿಗೆ ತುಂಬ ಸಹಾಯಕವಾಗತ್ತವೆ.

**ಕೋಲಾರ** : ಈ ಜಿಲ್ಲೆಯು ಮಾವು, ದ್ರಾಕ್ಷಿ, ಈರುಳ್ಳಿ, ಟೊಮ್ಯಾಟೊ, ಆಲೂಗಡ್ಡೆ ಮತ್ತು ಇತರ ಮಹತ್ವದ ಬೆಳೆಗಳಿಗೆ ಪ್ರಸಿದ್ಧಿ ಪಡೆದಿರುತ್ತದೆ. ಈ ಜಿಲ್ಲೆಯು ತೋಟಗಾರಿಕಾ ಉತ್ಪನ್ನಗಳ ರಫ್ತಿನಲ್ಲಿ ಹೆಚ್ಚಿನ ಭಾಗ ಹೊಂದಿದೆ.

# ಭಾಗ - 5
# ಪ್ರಸ್ತಾವನೆಗಳು

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕೆಳಗಿನ ಪ್ರಸ್ತಾವನೆಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ. ಇವುಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸದ್ಯದ ಪರಿಸ್ಥಿತಿಯ ಸದುಪಯೋಗ ಪಡೆದುಕೊಳ್ಳಲು ಸಹಾಯಕವಾಗುತ್ತವೆ. ರಾಜ್ಯ ಸರಕಾರವು ತೀವ್ರವಾಗಿ ರಫ್ತು ಪರಿಷ್ಕರಣ ವಲಯದ ಸ್ಥಾಪನೆ ಮತ್ತು ಸಮಗ್ರ ರಫ್ತು ಬೆಳವಣಿಗೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೆಚ್ಚಿಗೆ ಗಮನಹರಿಸಬೇಕಾಗಿದೆ.

## 5.1 ತುರ್ತಾಗಿ ಕೈಗೊಳ್ಳಬೇಕಾದ ಕ್ರಮಗಳುಃ

- ಕೇಂದ್ರ ಸರಕಾರದ ನೀತಿ ನಿರ್ಣಯಗಳ ಚರ್ಚೆಯಲ್ಲಿ ರಾಜ್ಯ ಸರ್ಕಾರದ ಪಾತ್ರಃ ಕೃಷಿ ಕ್ಷೇತ್ರವು ರಾಜ್ಯ ಸರ್ಕಾರದ ವಿಷಯವಾಗಿದ್ದು ಅಂತಹ ಕ್ಷೇತ್ರದ ನೀತಿಯನ್ನು ರೂಪಿಸುವಾಗ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಜೊತೆಗೆ ಚರ್ಚಿಸಬೇಕು. ಅದೇ ರೀತಿ ರಾಜ್ಯ ಸರ್ಕಾರವು ರೂಪಿಸುವ ನೀತಿಯಲ್ಲಿ ಪೂರ್ಣ ಪ್ರಮಾಣದ ಭಾಗವಹಿಸುವಿಕೆ ಅವಶ್ಯಕ.
- ಆಮುದು ರಫ್ತು ನೀತಿಯಲ್ಲಿ ಬಂಡವಾಳ ಕೋರಿಕೆಃ ಕೇಂದ್ರ ವಾಣಿಜ್ಯ ಮಂತ್ರಿಗಳು ರಫ್ತು ಆಮದು ನೀತಿಯನ್ನು(Exim Policy) ಏಪ್ರಿಲ್ 1, 2001 ರಂದು ತಿದ್ದುಪಡಿ ಮಾಡುವಾಗ ರಾಜ್ಯ ಸರ್ಕಾರಗಳಿಗೆ ರ.್ತು ಅಭಿವೃದ್ಧಿಯಲ್ಲಿ ಭಾಗವಹಿಸಬೇಕೆಂದು ಕರೆನೀಡಿದ್ದಾರೆ. ರಫ್ತಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಗಳು ರಫ್ತಿನಲ್ಲಿ ಸಾಧಿಸಿರುವ ಅಭಿವೃದ್ಧಿಗೆಅನುಗುಣವಾಗಿ ಸಹಾಯ ನೀಡಲು ಒಂದು ಯೋಜನೆಯನ್ನು ರೂಪಿಸಲಾಗಿದೆ. ಪ್ರಾರಂಭದಲ್ಲಿ ಇದಕ್ಕಾಗಿ ರೂ.250 ಕೋಟಿಗಳನ್ನು ಮಂಜೂರು ಮಾಡಲಾಗಿದ್ದು ಈ ಬಂಡವಾಳದ ಮೊತ್ತವನ್ನು ರಾಜ್ಯ ಸರ್ಕಾರಗಳ ರಫ್ತಿಗೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳಾದ ರಸ್ತೆಗಳು, ಕೃಷಿ ರಫ್ತಿಗಾಗಿ ಶೈತ್ಯಾಗಾರಗಳು ಹಾಗು ಶೀತಲ ಸರಪಳಿ(Cold Chain) ಗಳ ಅಭಿವೃದ್ಧಿ ಬಂದರು ಅಭಿವೃದ್ಧಿ ರಾಜ್ಯದ ಕೆಲವು ರಫ್ತಿನ ವಸ್ತುಗಳ ಸಂಶೋಧನೆ ಮತ್ತು ಅಭಿವೃದ್ಧಿಗಳಿಗೆ ವ್ಯಯಿಸಬ್ಬಕಾಗುತ್ತದೆ.
- ರಾಜ್ಯಕ್ಕೆ ಅವಶ್ಯವಿರುವ ಪ್ರತ್ಯೇಕ ವಸ್ತುಗಳಿಗೆ ಆಧ್ಯತೆ ಕೊಡುವುದುಃ ರಾಜ್ಯ ಸರ್ಕಾರವು ಹಲವು ಉತ್ಪನ್ನಗಳ ಉತ್ಪಾದನೆ, ಸಂಸ್ಕರಣೆ, ಮತ್ತು ಮಾರುಕಟ್ಟೆಗಳಿಗೆ ವಿಶೇಷ ಗಮನಹರಿಸಬೇಕಾಗುತ್ತದೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಮೆಕ್ಕೆಜೋಳ, ನೆಲೆಗಡಲೆ, ಹುಚ್ಚೆಳ್ಳು, ಮೆಣಸಿನಕಾಯಿ, ಮಾವು, ದಾಳಿಂಬೆ, ದ್ರಾಕ್ಷಿ, ನಿಂಬೆ ಹೂಗಳು, ಗೋಡಂಬಿ, ಈರುಳ್ಳಿ, ಆಲೂಗಡ್ಡೆ, ಕಾಫಿ ಮತ್ತು ತರಕಾರಿ ಬೀಜಗಳು. ನಮ್ಮ ರಾಜ್ಯದ ಅವಶ್ಯ ಉತ್ಪಾದನೆಯಾದ ಬೆಂಗಳೂರು ಗುಲಾಬಿ ಈರುಳ್ಳಿಗೆ ಆಧ್ಯತೆ ಮುಂದುವರಿಸಬೇಕು. ಏಕೆಂದರೆ ಇದನ್ನು ರಫ್ತಿಗೋಸ್ಕರವೇ ಬೆಳೆಯಲಾಗುತ್ತದೆ. ಆದ್ದರಿಂದ ಸಂರಕ್ಷಣೆ ಇಲ್ಲದಿದ್ದರೆ ರೈತರು ನೇರವಾಗಿ ಹಾನಿಗೊಳಗಾಗುತ್ತಾರೆ.

- ವಿಶೇಷ ರಕ್ಷಣ ಕ್ರಮಗಳು ಮತ್ತು ಫೈಟೋಸ್ಯಾನಿಟರಿ ಕ್ರಮಗಳು: ಪ್ರಸ್ತುತ ರಕ್ಷಣಾ ಕ್ರಮಗಳ ಸೂಕ್ತ ಮಾಹಿತಿ ಕುರಿತು ಹೆಚ್ಚು ಮಾಹಿತಿ ಲಭ್ಯವಿಲ್ಲದಿರುವುದರಿಂದ ರಾಜ್ಯ ಸರ್ಕಾರ ರಫ್ತುದಾರರಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ತಿಳುವಳಿಕೆ ಮೂಡಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕು.
- ಆಂತರಿಕ ಬೆಳೆಯ ಅನುಕೂಲತೆ: ಕೇಂದ್ರ ಸರ್ಕಾರವು ಆಮದು ಸುಂಕವನ್ನು ನಿಗದಿಪಡಿಸಲಾದ ಸ್ವದೇಶಿ/ಆಂತರಿಕ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳಬೇಕು.
- ಹಸಿರು ಪಟ್ಟಿಗೆ ಕ್ರಮಗಳು: ಪರಿಸರ ನಳಿಸುವಿಕೆಗೆ ಒಳಗಾಗಿರುವ ವಲಯ: (Environmental Fragile Zones) ಗಳಾದ ಬಿಜಾಪುರ, ಗುಲ್ಬರ್ಗಾ, ಬೀದರ್‌ಇತ್ಯಾದಿಗಳಿಗೆ ವಿಶ್ವ ವ್ಯಾಪಾರ ಸಂಘಟನೆಯಿಂದ ಅನುಕೂಲವಾಗುವಂತೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು.
- ನೋಡಲ್ ಏಜೆನ್ಸಿ(Nodal Agency) ಯ ಸ್ಥಾಪನೆ: ವ್ಯಾಪಾರದ ವಾತಾವರಣ ಸೃಷ್ಟಿ ಮಾಡುವುದರ ನಿಟ್ಟಿನಲ್ಲಿ ಎರಡು ಹಂತಗಳನ್ನು ಹೊಂದಿರುವ ಕೇಂದ್ರದ ವ್ಯವಸ್ಥೆಯನ್ನು ಸ್ಥಾಪಿಸುವುದು ಅವಶ್ಯವಿದೆ. ಕೇಂದ್ರದಲ್ಲಿ ಕೃಷಿ ಮಂತ್ರಿಮಂಡಳದ ಮುಖ್ಯ ಸಂಸ್ಥೆಯಾಗಿ ಮತ್ತು ಇನ್ನೊಂದು ವಿವಿಧ ರಾಜ್ಯಗಳಲ್ಲಿದ್ದು ಇವುಗಳು ಕೇಂದ್ರದ ಜೊತೆಗೆ ಸಂಪರ್ಕವನ್ನು ಸೃಷ್ಟಿಸುವಂತಿರಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ವಿಶ್ವ ವ್ಯಾಪಾರ ಸಂಘಟನೆಯ ಸೆಲ್ ವು ನಿರಂತರವಾಗಿ ವಿವಿಧ ನೀತಿಗ ಬಗ್ಗೆ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ(monitoring). ಆದರಂತೆ ನೋಡಲ್ ಏಜೆನ್ಸಿ ಸವಿಸ್ತಾರವಾದ ಮಾಹಿತಿಯನ್ನು ಸಂಗ್ರಹಿಸಿ ಸಂಬಂಧಿಸಿದವರಿಗೆ ಒದಗಿಸಲು ಸಹಕಾರಿಯಾಗುತ್ತದೆ.
- ಪರಿಸರದ ಸಂರಕ್ಷಣೆ: ರಾಜ್ಯ ಸರ್ಕಾರವು ವಿಶ್ವ ವ್ಯಾಪಾರ ಸಂಘಟನೆಯ ಸೆಲ್ ನ ಮುಖಾಂತರ ಅರಣ್ಯ, ತೋಟಗಾರಿಕೆ, ಅಂತರ್ಜಲ ಮಂಡಳಿ ಹಾಗು ಪರಿಸರ ಸಂರಕ್ಷಣಾ ವಾದಿಗಳ ಜೊತೆಗೂಡಿ ಪರಿಸರ ರಕ್ಷಣೆಗೆ ಸಂಬಂದಿಸಿದಂತೆ ಡಬ್ಲ್ಯೂ. ಟಿ.ಒ. ದಲ್ಲಿ ಅವ ಶ್ಯಕವಾದ ರೂಪುರೇಷೆಗಳನ್ನು ತಯಾರಿಸುವುದರ ಮೂಲಕ ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಪೈಪೋಟಿಯಿಂದ ಪರಿಸರದ ಮೇಲಿನ ದುಷ್ಪರಿಣಾಮ ಮತ್ತು ಜನರ ಕಲ್ಯಾಣಕ್ಕೆ ಉಂಟಾಗುವ ಹಾನಿಯನ್ನು ತಡೆಯಲು ಕ್ರಮ ಕೈಗೊಳ್ಳಬಹುದು.

## 5.2 ವಿಶೇಷ ಅವಶ್ಯಕ ಅಧ್ಯಯನ ವಲಯಗಳು:-

ಪ್ರಸ್ತುತ ಪರಿಸ್ಥಿತಿಯಲ್ಲಿನ ಅಂತರಾಷ್ಟ್ರೀಯ ವ್ಯಾಪಾರಿ ಕ್ಷೇತ್ರಗಳಲ್ಲಿ ಬದಲಾಗುತ್ತಿರುವ ಅಂಶಗಳನ್ನು ಪರಿಗಣಿಸಿ ಮುಂಬರುವ ದಿನಗಳಲ್ಲಿ ಕರ್ನಾಟಕ ರಾಜ್ಯದ ಅಭಿವೃದ್ದಿಯ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ವವ್ಯಾಪಾರ ಸಂಘಟನಾ ಸೆಲ್ ಈ ಕೆಳಗಿನ ಕ್ಷೇತ್ರಗಳಲ್ಲಿ ವಿಶೇಷ ಅಧ್ಯಯನ ಕೈಗೊಳ್ಳುವುದು ಅವಶ್ಯವಿದೆ.

ಅ) ಕರ್ನಾಟಕ ರಾಜ್ಯ ವ್ಯಾಪರದಲ್ಲಿ ತುಲನಾತ್ಮಕ ಅನುಕೂಲತೆ ಹೊಂದಿರುವ ಕೋಳಿ ಸಾಕಾಣಿಕೆ, ಹಾಲು ಮತ್ತು ಹಾಲಿನ ಉತ್ಪನ್ನಗಳು, ಜೇನು ಸಾಕಾಣಿಕೆ, ಅಣಬೆ ಕೃಷಿ, ವೆನಿಲಾ ಕೃಷಿ, ವ್ಯಾಪಾರ ಮತ್ತು ಅಭಿವೃದ್ದಿಗಳ ಕುರಿತು ಅಧ್ಯಯನ ಕೈಗೊಳ್ಳಬಹುದು.

ಆ) ಇತರೆ ವಸ್ತುಗಳಲ್ಲಿ ರಾಜ್ಯ ಸರ್ಕಾರ ರಫ್ತು ಮತ್ತು ಸ್ಪರ್ಧಾ ಅನುಕೂಲತೆ ಹೊಂದಿವೆ. ವಸ್ತುಗಳನ್ನು ವ್ಯಾಪಾರಕ್ಕೆ ಸೇರ್ಪಡೆ ಮಾಡಲು ಮತ್ತು ಅಭಿವೃದ್ದಿಪಡಿಸುವ ಬಗ್ಗೆ ಅಧ್ಯಯನದ ಅವಶ್ಯವಿದೆ.

ಇ) ಬೆಳೆಗಳ ತಳಿಶಾಸ್ತ್ರ(Crop genetics) ಹೊಸ ತಳಿಗಳು , ಕೊಯಿಲು ನಂತರದ ತಂತ್ರಜ್ಞಾನ ಮತ್ತು ವ್ಯಾಪಾರದ ಅವಶ್ಯಕತೆಗಳ ಬಗ್ಗೆ ಅಧ್ಯಯನ.

ಈ) ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಪರಿಸರ ನಾಶಕ್ಕೆ ಒಳಗಾಗಿರುವ ಪ್ರದೇಶಗಳು ಮತ್ತು ಅವುಗಳ ಸಂಪನ್ಮೂಲಗಳನ್ನು ಗುರುತಿಸುವುದು ಮತ್ತು ಈ ಅಧ್ಯಯನವು ವಿಶೇಷ ಪರಿಸರ ಪ್ರದೇಶವೆಂದು ಪರಿಗಣಿಸಿರುವ ಪಶ್ಚಿಮ ಘಟ್ಟ ಪ್ರದೇಶವನ್ನು ಒಳಗೊಂಡಿರಬೇಕು.

ಉ) ಸ್ಪರ್ಧಾತ್ಮಕ ಮತ್ತು ತುಲನಾತ್ಮಕ ಅನುಕೂಲತೆ ಹೊಂದಿರುವ ಮತ್ತು ರಫ್ತು ವ್ಯಾಪಾರದಲ್ಲಿ ವಿಶೇಷ ಪ್ರಾಮುಖ್ಯತೆ ಹೊಂದಿರುವ ಕರ್ನಾಟಕದ ಸರಕುಗಳನ್ನು ಗುರುತಿಸಿ ಅಧ್ಯಯನ ನಡೆಸುವುದು ಅವಶ್ಯವಿದೆ.

ಊ) ಪ್ರಾದೇಶಿಕ ವ್ಯಾಪಾರದ ಒಪ್ಪಂದಗಳು ಮತ್ತು ಬಹು ಪಕ್ಷೀಯ ವ್ಯಾಪಾರ ಒಪ್ಪಂದಗಳ ಪಾತ್ರಗಳನ್ನು ಸಾಪೇಕ್ಷ ಅನುಕೂಲ(Relative Advantag) ಗಳ ಅಧ್ಯಯನವನ್ನು ಕೈಗೊಳ್ಳುವುದು.

ಎ) ಸ್ಯಾನಿಟರಿ ಮತ್ತು ಫೈಟೋಸ್ಯಾನಿಟರಿ(SPS) ಕ್ರಮಗಳ ಕುರಿತು ಅಧ್ಯಯನ ಮತ್ತು ವ್ಯಾಪಾರದ ಭೌದ್ಧಿಕ ಆಸ್ತಿ ಹಕ್ಕುಗಳ ಅವಶ್ಯಕತೆಗಳ ಕುರಿತಾದ ಅಧ್ಯಯನವು ತಾಂತ್ರಿಕ ರಫ್ತಿನ ದೃಷ್ಟಿಯಿಂದ ಅತಿ ಮಹತ್ವ ಹೊಂದಿದೆ.

## 5.3 ಪರಿಶೀಲನೆಗೆ ನಿರ್ದಿಷ್ಟ ವಿಷಯಗಳುಃ-

- ಸಾರ್ವತ್ರಿಕ ಸಮತೋಲನದ ಅಧ್ಯಯನದ ಪ್ರಕಾರ ಗೋಧಿ, ಅಕ್ಕಿ, ಹಾಲಿನ ಉತ್ಪನ್ನಗಳು ಮತ್ತು ಕೃಷಿ ವಸ್ತುಗಳ ನಿವ್ವಳ ರಫ್ತುಹಾಗೂ ಆಹಾರೇತರ ಉತ್ಪನ್ನಗಳ ಆಮುದು ಅಧಿಕವಾಗಬಹುದು.
- ಅಂತರಿಕ ಸುಧಾರಣೆ(Intenal reforms) ಗಳ ಬಗೆಗಿರುವ ಕೆಟ್ಟ ಪರಿಣಾಮಗಳ ಬಗ್ಗೆ ಇರುವ ಜನರ ತಪ್ಪು ಅಭಿಪ್ರಾಯವನ್ನು ಪರಿಹರಿಸಿ ಜನರ ಮನದಲ್ಲಿ ಸಮತೋಲನ ದೃಷ್ಟಿ ಮೂಡಿಸುವುದು ಅವಶ್ಯವಿದೆ. ಸವಿಸ್ತಾರ ಯೋಜನಾ ತತ್ವಗಳನ್ನು ಕೈಗೆತ್ತಿಕೊಂಡು ಸದ್ಯದ ಪರಿಸ್ಥಿತಿಯಲ್ಲಿಯ ಪ್ರಮುಖ ಅಂಶಗಳನ್ನು ಸರಿಪಡಿಸುವುದು.
- ಕೆಲವು ಅವಶ್ಯ ಸಹಾಯಕ ಕ್ರಮಗಳಾದ ಬೆಳೆವಿಮೆ, ಬರಗಾಲ ನಿಯಂತ್ರಣ ವೆಚ್ಚದಬಗೆಗೆ ಗಮನ ಹರಿಸುವುದು ಕೃಷಿ ಕ್ಷೇತ್ರದಲ್ಲಿ ಸುಸ್ಥಿತಿಯ ಪರಿಣಾಮ ಬೀರುತ್ತದೆ.
- ಅಂತರಾಷ್ಟ್ರೀಯ ವ್ಯಾಪಾರದಲಲಿ ರಾಜ್ಯದ ಪಾತ್ರ ಮತ್ತು ಉದ್ಭವಿಸುವ ಪರಿಸ್ಥಿತಿಯ ಬಗ್ಗೆ ನಿರಂತರ ಸಲಹೆಗಳನ್ನು ಕೊಡಲು ರಾಜ್ಯಮಟ್ಟದಲ್ಲಿ ನೋಡಲ್ ಏಜನ್ಸಿ ಸ್ಥಾಪನೆಯ ಅವಶ್ಯಕತೆಯಿದೆ.
- ಸಹಕಾರಿ ಮತ್ತು ಔದ್ಯಮಿಕ ಕೃಷಿಗಳಿಗೆ ಉತ್ತಮ ಬೀಜಗಳು ಮತ್ತು ಇತರೆ ಬಂಡವಾಳ ಒದಗಿಸುವುದರಿಂದ ಸಣ್ಣ ಸೀಮಾಂತ ಹಿಡುವಳಿಗಳ ಕ್ರೋಡಿಕರಣ ಸಾಧಿಸಬಹುದು. ಈ ಕೃಷಿ ನೀತಿಗಳನ್ನು ರೈತರ ಪೂರ್ಣ ಸಹಯೋಗದಿಂದ ತೆಗೆದುಕೊಳ್ಳುವುದು.

- ಕೇಂದ್ರ ಮತ್ತು ರಾಜ್ಯ ಮಟ್ಟದಲಲಿ ಕೃಷಿಗೆ ಬಂಡವಾಳ ವೃದ್ದಿಸುವುದು ಅಗತ್ಯವಾಗಿದೆ. ಈಬಂಡವಾಳದಲ್ಲಿ ಖಾಸಗಿ ವಲಯವು ಬೆಳೆವಣಿಗೆ ದರ ವೃದ್ದಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.
- ರಫ್ತು ಉತ್ತೇಜನ ನೀಡುವುದಕ್ಕಾಗಿ ಉತ್ತಮ ಮೌಲ್ಯವಿರುವ ಬೆಳೆ ಕ್ಷೇತ್ರದ ನೈಪುಣ್ಯತೆಯ ಕಡೆಗೆ ಹೆಚ್ಚಿನ ಗಮನಹರಿಸುವುದು ಮಹತ್ವವಾಗಿದೆ.
- ಸಾಂಬಾರು ಸರಕು ಉದ್ಯಮವು ಫೈಟೋಸ್ಯಾನಿಟರಿ ಕ್ರಮಗಳ ಮೂಲಕ ಸುಂಕ ರಹಿತ ಅನುಕೂಲ ಹೊಂದಿದೆ. ಈ ವಸ್ತುಗಳ ಪರವಾಗಿ ಹೆಚ್ಚು ದಕ್ಷವಾದ ವದವನ್ನು ಮಂಡಿಸಬೇಕು.
- ಭಾರತ ಕಾಫಿಯು ಆರ್ ಕ್ರಾಟ್ರಾಕ್ಷಿಯನ್(orchratoxian) ಹೊಂದಿರುವ ಸ್ಥಿತಿಯಿದೆ. ಆರ್ಥಿಕ ಮತ್ತು ತಾಂತ್ರಿಕ ಅಂಶಗಳ ಬಗ್ಗೆ ಅವಶ್ಯಕ ಕ್ರಮ ಕೈಗೊಂಡು ಈ ಸಮಸ್ಯೆಗಳನ್ನು ಎದುರಿಸಬೇಕು.
- ಪರಿಸರ ನಾಶಕ್ಕೆ ಒಳಗಾಗಿರುವ ಉತ್ತರ ಕರ್ನಾಟಕದ ಪ್ರಾಂತಗಳಿಗೆ ಡಬ್ಲ್ಯೂ.ಟಿ.ಸಿ. ದಿಂದ ಬರುವ ಅನುಕೂಲಗಳನ್ನು ಪಡೆಯುವುದಕ್ಕೆ ಸಿದ್ದತೆ ಮಾಡಬೇಕಾಗಿದೆ.
- ಕರ್ನಾಟಕದಲ್ಲಿ ಬೀಜ ಉದ್ಯಮವು ಸದ್ಯದಲ್ಲಿ ಉದಯೋನ್ಮಕ ಹಂತದಲ್ಲಿದ್ದು, ಕೃಷಿ ಸಂಸ್ಕರಣಾ ಮತ್ತು ಬೀಜ ಉದ್ಯಮವು ಪೂರ್ಣ ಪ್ರಮಾಣದ ಉತ್ತೇಜನದೊಂದಿಗೆ ವಿಶ್ವಮಾರುಕಟ್ಟೆ ಪ್ರವೇಶಿಸಬೇಕಾಗಿದೆ.
- ಕೃಷಿ ಸಂಶೋಧನೆ ಮತ್ತು ಅಭಿವೃದ್ದಿಯಲ್ಲಿ ಬಂಡವಾಳವು ನಿರ್ಧಿಷ್ಟ ಮಟ್ಟದಲ್ಲಿಲ್ಲ. ಸಂಸ್ಕರಣಗೊಂಡ ಉತ್ಪನ್ನಗಳು ಪೈಪೋಟಿಯನ್ನು ಸಮರ್ಥವಾಗಿಎದುರಿಸಲು ಸಂಶೋಧನೆ ಮತ್ತು ಅಭಿವೃದ್ದಿಯನ್ನು ಬಲಪಡಿಸುವುದಕ್ಕಾಗಿ ಹೆಚ್ಚು ಬಂಡವಾಳ ಹೂಡಿಕೆ ಅವಶ್ಯವಿದೆ.
- ರೇಷ್ಮೆ ಕೃಷಿಯ ರಫ್ತು ಅಭಿವೃದ್ದಿಯ ಕಡೆಗೆ ಗಮನವಹಿಸಬೇಕಾಗಿದೆ. ರಾಜ್ಯದ ಹೂ ಕೃಷಿ, ರೇಷ್ಮೆ ಕೋಳಿ ಸಾಕಾಣಿಕೆ, ಎಣ್ಣೆಬೀಜಗಳು ಮತ್ತು ಕೃಷಿ ಸಂಸ್ಕರಣೆ ಕ್ಷೇತ್ರಗಳಿಂದ ಉತ್ತಮ ಅನುಕೂಲ ಪಡೆಯಬಹುದಾಗಿದೆ.
- ಕೃಷಿ ವಿಶ್ವವಿದ್ಯಾಲಯಗಳು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಕೃಷಿ ತಂತ್ರಜ್ಞಾನದಬಗ್ಗೆ ಸಂಶೋಧನೆ ಮತ್ತು ಅಭಿವೃದ್ದಿ ಕ್ರಮಗಳನ್ನು ಕೈಗೊಳ್ಳಬೇಕು. ಕೃಷಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು, ಸ್ಯಾನಿಟರಿ ಮತ್ತು ಫೈಟೋಸ್ಯಾನಿಟರಿ ಕ್ರಮಗಳು ಟ್ರಿಪ್ಸ್ (Trips) ಗಳ ಸ್ಥಳೀಯ ಅವಶ್ಯಕತೆಗಳ ಕಡೆಗೆ ಗಮನ ಹರಿಸಬೇಕು.
- ಮಾರುಕಟ್ಟೆ ಪರಿಮಿತ ತತ್ವಗಳಿಂದ ಭಾರತದ ಆಹಾರ ಕೊರತೆ, ಗ್ರಾಮೀಣ ಉದ್ಯೋಗ ವಾತಾವರಣದ ರಕ್ಷಣೆಗಳನ್ನು ಅಲಕ್ಷಿಸಬಾರದೆಂದು ವಿಶ್ವವ್ಯಾಪಾರ ಸಂಘಟನೆ ಸೆಲ್ ಶಿಫಾರಸ್ಸು ಮಾಡುತ್ತದೆ.
- ಮಾರುಕಟ್ಟೆಯ ತತ್ವಗಳ ಬಗ್ಗೆ ಸರಕಾರವು ಮೂಲಭೂ ಸೌಕರ್ಯಗಳಿಗೆ ಸಾಲ ಸೃಷ್ಟಿ ಒದಗಿಸಲು ಅವಶ್ಯಕ ಕ್ರಮ ಕೈಗೊಳ್ಳಬೇಕಾಗಿದೆ. ಇವುಗಳು ಮಾರುಕಟ್ಟೆ ಸ್ಥಿರತೆಯಿಂದ ಆಶಕ್ತ ಪಂಗಡಗಳಿಗೆ ಉತ್ತಮ ಆದಾಯ ತರುವಲ್ಲಿ ಸಹಾಯವಾಗುತ್ತದೆ.
- ಬಾಂಡೆಡ್ ಸುಂಕ(Bonded tariffs) ಮಟ್ಟವನ್ನು ನಿರ್ಧರಿಸಲು ಭಾರತ ಸರಕಾರವು ಅನುರೂಪದ ಸಮಂಜಸವಾದ ಉತ್ಪಾದನಾ ಕ್ಷೇತ್ರ , ರಫ್ತು ಸ್ಪರ್ಧೆ, ಸ್ವದೇಶಿ ಮಾರುಕಟ್ಟೆಯ ಸುಧಾರಣೆಗಳ ಬಗ್ಗೆ ಗಮನವಿಡುವುದು ಅವಶ್ಯಕವಾಗಿದೆ.
- ರಾಜ್ಯ ವ್ಯಾಪಾರಿ ಘಟಕಗಳು ನರಂತರವಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುವುದು ಅಗತ್ಯವಿದೆ. ಈ ರೀತಿಯ ಕ್ರಮಗಳು ಮುಂದುವರೆಯಯತ್ತಿದ್ದರೆ ಸ್ವದೇಶಿ ಮತ್ತು ವಿದೇಶಿ ಮಾರುಕಟ್ಟೆಯ ಬೇಡಿಕೆಗಳಿಗೆ ಸಾಧನವಾಗುತ್ತದೆ.

- ಪ್ರಸ್ತಾಪಿತ ತೆರಿಗೆ ದರಗಳು ಪೂರ್ಣ ಪಾರದರ್ಶಕಗಳನ್ನು ಹೊಂದಿರಬೇಕು ಮತ್ತು ರಾಜ್ಯ ಸರಕಾರಗಳ ಜೊತೆಗೆ ಪರಾಮರ್ಶಿಸಬೇಕು. ವಿಶೇಷವಾಗಿ ಹೆಚ್ಚು ವಸ್ತುಗಳನ್ನು ಉತ್ಪಾದಿಸುವ ರಾಜ್ಯಗಳ ಜೊತೆಗೆ ಪರಾಮರ್ಶಿಸಿ ನಿರ್ಧರಿಸಬೇಕು.
- ಭಾರತವು ಅಭಿವೃದ್ಧಿ ಪಟ್ಟಿಗೆ(Development Box) ಗಾಗಿ ಪ್ರಯತ್ನಿಸಬೇಕು.
- ಅಂತರಿಕ ಸುಧಾರಣೆಗಳ ಬಗ್ಗೆ ಜನರ ಮನಸ್ಸಿನಲ್ಲಿರುವ ಈ ಕೆಟ್ಟ ಭಾವನೆಯನ್ನು ಹೊಡೆದೋಡಿಸಿ ಯೋಜನೆಗಳಿಂದ ಮಾರ್ಪಡುವ ಮತ್ತು ಪ್ರಯೋಜನಗಳಿಂದ ಉಂಟಾಗುವ ಲಾಭದ ಬಗ್ಗೆ ತಿಳುವಳಿಕೆ ಮೂಡಿಸಿ ಸಧ್ಯದ ಪರಿಸ್ಥಿತಿಯನ್ನು ಸರಿಪಡಿಸುವುದು ಅವಶ್ಯವಿದೆ.
- ರಾಜ್ಯದಲ್ಲಿ ರಫ್ತು ವಸ್ತುಗಳ ಬೆಳವಣಿಗೆಯ ದರದಲ್ಲಿ ಇಳಿತವು ಕಂಡು ಬರುತ್ತಿದ್ದು ಉತ್ಪಾದನಾ ಕ್ಷೇತ್ರಕ್ಕೆ ಆರ್ಥಿಕ ಸಹಾಯ ಮತ್ತು ಹಿಡುವಳಿದಾರರನ್ನು ಈ ಕ್ಷೇತ್ರಕ್ಕೆ ತರುವುದರಿಂದ ರಫ್ತು ಬೆಳೆವಣಿಗೆಯ ದರವನ್ನು ಹೆಚ್ಚಿಸಬಹುದು.
- ಕೃಷಿ ಕ್ಷೇತ್ರವನ್ನು ಸಮವರ್ತಿಸೂಚಿ(Concurrent List) ಯಲ್ಲಿ ಸೇರ್ಪಡಿಸುವುದು ಸೂಕ್ತ. ಇದರಿಂದ ಕೃಷಿ ನೀತಿಯು ಹೆಚ್ಚು ಪರಿಣಾಮಕಾರಿಯಾಗುತ್ತದೆ.
- ವಿಶ್ವವ್ಯಾಪಾರ ಸಂಘಟನೆಯ ಸಂಧಾನಗಳಲ್ಲಿ ಭಾಗಿಯಾಗುವ ಮೊದಲು ಹಲವಾರು ಹಂತಗಳಲ್ಲಿ ಸೂಕ್ಷ್ಮ ಕ್ರಮ ಕೈಗೊಳ್ಳುವುದು ಅಗತ್ಯವಿದೆ. ಈ ಕುರಿತಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಹಂತದಲಲಿ ಚರ್ಚೆ ನಡೆಯಬೇಕಾಗಿದೆ.
- ವಿಶ್ವ ವ್ಯಾಪಾರ ಸಂಘಟನೆ ಸೆಲ್ ವು ವ್ಯಾಪಾರಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಬೇಕು ಮತ್ತು ವ್ಯಾಪಾರ ವಾತಾವರಣವನ್ನು ಅಭಿವೃದ್ಧಿಗೊಳಿಸಲು ಸ್ವದೇಶ ವ್ಯಾಪಾರಕ್ಕೆ ಸಂಬಂಧಿಸಿದ ವಸ್ತುಗಳ ಬಗ್ಗೆ ಅಂಕಿ ಅಂಶಗಳನ್ನು ಶೇಖರಿಸಿ ರೈತರಿಗೆ, ವ್ಯಪಾರಸ್ಥರಿಗೆ ಮತ್ತು ಸರ್ಕಾರಕ್ಕೆ ಸೂಕ್ತ ಮಾಹಿತಿ ಕೊಡುವುದರಿಂದ ವ್ಯಾಪಾರ ಕ್ಷೇತ್ರವು ಹೆಚ್ಚು ಸಾಮರ್ಥ್ಯ ಹೊಂದಲು ಸಹಾಯವಾಗುತ್ತದೆ. ಈ ಮಾಹಿತಿಗಳಿಂದ ಪಣ ಒಡ್ಡುವವರು ಮುಂಬರುವ ಅಡೆತಡೆಗಳಿಗೆ ಸ್ಪಂದಿಸಲು ಸಹಕಾರಿಯಾಗುತ್ತದೆ.
- ವಿಶ್ವವ್ಯಾಪಾರ ಸಂಘಟನೆ ಸೆಲ್ ತನ್ನ ವರದಿಯನ್ನು ಸ್ಥಳೀಯ (ಕನ್ನಡ ) ಭಾಷೆಗೆ ತುರ್ಜುಮೆ, ಮಾಡಿ ರೈತರಿಗೆ, ವ್ಯಾಪಾರಸ್ಥರಿಗೆ ಅದರ ಉಪಯೋಗವನ್ನು ಪಡೆಯಲು ಸಹಕಾರಿಯಾಗುವುದಲ್ಲದೆ, ನಿರಂತರವಾಗಿ ಲಘು(bulletin) ರೂಪದಲ್ಲಿ ಮಾಹಿತಿ ಒದಗಿಸಬೇಕು.